03 March 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮಗೆ ನಿಜವಾಗಿಯೂ ಒಳ್ಳೆಯ ಮನಸ್ಸಿದ್ದರೆ, ಶತ್ರುಗಳ ಶಾಪವೂ ವರವಾಗಿ ಬದಲಾಗುತ್ತದೆ!

-ಸ್ನೇಹಾ ಆನಂದ್

info.varthaman@gmail.com



ಕೆಪಿಎಸ್ ಮ್ಯಾಗ್ನೆಟ್ ಶಾಲೆ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಸರಿಯಲ್ಲ — ಪುಟ ಸಂ. 2


ಸಮಾನತೆ ಅಂಬೇಡ್ಕರ್ ಆಶಯ: ಚಿಂತಕ ಡಾ. ದೇವರಾಜ್ ಹೇಳಿಕೆ — ಪುಟ ಸಂ. 3


ಎಚ್.ಡಿ.ಕೋಟೆ: ಮದ್ಯದಂಗಡಿ ತೆರೆಯದಂತೆ ಮಹಿಳೆಯರ ಮನವಿ — ಪುಟ ಸಂ. 4


9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 112 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಚಂದ್ರಗ್ರಹಣ: ಮಹದೇಶ್ವರನ ದರ್ಶನಕ್ಕೆ ನಿರ್ಬಂಧವಿಲ್ಲ



**ಹನೂರು:** ಚಂದ್ರಗ್ರಹಣ ಇದ್ದರೂ ಶ್ರೀ ಮಲೆ ಮಹದೇಶ್ವರ ಸ್ವಾಮಿ ದರ್ಶನಕ್ಕೆ ಯಾವುದೇ ತೊಂದರೆ ಇಲ್ಲ. ಮಾರ್ಚ್ 3ರಂದು ಮಂಗಳವಾರ ಮಧ್ಯಾಹ್ನದಿಂದ ಚಂದ್ರಗ್ರಹಣ ಇದ್ದರೂ ಭಕ್ತಾದಿಗಳು ಎಂದಿನಂತೆ ದರ್ಶನ ಮಾಡಬಹುದು ಎಂದು ಪ್ರಾಧಿಕಾರದ ಕಾರ್ಯದರ್ಶಿ ಎ.ಈ ರಘು ತಿಳಿಸಿದರು.

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಪುಟ 2ಕ್ಕೆ

## ಮಕ್ಕಳ ವಯಸ್ಸಿನ ಮಿತಿ ಸಡಿಲಿಕೆಗೆ ಆಗ್ರಹ

**ಬೆಂಗಳೂರು:** ಒಂದನೇ ತರಗತಿಗೆ ದಾಖಲಾಗುವ ಮಕ್ಕಳಿಗೆ 6 ವರ್ಷ ವಯಸ್ಸಿನ ಮಿತಿಯನ್ನು ಈ ವರ್ಷವೂ ಸಡಿಲ ಮಾಡಬೇಕು ಎಂದು ಮತ್ತೆ ಪೋಷಕರು ಸರ್ಕಾರವನ್ನ ಒತ್ತಾಯಿಸಿದ್ದಾರೆ. ವಯಸ್ಸಿನ ಮಿತಿ ಸಡಿಲ ಮಾಡುವಂತೆ ಒತ್ತಾಯಿಸಿ ಪೋಷಕರು ಮತ್ತು ವಿದ್ಯಾರ್ಥಿಗಳು ಸರ್ಕಾರ ಮತ್ತು ಶಾಲಾ ಶಿಕ್ಷಣ ಇಲಾಖೆಗೆ ಮನವಿ ಮಾಡಿದರು. ಮಕ್ಕಳು ಪೋಸ್ಟರ್ ಹಿಡಿದು ವಯಸ್ಸಿನ ಮಿತಿ ಸಡಿಲ ಮಾಡಿ ಎಂದು ಮನವಿ ಮಾಡಿದರು. ಈ ವರ್ಷದ ದಾಖಲಾತಿಗೆ 90 ದಿನಗಳ ಸಡಿಲಿಕೆ ಕೊಡಬೇಕು. ವಯಸ್ಸಿನ ಸಡಿಲಿಕೆ ಸಮಸ್ಯೆಯಿಂದ 2.30 ಲಕ್ಷ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗುತ್ತದೆ. ರಾಜ್ಯ ಶಿಕ್ಷಣ ನೀತಿ ಪ್ರಕಾರ 90 ದಿನ ಸಡಿಲಿಕೆ ಕೊಡುವ ಅವಕಾಶ ಇದೆ ಎಂದು ಹೇಳಿದರು.


## ಅಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಪ್ರತೀಕಾರ

# ಮಧ್ಯಪ್ರಾಚ್ಯ ಧಗಧಗ

### ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಚೇರಿ ಮೇಲೆ ದಾಳಿ



**ಟೆಲ್‌ಅವೀವ್:** ಟೆಲ್ ಅವೀವ್‌ನಲ್ಲಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಚೇರಿ ಮೇಲೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಸೋಮವಾರ ದಾಳಿ ನಡೆಸಿದೆ.




ಅಮೆರಿಕ– ಇಸ್ರೇಲ್ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಪ್ರತೀಕಾರವಾಗಿ ಇಸ್ರೇಲ್ ಮತ್ತು ಮಧ್ಯ ಪ್ರಾಚ್ಯ ರಾಷ್ಟ್ರಗಳ ಮೇಲೆ ಇರಾನ್ ತನ್ನ ದಾಳಿ ಯನ್ನು ತೀವ್ರಗೊಳಿಸಿದೆ. ಇಸ್ರೇಲ್ ಪ್ರಧಾನಿ ಬೆಂಜ ಮಿನ್ ಪುಟ 2ಕ್ಕೆ

- ಖಮೈನಿ ಹತ್ಯೆಗೆ ಇರಾನ್ ಪ್ರತೀಕಾರ
- ಭೀಕರ ದಾಳಿ ನಡೆಸಿರುವ ಇಸ್ರೇಲ್
- ಅಮೇರಿಕಾ, ಇರಾನ್ ನಿಂದಲೂ ಪ್ರತಿದಾಳಿ
- ಬಾಂಬ್ ದಾಳಿಯಲ್ಲಿ ಖಮೈನ್ ಪತ್ನಿ ಸಾವು
- ಇರಾನ್ ಮೇಲೆ 100 ಯುದ್ಧ ವಿಮಾನಗಳಿಂದ ದಾಳಿ
- ವಿಶ್ವದ ದೈತ್ಯ ತೈಲ ಕಂಪನಿ ಸೌದಿಯ ಅರೋಮ್ಕೊ ಮೇಲೆ ಇರಾನ್ ಬಾಂಬ್ ದಾಳಿ , ಧ್ವಂಸ
- ಆಯಿಲ್ ಟ್ಯಾಂಕರ್ ಮೇಲೆ ದಾಳಿ ಭಾರತೀಯನ ಸಾವು

## ಕನ್ನಡಿಗರ ಸುರಕ್ಷತೆಗೆ ಆದ್ಯತೆ: ಸಿಎಂ

**ಬೆಂಗಳೂರು:** ಇರಾನ್ ಮೇಲೆ ಅಮೆರಿಕ–ಇಸ್ರೇಲ್ ನಡೆಸಿದ ದಾಳಿ ಬಳಿಕ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಸಿಲುಕಿಕೊಂಡಿರುವ ಕನ್ನಡಿಗರ ಸುರಕ್ಷತೆ ಮತ್ತು ಯೋಗಕ್ಷೇಮಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪ್ರಸ್ತುತ ಸುಮಾರು 100 ಮಂದಿ ಕನ್ನಡಿಗರು ದುಬೈನಲ್ಲಿ (ಯುಎ ಇ) ಮತ್ತು 9 ಮಂದಿ ಬಹ್ರೇನ್‌ನಲ್ಲಿ ಸಿಲುಕಿಕೊಂಡಿದ್ದಾರೆ. ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ (ಎಸ್ ಇಒಸಿ) ಮತ್ತು ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರಗಳು (ಡಿಇಒಸಿ) 24*7 ಸಕ್ರಿಯಗೊಂಡಿವೆ. ನಾವು ವಿದೇಶಾಂಗ ಸಚಿವಾಲಯ, ನಾಗರಿಕ ವಿಮಾ ನಯಾನ ಸಚಿವಾಲಯ, ಭಾರತೀಯ ರಾಯಭಾರ ಕಚೇರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ ಎಂದು ಅವರು ಟ್ವೀಟ್ ಮಾಡಿ ತಿಳಿಸಿದ್ದಾರೆ. ಕನ್ನಡಿಗರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ನೆರವು ಕೋರಿ ಮುಖ್ಯ ಕಾರ್ಯದರ್ಶಿ ಭಾರತ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಸಂಘರ್ಷ ಪೀಡಿತ ಪ್ರದೇಶದಲ್ಲಿರುವ ಸಹೋದರ ಸಹೋದರಿಯರಿಗೆ, ದಯವಿಟ್ಟು ಶಾಂತವಾಗಿರಿ. ಸ್ಥಳೀಯ ಅಧಿಕಾರಿಗಳು ಮತ್ತು ಭಾರತೀಯ ರಾಯಭಾರ ಕಚೇರಿಗಳು ನೀಡುವ ಸಲಹೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ. ಸಹಾಯವಾಣಿ ಸಂಖ್ಯೆಗಳ ಮೂಲಕ ಸಂಬಂಧಪಟ್ಟ ರಾಯಭಾರ ಕಚೇರಿಯಲ್ಲಿ ಪುಟ 2ಕ್ಕೆ



## ಡಿಕೆಶಿ ಬಣದ ಮೇಲೆ 'ಸ್ಪೈಕಣ್ಣು'

### *ವಿರೋಧಿ ಕೂಟದ ಸಚಿವರು, ಶಾಸಕರ ಹಿಂದೆ ಗುಪ್ತಚರ ಅಧಿಕಾರಿಗಳು



**ಬೆಂಗಳೂರು:** ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಹುದ್ದೆಗಾಗಿ ಲಾಬಿ ನಡೆಸುತ್ತಿರುವ ನಡುವೆಯೇ ಡಿಕೆಶಿ ಬೆಂಬಲಿಗ ಸಚಿವರು ಮತ್ತು ಶಾಸಕರನ್ನು ಟಾರ್ಗೆಟ್ ಮಾಡಿ ರಾಜ್ಯದ ಗುಪ್ತಚರ ಇಲಾಖೆ ಕಣ್ಣಿಟ್ಟಿದೆ. ವಿರೋಧಿ ಬಣದ ನಡೆಯನ್ನು ಅರಿಯಲು ಗುಪ್ತಚರ ಇಲಾಖೆಯನ್ನು ಬಳಕೆ ಮಾಡಲಾಗುತ್ತಿದೆ ಎನ್ನಲಾಗಿದೆ.


ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಣ ಹೆಚ್ಚಿನ ಶಾಸಕರ ಬೆಂಬಲವನ್ನು ಗಳಿಸುತ್ತಿದೆ ಮತ್ತು ಅವರ ಸಂಖ್ಯೆ ಹೆಚ್ಚುತ್ತಿದೆ ಎಂಬ ಹಿನ್ನೆಲೆಯಲ್ಲಿ ಅವರ ಮೇಲೆ ನಿಗಾ ಇಡಲು ರಾಜ್ಯದ ಗುಪ್ತಚರ ಯಂತ್ರ ಬಳಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಇದನ್ನು ಪುಷ್ಟೀಕರಿಸುವಂತೆ ಸರ್ಕಾರ ಸ್ವಪಕ್ಷೀಯ ಶಾಸಕರು ಮತ್ತು ಸಚಿವರ ಫೋನ್ ಕದ್ದಾಲಿಕೆ ಮಾಡುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಬಾಂಬ್ ಸಿಡಿಸಿದ್ದಾರೆ.

ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹುಟ್ಟುಹಬ್ಬದ ನೆಪದಲ್ಲಿ ಡಿ.ಕೆ ಶಿವಕುಮಾರ್ ಕ್ಯಾಂಪ್ ಹೋಟೆಲ್‌ನಲ್ಲಿ ಭೋಜನಕ್ಕೆ 40ಕ್ಕೂ ಹೆಚ್ಚು ಶಾಸಕರು ಒಟ್ಟುಗೂಡಿದ ನಂತರ, ಸಿದ್ದರಾಮಯ್ಯ

## ಅವರದ್ದೇ ಶಾಸಕರು, ಸಚಿವರ ಫೋನ್ ಟ್ಯಾಪಿಂಗ್: ಎಚ್‌ಡಿಕೆ

**ಮೈಸೂರು:** ರಾಜ್ಯದಲ್ಲಿ ಎಲ್ಲ ಸರ್ಕಾರಗಳ ಅವಧಿಯಲ್ಲೂ ಫೋನ್ ಟ್ಯಾಪಿಂಗ್ ಇತ್ತು. ಆದರೆ ಅವರದ್ದೇ ಶಾಸಕರು–ಸಚಿವರ ಮೇಲೆ ಗುಪ್ತಚಾರಿಕೆ ಮಾಡುತ್ತಿರುವುದು ಇದೇ ಮೊದಲು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೆಲವರು ಫೋನ್ ಟ್ಯಾಪಿಂಗ್ ಮಾಡಿಯೂ ಪತಿವ್ರತೆಯರಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ನಾನು ಸ' ತ' ' ವ ನ್ನೇ' ಪುಟ 2ಕ್ಕೆ



## ಮೈಸೂರು ರೇಷ್ಮೆ ಕಾರ್ಖಾನೆ ಮುಚ್ಚಲ್ಲ: ಸಚಿವ ಮಹದೇವಪ್ಪ

**ಮೈಸೂರು:** ತಿ.ನರಸೀಪುರದ ಮೈಸೂರು ರೇಷ್ಮೆ ಕಾರ್ಖಾನೆಯನ್ನು ಮುಚ್ಚುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಭರವಸೆ ನೀಡಿದರು.

ನಗರದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ವಿಷಯದಲ್ಲಿ ಕೆಲವರು ಅನಗತ್ಯವಾಗಿ ಗೊಂದಲ ಸೃಷ್ಟಿಸುತ್ತಿದ್ದಾರೆ. ರೇಷ್ಮೆ ಮಾರುಕಟ್ಟೆಗೆಂದು ಮೀಸಲಿಟ್ಟಿ ಹಾಗೂ ಇದುವರೆಗೂ ಬಳಸಿಲ್ಲದಿದ್ದ ಒಂದೂವರೆ ಎಕರೆ ಜಾಗವನ್ನು ಮಾತ್ರವೇ ಕ್ರೀಡಾಂಗಣಕ್ಕೆ ಬಳಸಲು ತೀರ್ಮಾನಿಸಿದ್ದೇವೆ. ಈಗ, ಆ ಆದೇಶವನ್ನೂ ಮರು ಪರಿಶೀಲಿಸುತ್ತೇವೆ ಎಂದು ತಿಳಿಸಿದರು.

ರೇಷ್ಮೆ ಕಾರ್ಖಾನೆಗೆ ತೊಂದರೆ ಆದಲ್ಲಿ, ಆ ಜಾಗದಲ್ಲಿ ಕ್ರೀಡಾಂಗಣ ಮಾಡುವುದಿಲ್ಲ. ನಮಗೆ ರೇಷ್ಮೆ ಕಾರ್ಖಾನೆ ಮುಖ್ಯ. ಸರ್ಕಾರಕ್ಕೆ ಈ ವಿಚಾರದಲ್ಲಿ ಯಾವ ಪ್ರತಿಷ್ಠೆಯೂ ಇಲ್ಲ. ಕೆಲವರು ಈ ವಿಚಾರದಲ್ಲಿ ಹುಡುಗಾಟ ಆಡುತ್ತಿದ್ದಾರೆ. ಕಾರ್ಖಾನೆ ಕಾರ್ಮಿಕರು ಆತಂಕಪಡುವುದು ಬೇಡ. ಸಾರ್ವಜನಿಕರಿಗೂ ಆತಂಕ ಬೇಡ ಎಂದು ತಿಳಿಸಿದರು.



ರೇಷ್ಮೆ ಕಾರ್ಖಾನೆ ಬೆಳವಣಿಗೆಗೆ ನಮ್ಮ ಸರ್ಕಾರ ಹೆಚ್ಚು ಒತ್ತು ಕೊಟ್ಟಿದೆ. ವಿಚಾರ ಗೊತ್ತಿಲ್ಲದವರು ಬಾಯಿಗೆ ಬಂದಂತೆ ಮಾತನಾಡಿದರೆ ಏನು ಮಾಡುವುದು? ರೇಷ್ಮೆ ಕಾರ್ಖಾನೆಗೆ ಕುಂದು ಬಾರದಂತೆ ಕಾಪಾಡುವುದು ನಮ್ಮ ಜವಾಬ್ದಾರಿ. ಇದರಲ್ಲಿ ಯಾವುದೇ ಅನುಮಾನ ಬೇಡ ಎಂದು ಹೇಳಿದರು. ಪುಟ 2ಕ್ಕೆ

## ಕುಡಿಯುವ ನೀರಿನ ಸಮಸ್ಯೆ ಆಗದಂತೆ ನಿಗಾವಹಿಸಿ

### ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಸೂಚನೆ

**ಮೈಸೂರು:** ಜಿಲ್ಲೆಯ ಜನರಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಿ ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ಕುಡಿಯುವ ನೀರಿನ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿಗಳಿವೆ. ತಹಶೀಲ್ದಾರ್ ತಮ್ಮ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾಗಬಹುದಾದ ಗ್ರಾಮಗಳನ್ನು ಪಟ್ಟಿ ಮಾಡಿಕೊಳ್ಳಿ ಎಂದು ಹೇಳಿದರು.

ಲಭ್ಯವಿರುವ ಬೋರ್‌ವೆಲ್‌ಗಳ ಸ್ಥಿತಿಗತಿ ಪರಿಶೀಲಿಸಿ. ಖಾಸಗಿ ಬೋರ್ ವೆಲ್ ಗಳನ್ನು ಪಟ್ಟಿ ಮಾಡಿ. ಕುಡಿಯುವ ನೀರಿನ ತೊಂದರೆಯಾದಲ್ಲಿ ತಕ್ಷಣ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಮನಕ್ಕೆ ತನ್ನಿ ಎಂದರು. ಬೇಸಿಗೆ ಕಾಲದಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಿದೆ. ವೈದ್ಯಾಧಿಕಾರಿಗಳು ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಯೋಜನೆ ರೂಪಿಸಿ ಎಂದು ಸೂಚಿಸಿದರು.

ಶಾಸಕ ತನ್ವೀರ್ ಸೇಠ್ ಅವರು ಮಾತನಾಡಿ ಜೆ.ಜೆ.ಎಂ. ಹಾಗೂ ಎಂ.ವಿ.ಎಸ್ ಯೋಜನೆಯಡಿ ಒದಗಿಸಲಾಗುತ್ತಿರುವ ಕುಡಿಯುವ ನೀರಿನ ಯೋಜನೆಗಳ ಕಾರ್ಯನಿರ್ವಹಣೆಯ ಬಗ್ಗೆ ಅಧಿಕಾರಿಗಳು ಪರಿಶೀಲಿಸಬೇಕು. ಮುಂದೆ ಬರಗಾಲ ಉಂಟಾದರೆ ವಹಿಸಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳು ಸಭೆ ನಡೆಸಿ ಪುಟ 2ಕ್ಕೆ



### ಜೂನ್ ವರೆಗೆ ನೀರು ಲಭ್ಯ

ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರಿನ ಲಭ್ಯತೆಯ ಅನುಸಾರ ಜೂನ್ ಅಂತ್ಯದವರೆಗೂ ಕುಡಿಯುವ ನೀರಿಗೆ ತೊಂದರೆಯಿಲ್ಲ. ವಾಡಿಕೆಯ ಪ್ರಕಾರ ಮಳೆ ನಿರೀಕ್ಷಿಸಲಾಗಿದೆ. ಆದರಿಂದ ಕುಡಿಯುವ ನೀರಿಗೆ ತೊಂದರೆಯಾಗುವುದಿಲ್ಲ ಎಂದು ಕಾವೇರಿ ನೀರಾವರಿ ನಿಗದಮ ಮುಖ್ಯ ಅಭಿಯಂತರ ಮಹೇಶ್ ಮಾಹಿತಿ ಪುಟ 2ಕ್ಕೆ

## ಪಿಯು ವಿದ್ಯಾರ್ಥಿನಿ ಮೇಲೆ ಹಲ್ಲೆ

**ಮೈಸೂರು:** ದ್ವೇಷದ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಬಾರದು ಎಂದು ಆಕೆಯ ಮೇಲೆ ಸೋದರ ಮಾವನೇ ಹಲ್ಲೆ ನಡೆಸಿರುವ ಘಟನೆ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಪಾಳ್ಯಾ ಗ್ರಾಮದಲ್ಲಿ ನಡೆದಿದೆ.

ಪೂರ್ಣಿಮಾ ಹಲ್ಲೆಗೆ ಒಳಗಾದ ವಿದ್ಯಾರ್ಥಿನಿ. ಆಕೆ ಪಿಯುಸಿ ಪರೀಕ್ಷೆ ಮುಗಿಸಿ ಮನೆಗೆ ಬಂದಾಗ ವಿದ್ಯಾರ್ಥಿನಿಯ ಸೋದರ ಮಾವ ಸೋಮಣ್ಣ ಎಂಬಾತ ಏಕಾಏಕಿ ಮನೆಗೆ ನುಗ್ಗಿ ದೊಣ್ಣೆಯಿಂದ ಹಲ್ಲೆ ಮಾಡಿದ್ದಾನೆ. ಹಳೇ ದ್ವೇಷದ ಹಿನ್ನಲೆ ನೀನು ಓದಬಾರದು ಅಂತ ಹಲ್ಲೆ ಮಾಡಿದ್ದಾನೆ. ಯುವತಿಯ ನೆರವಿಗೆ ಬಂದ ಕುಟುಂಬಸ್ಥರ ಮೇಲೆಯೂ ಹಲ್ಲೆ ಮಾಡಿದ್ದಾನೆ. ಪೂರ್ಣಿಮಾ ಓದಬಾರದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬಾರದು ಎಂದು ಸೋದರ ಮಾವ ಸೋಮಣ್ಣ ಹಲ್ಲೆ ಮಾಡಿದ್ದಾನೆಂದು ದೂರು ದಾಖಲಾಗಿದೆ. ಪೂರ್ಣಿಮಾಳನ್ನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋಮಣ್ಣ ಸೇರಿ 7 ಜನರ ವಿರುದ್ಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿದೆ.



ದ್ವಿತೀಯ ಪಿಯುಸಿ ಪರೀಕ್ಷೆ ಬರೆಯದಂತೆ ಸೋದರ ಮಾವನೇ ಹಲ್ಲೆ

## ಶ್ರೀಮಂತರು ಗ್ಯಾರಂಟಿ ಬಿಡಿ

### ಸಚಿವ ಎಂ.ಬಿ.ಪಾಟೀಲ್ ಆಗ್ರಹ



ಬೆಂಗಳೂರು: ಶ್ರೀಮಂತರು ಸ್ವಯಂಪ್ರೇರಿತರಾಗಿ ಗ್ಯಾರಂಟಿ ಯೋಜನೆ ಲಾಭ ಪಡೆಯುವುದು ಬಿಟ್ಟುಕೊಡಬೇಕು ಎಂದು ಸಚಿವ ಎಂ.ಬಿ.ಪಾಟೀಲ್ ಆಗ್ರಹ ಮಾಡಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶ್ರೀಮಂತರು ಗ್ಯಾರಂಟಿ ತೆಗೆದುಕೊಳ್ಳುತ್ತಿದ್ದರೆ ಅದು ತಪ್ಪು ಎನ್ನುವ ಡಿ.ಕೆ ಸುರೇಶ್ ಹೇಳಿಕೆಯನ್ನ ಸಮರ್ಥಿಸಿದರು. ಸ್ವಯಂ ಪ್ರೇರಿತರಾಗಿ ಶ್ರೀಮಂತರು ಗ್ಯಾರಂಟಿ ಯೋಜನೆ ಲಾಭ ಪಡೆಯೋದು ಬಿಡ ಬೇಕು ಅಂತ ನಾನೂ ಒತ್ತಾಯಿಸುತ್ತೇನೆ. ಶ್ರೀಮಂ ತರು ಗ್ಯಾರಂಟಿ ಯೋಜನೆ ತೆಗೆದುಕೊಳ್ಳುತ್ತಿದ್ದರೆ ಬಿಡಬೇಕು. ಅರ್ಹ ಬಿಪಿಎಲ್ ಕುಟುಂಬದವರು ಗ್ಯಾರಂಟಿ ಯೋಜನೆ ತೆಗೆದುಕೊಳ್ಳಲಿ. ಶ್ರೀಮಂತರು ಗ್ಯಾರಂಟಿ ಯೋಜನೆ ಪಡೆಯಬಾರದು ಅನ್ನೋದು ನನ್ನ ಅಭಿಪ್ರಾಯವೂ ಹೌದು ಎಂದು ತಿಳಿಸಿದರು. ಇನ್ನೂ ಗ್ಯಾರಂಟಿ ಯೋಜನೆ ರಾಜ್ಯ ಸರ್ಕಾರಕ್ಕೆ ಹೊರೆಯಾಗುತ್ತಿದೆ ಎನ್ನುವ ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, ಪುಟ 2ಕ್ಕೆ

## ರಸ್ತೆ ಅಗಲೀಕರಣಕ್ಕೆ ಸೂಚನೆ




**ಮೈಸೂರು:** ಮೈಸೂರು ನಗರ ವೇಗವಾಗಿ ಬೆಳೆಯುತ್ತಿದೆ. ನಗರದ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲು ರಸ್ತೆಗಳ ಅಗಲೀಕರಣ ಅತ್ಯವಶ್ಯಕ. ಅಗತ್ಯವಿರುವ ರಸ್ತೆ ಅಗಲೀಕರಣ ಕಾಮಗಾರಿ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಸ್ತೆ ಅಗಲೀಕರಣ ಕಾಮಗಾರಿಗಳ ಕುರಿತ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರಸ್ತೆ ಅಗಲೀಕರಣಕ್ಕೆ ಅಗತ್ಯ ಇರುವ ಜಾಗಕ್ಕೆ ಕುರಿತಂತೆ ಸಂಬಂಧಿಸಿದ ಇಲಾಖೆಗೆ ಪತ್ರ ಬರೆದು ಎನ್ ಒ ಸಿ ಪಡೆದು ರಸ್ತೆ ಕಾಮಗಾರಿ ಪ್ರಾರಂಭಿಸಿ. ಖಾಸಗಿ ಜಾಗ ಇದ್ದ ಪ್ರದೇಶದಲ್ಲಿ ಪುಟ 2ಕ್ಕೆ

## ಯುದ್ಧ: ರಾಜ್ಯದ ಜನರ ರಕ್ಷಣೆಗೆ ಬದ್ಧ

### ಮಧ್ಯ ಪ್ರಾಚ್ಯದಲ್ಲಿ ಸಿಲುಕಿದವರಿಗೆ ಸಚಿವ ಕೃಷ್ಣ ಭೈರೇಗೌಡ ಭರವಸೆ

**ಬೆಂಗಳೂರು:** ಇರಾನ್–ಇಸ್ರೇಲ್ ಯುದ್ಧದಿಂದಾಗಿ ಮಧ್ಯ ಪ್ರಾಚ್ಯದಲ್ಲಿ ಸಿಲುಕಿಕೊಂಡಿರುವ ಕರ್ನಾಟಕದವರ ರಕ್ಷಣೆಗೆ ರಾಜ್ಯ ಸರ್ಕಾರ ಕ್ರಮವಹಿಸಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾರು ಆತಂಕ ಪಡುವುದು ಬೇಡ. ರಾಜ್ಯ ಸರ್ಕಾರ ಕೇಂದ್ರ ವಿದೇಶಾಂಗ ಇಲಾಖೆ ಜೊತೆ ಸಂಪರ್ಕದಲ್ಲಿದೆ. ಎಲ್ಲರ ರಕ್ಷಣೆಗೂ ಕ್ರಮ ತೆಗೆದುಕೊಳ್ಳಲಿದೆ ಎಂದು ಅಭಯ ನೀಡಿದರು.

ರಾಜ್ಯದಲ್ಲಿ ಶನಿವಾರದಿಂದಲೇ ಸಹಾಯವಾಣಿ ಪ್ರಾರಂಭ ಮಾಡಲಾಗಿದೆ. ಈವರೆಗೂ 109 ಜನ ಸಹಾಯವಾಣಿಗೆ ಕರೆ ಮಾಡಿದ್ದಾರೆ. ಈಗಾಗಲೇ ವಿದೇಶಾಂಗ ಇಲಾಖೆ ಮತ್ತು ದೆಹಲಿಯಲ್ಲಿರೋ ನಮ್ಮ ರೆಸಿಡೆಂಟ್ ಕಮೀಷನರ್ ಕೂಡ ಕೇಂದ್ರದ ಜೊತೆ ಸಂಪರ್ಕದಲ್ಲಿ ಇದ್ದಾರೆಂದು ಮಾಹಿತಿ ನೀಡಿದರು.

ಮಧ್ಯಪ್ರಾಚ್ಯದಲ್ಲಿ ಸಿಲುಕಿರುವವರಿಗೆ 3 ವಿಷಯಗಳ ಬಗ್ಗೆ ಆತಂಕ ಇದೆ. ನಮ್ಮನ್ನ ಹೇಗೆ ವಾಪಸ್ ಕರೆಸುತ್ತೀರಾ? ವಿಶೇಷ ವಿಮಾನದ ಮೂಲಕ ಹೇಗೆ ಅಂತ. ನಾವು ಕೇಂದ್ರದ ಜೊತೆ ಮಾತಾಡ್ತಾ ಇದ್ದೇವೆ. ಸದ್ಯ ಈಗ ಏರ್ ಟ್ರಾಫಿಕ್ ನಿಷೇಧ ಆಗಿದೆ. ಏರ್ ಟ್ರಾಫಿಕ್ ಕ್ಲಿಯರ್ ಆದ ಕೂಡಲೇ ಕೇಂದ್ರ ಸರ್ಕಾರ ಹೇಗೆ ಕರೆಸಿಕೊಳ್ಳುತ್ತದೆಂದು ನಮಗೆ ಮಾಹಿತಿ ಸಿಗುತ್ತದೆ. ಏರ್ ಟ್ರಾಫಿಕ್ ಕ್ಲಿಯರ್ ಆಗೋವರೆಗೂ ತೆರವು ಕೆಲಸ ಆಗಲ್ಲ. ಹೀಗಾಗಿ ಎಲ್ಲರೂ ಶಾಂತವಾಗಿ ಇರಬೇಕು ಅಂತ ಮನವಿ ಮಾಡಿದರು. ಕದನ ವಿರಾಮ ಆದ ಕೂಡಲೇ ವಾಪಸ್ ಕರೆಸಲು ಕ್ರಮ ಆಗುತ್ತದೆ ಅಂತ ತಿಳಿಸಿದರು.



ಏರ್ ಪೋರ್ಟ್ ನಲ್ಲಿ ಸಿಲುಕಿರುವರಿಗೆ ವೀಸಾ ಸಮಸ್ಯೆ ಇದ್ದರೆ ಸ್ಥಳೀಯ ರಾಯಭಾರಿ ಕಚೇರಿಗೆ ಅಥವಾ ನಮಗೆ ಕರೆ ಮಾಡಿದರೆ ವೀಸಾ ವ್ಯವಸ್ಥೆ ಮಾಡಲಾಗುತ್ತದೆ. ಕರ್ನಾಟಕದವರು ವಾಪಸ್ ಬರೋವರೆಗೂ ಅಲ್ಲಿ ಆಗೋ ಖರ್ಚು ವೆಚ್ಚಗಳನ್ನ ರಾಜ್ಯ ಸರ್ಕಾರವೇ ಭರಿಸಲಿದೆ. ಇದನ್ನ ನಾವು ಕೇಂದ್ರ ಸರ್ಕಾರದ ಮೂಲಕ ಮಾಡಬೇಕು. ಕೇಂದ್ರ ಸರ್ಕಾರ ಹಣವನ್ನ ಭರಿಸಿ ನಮಗೆ ಮಾಹಿತಿ ಕೊಟ್ಟರೆ ರಾಜ್ಯ ಸರ್ಕಾರ ಸಂಪೂರ್ಣವಾಗಿ ಹಣವನ್ನ ಭರಿಸಲಿದೆ ಅಂತ ಸ್ಪಷ್ಟಪಡಿಸಿದರು. ಯುದ್ಧ ಇನ್ನು ಒಂದು ವಾರ ಆಗುವ ಮಾಹಿತಿ ಇದೆ. ಹೀಗಾಗಿ ಯಾರು ಆತಂಕಕ್ಕೆ ಒಳಗಾಗೋದು ಬೇಡ. ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ಕೊಡಲಿದೆ. ಅಲ್ಲಿವರೆಗೂ ಎಲ್ಲರು ಶಾಂತಿಯಿಂದ ಇರಬೇಕು ಎಂದರು.

## ಹಿಂದಿನ ಸರಾಸರಿ ಬೆಲೆಗೆ ತಂಬಾಕು ಖರೀದಿಸಿ

### ಐಟಿಸಿ ಕಂಪನಿ ಹಿರಿಯ ಅಧಿಕಾರಿಗಳಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೂಚನೆ

**ಮೈಸೂರು:** ರಾಜ್ಯದ ರೈತರಿಂದ ಹಿಂದಿನ ಸರಾಸರಿಗಿಂತ ಹೆಚ್ಚು ಬೆಲೆಗೆ ಉತ್ಪನ್ನ ಖರೀದಿಸಬೇಕು. ತಂಬಾಕು ಮಂಡಳಿ ಹರಾಜು ಪ್ರಕ್ರಿಯೆ ಮೇಲೆ ನಿಗಾ ವಹಿಸಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸೂಚಿಸಿದರು. ಪುಟ 2ಕ್ಕೆ



## ನಗರಸಭೆ ವ್ಯಾಪ್ತಿ ಕೈಬಿಡಿ: ಸಿಎಂಗೆ ಎಚ್‌ಡಿಕೆ ಆಗ್ರಹ

**ಮಂಡ್ಯ:** ಗೆಜ್ಜಲಗೆರೆ, ಗೊರವನಹಳ್ಳಿ, ಚಾಮನಹಳ್ಳಿ, ಸೋಮನಹಳ್ಳಿ ಈ ನಾಲ್ಕು ಗ್ರಾಮಗಳನ್ನು ಸ್ಥಳೀಯರ ಆಶಯಗಳಿಗೆ ವಿರುದ್ಧವಾಗಿ ಮದ್ದೂರು ನಗರಸಭೆ ವ್ಯಾಪ್ತಿಗೆ ಸೇರಿಸಲಾಗಿದೆ. ರಾಜ್ಯ ಸರ್ಕಾರ ಈ ನಿರ್ಧಾರವನ್ನು ಕೈಬಿಡಬೇಕು ಪುಟ 2ಕ್ಕೆ

# ಕೆಪಿಎಸ್ ಮ್ಯಾಗ್ನೆಟ್ ಶಾಲೆ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಸರಿಯಲ್ಲ

ರಾಮನಗರ: ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ದೇಶದ್ರೋಹದ ಕೆಲಸ ಎಂದು ಹಿರಿಯ ರೈತ ಮುಖಂಡ ಸಿ.ಪುಟ್ಟಸ್ವಾಮಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿ, ಸರ್ಕಾರದ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಯೋಜನೆಯ ನಡಾವಳಿಯನ್ನು ಸುಟ್ಟುಹಾಕಿದರು.

ಕರ್ನಾಟಕ ರಾಜ್ಯ ಸರ್ಕಾರವು 'ಕೆಪಿಎಸ್ ಮ್ಯಾಗ್ನೆಟ್ ಶಾಲೆ" ಯೋಜನೆಯನ್ನು ಜಾರಿಗೊಳಿಸಿ ರಾಜ್ಯದಾಯಂತ 40,000 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದೆ ಎಂದು ವಿರೋಧ ವ್ಯಕ್ತಪಡಿಸಿ ನಗರದ ಹಳೇ ಬಸ್ ನಿಲ್ದಾಣದಲ್ಲಿ ಎ.ಐ.ಡಿ.ಎಸ್.ಒದ ವಿದ್ಯಾರ್ಥಿ ಸಂಘಟನೆಯ ಆಶ್ರಯದಲ್ಲಿ ಆಯೋಜನೆಯಾಗಿದ್ದ ಸಮಾವೇಶದಲ್ಲಿ ಅವರು ಮಾತನಾಡಿದರು.

ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರದಲ್ಲೇ 1000 ಕ್ಕೂ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತದೆ. ಯಾವುದೇ ನೀತಿಯನ್ನು ತರುವ ಮುನ್ನ, ಸರ್ಕಾರ ಗ್ರಾಮಸ್ಥರ ಸಭೆ ಮತ್ತು ಮಕ್ಕಳ ಗ್ರಾಮ ಸಭೆ ನಡೆಯಬೇಕು. ಆದರೆ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ತರುವ ಮುನ್ನ ಇದ್ಯಾವುದನ್ನು ಪಾಲಿಸಿಲ್ಲ. ರೈತರ ಆತ್ಮಹತ್ಯೆಗಳು ಹೆಚ್ಚುತ್ತಿರುವ ಕಾಲದಲ್ಲಿ, ದೂರದ ಮ್ಯಾಗ್ನೆಟ್ ಶಾಲೆಗಳಿಗೆ ಕಳುಹಿಸುವುದು ಸಾಧ್ಯವೇ ಎಂದು ಪ್ರಶ್ನಿಸಿದರು. ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಸರ್ಕಾರ ಕೈ ಬಿಡಬೇಕು. ಹಾಲಿ ಇರುವ ಸರ್ಕಾರಿ ಶಾಲೆಗಳನ್ನು ಬಲಪಡಿಸಬೇಕು ಎಂದು ಆಗ್ರಹಿಸಿದರು.




SDMC ಅಧ್ಯಕ್ಷರಾದ ಎನ್. ಎಂ. ಶಂಭು ಗೌಡ ಮಾತನಾಡಿ, ಸರ್ಕಾರಿ ಶಾಲೆಗಳನ್ನು ಉದ್ಧಾರ ಮಾಡಲು ನಾವು ಹಲವಾರು ಮನವಿ ಪಾತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಕನಕಪುರ ತಾಲೂಕಿನಲ್ಲಿ 800 ಶಿಕ್ಷಕರು, ಚನ್ನಪಟ್ಟಣದಲ್ಲಿ 300 ಶಿಕ್ಷಕರು, ಮಾಗಡಿಯಲ್ಲಿ 300 ಶಿಕ್ಷಕರು ಸೇರಿದಂತೆ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲೇ ಬಹಳಷ್ಟು ಶಿಕ್ಷಕರ ಕೊರತೆ ಇದೆ. ಸರ್ಕಾರವು ನಮ್ಮಿಂದ ಶಿಕ್ಷಣದ ಹಕ್ಕನ್ನೇ ಕಿತ್ತುಕೊಳ್ಳುತ್ತಿದೆ. ಸರ್ಕಾರಿ ಶಾಲೆಗಳನ್ನು ಮುಟ್ಟಲು ಬಂದರೆ, ನಾವು ಮತ್ತಷ್ಟು ಉಗ್ರ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದರು.

**ಸರ್ಕಾರಿ ಶಾಲೆಗಳನ್ನು ಹರಾಜು ಹಾಕುವ ಹುನ್ನಾರ – ಕಲ್ಯಾಣ್‌ಕುಮಾರ್**

ಎ.ಐ.ಡಿ.ಎಸ್.ಒ ವಿಧ್ಯಾರ್ಥಿ ಸಂಘಟನೆಯ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ್ ಮಾತನಾಡಿ, ಹಲವಾರು ಹಳ್ಳಿಗಳು ಕಾಡಂಚಿನ ಹಳ್ಳಿಗಳಾಗಿವೆ. 3 ತಲೆಮಾರುಗಳ ಹಿಂದೆ ಗುಹೆಗಳಲ್ಲಿ ಬದುಕುತ್ತಿದ್ದ ಜನರು, ಶಿಕ್ಷಣದಿಂದಾಗಿಯೇ ಇಂದು ಹಳ್ಳಿಗಳಲ್ಲಿ ಬದುಕಲು ಸಾಧ್ಯವಾಯಿತು. ಶಿಕ್ಷಣದಿಂದಾಗಿಯೇ ನಮಗೆ ಸತ್ಯ – ಅಸತ್ಯ ಮತ್ತು ನ್ಯಾಯ – ಅನ್ಯಾಯದ ನಡುವೆ ವ್ಯತ್ಯಾಸ ಗೊತ್ತಾಗಲು ಸಾಧ್ಯವಾಗಿದೆ. ಈಗ ಶಿಕ್ಷಣವನ್ನೇ ಕಸಿದುಕೊಂಡರೆ, ಪ್ರಶ್ನೆ ಮಾಡುವ ಹಕ್ಕನ್ನೇ ಕಸಿದುಕೊಂಡಂತೆ ಎಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ನಮ್ಮ ಸರ್ಕಾರಗಳೇ ಖಾಸಗಿ ಕಂಪನಿಗಳಿಗೆ ಖಾಸಗಿ ಶಾಲೆಗಳನ್ನು ತೆರೆಯಲು ಅನುಮತಿಯನ್ನು ಕೊಡುತ್ತಿದೆ. ಬೇಕೆಂದೇ ಸರ್ಕಾರಿ ಶಾಲೆಗಳಿಗೆ ಸೌಲಭ್ಯಗಳನ್ನು ಕೊಡದೆ, 70 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಿಲ್ಲ. ಕೊನೆಗೆ "ಪೋಷಕರೇ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳಿಸುವುದಿಲ್ಲ" ಎನ್ನುವ ಟೊಳ್ಳು ಅಭಿಪ್ರಾಯವನ್ನು ಹಬ್ಬಿಸುತ್ತಿವೆ. ಊರಾಚೆ ಇರುವ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಿಗೆ ಉಚಿತ ಬಸ್ ಇರುತ್ತದೆ ಎಂದು ಹೇಳಿ, ಈಗ ಅದರ ಸಂಪೂರ್ಣ ಜವಾಬ್ದಾರಿಯನ್ನು ಎಸ್.ಡಿ.ಎಂ.ಸಿ ಮತ್ತು ಪೋಷಕರ ತಲೆಗೆ ಕಟ್ಟಿದ್ದಾರೆ. ಶಿಕ್ಷಣ ಮಂತ್ರಿಗಳು ಸದನದಲ್ಲಿ ಕೂತು "ಒಂದೇ ಒಂದು ಸರ್ಕಾರಿ ಶಾಲೆಯನ್ನು ಮುಚ್ಚುವುದಿಲ್ಲ" ಎಂದು ಹೇಳಿ ಈಗ ಈ ಯೋಜನೆಯನ್ನು ಜಾರಿಗೆ ತರಲು ಯತ್ನಿಸುತ್ತಿದ್ದಾರೆ. ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ರದ್ದುಗೊಳಿಸಲು ಪ್ರತಿ ಹಳ್ಳಿಗಳಲ್ಲಿ ಸಾರ್ವಜನಿಕ ಶಿಕ್ಷಣ ಉಳಿಸಿ ಜನ ಸಮಿತಿಗಳನ್ನು ರಚಿಸಿ ಈ ಹೋರಾಟವನ್ನು ಬಲಿಷ್ಠವಾಗಿ ಕಟ್ಟಬೇಕಾಗಿದೆ ಎಂದರು.

ಎ.ಐ.ಡಿ.ಎಸ್.ಒ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ತುಳಜಾರಾಮ್ ಎಂ ಕೆ ಮಾತನಾಡಿ, ಕೇವಲ 6000 ಮ್ಯಾಗ್ನೆಟ್ ಶಾಲೆಗಳನ್ನು ನಿರ್ಮಿಸಿ, 40,000 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚುತ್ತಿದ್ದಾರೆ. ಈ ಮ್ಯಾಗ್ನೆಟ್ ಶಾಲೆಗಳಿಗೆ ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್‌ನಿಂದ 2,500 ಕೋಟಿ ರೂ ಸಾಲವನ್ನು ರಾಜ್ಯ ಸರ್ಕಾರ ಪಡೆಯುತ್ತಿದೆ. ಸಾಲದ ಷರತ್ತುಗಳನ್ನು ಗೌಪ್ಯವಾಗಿರಿಸಿರುವುದು ಏಕೆ ಎಂದು ಪ್ರಶ್ನಿಸಿದರು. ಚನ್ನಪಟ್ಟಣದ ಹೊಂಗನೂರಿನ ಶಾಲೆಯು ಸರ್ಕಾರದ್ದಲ್ಲ, ಬದಲಿಗೆ ಅದನ್ನು ಕಟ್ಟಿರುವುದು ಕಣ್ವ ಫೌಂಡೇಶನ್ ಎಂಬ ಖಾಸಗಿ ಸಂಸ್ಥೆ. ಸರ್ಕಾರಿ ಶಾಲೆಗಳನ್ನು ಸರ್ಕಾರ ಹಾರಜು ಹಾಕಲು ಹೊರಟಿದೆ ಎಂದು ತಮ್ಮ ಆಕ್ರೋಶವನ್ನು ವ್ಯಕ್ತ ಪಡಿಸಿದರು. ಎ.ಐ.ಡಿ.ಎಸ್.ಒದ ಅಖಿಲ ಭಾರತ ಘಟಕದ ಮಾಜಿ ಅಧ್ಯಕ್ಷ ಎಂ. ಎನ್. ಶ್ರೀರಾಮ್, ಎ.ಐ.ಎಂ.ಎಸ್.ಎಸ್, ರಾಜ್ಯ ಕಾರ್ಮಿಕ ಮುಖಂಡರಾದ ರಮಾ. ಟ. ಸಿ, ಎ.ಐ.ಡಿ.ವೈ.ಒ ರಾಜ್ಯ ಯುವಜನ ಮುಖಂಡ ರಾದ ವಿನಯ್ ಸಾರಥಿ, ಎಸ್.ಡಿ.ಎಂ.ಸಿ.ಸಿ.ಎಫ್ ರಾಜ್ಯ ಅಧ್ಯಕ್ಷ ಉಮೇಶ್ ಜಿ ಗಂಗವಾಡಿರವರುಗಳು ಪ್ರತಿಭಟನಾ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ವಿರುದ್ಧ, ಸರ್ಕಾರಿ ಶಾಲೆಗಳನ್ನು ಉಳಿಸುವ ಹೋರಾಟವನ್ನು ಬಲಿಷ್ಟಗೊಳಿಸಲು, ಬೆಂಗಳೂರು ದಕ್ಷಿಣ ಜಿಲ್ಲೆಯ ನೂತನ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯು ರಚಿಸಲಾಯಿತು. ಈ ಸಮಿತಿಯ ಸಲಹೆಗಾರರಾಗಿ ಸಿ. ಪುಟ್ಟಸ್ವಾಮಿ, ಶಂಬು ಗೌಡ ಆಯ್ಕೆಯಾದರು. ಅಧ್ಯಕ್ಷರಾಗಿ ಮಂಜಣ್ಣ (ಸಂತೆ ಮೊಗೇನಹಳ್ಳಿ), ಕಾರ್ಯದರ್ಶಿಗಳಾಗಿ ರೋಹಿತ್ ಎಂ ಆರ್ ಮತ್ತು 15 ಮಂದಿ ಉಪಾಧ್ಯಕ್ಷರುಗಳು ಮತ್ತು 80 ಸದಸ್ಯರನ್ನು ಒಳಗೊಂಡ ಸಮಿತಿ ರಚನೆಯಾಯಿತು.

ಮೊದಲ ಪುಟದಿಂದ

## ಕನ್ನಡಿಗರ ಸುರಕ್ಷತೆಗೆ ಆದ್ಯತೆ: ಸಿಎಂ

ರಿಗಳು ನೀಡುವ ಸಲಹೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ. ಸಹಾಯವಾಣಿ ಸಂಖ್ಯೆಗಳ ಮೂಲಕ ಸಂಬಂಧಪಟ್ಟ ರಾಯಭಾರ ಕಚೇರಿಯಲ್ಲಿ ನೋಂದಾಯಿಸಿ. ರಾಜ್ಯದ ಅಧಿಕಾರಿಗಳು ನಿಮ್ಮ ವಿವರಗಳನ್ನು ಸಂಗ್ರಹಿಸುತ್ತಾರೆ ಹಾಗೂ ಬೆಂಬಲವನ್ನು ನೀಡುತ್ತೇವೆ. ಕರ್ನಾಟಕ ಸರ್ಕಾರ ನಿಮ್ಮೊಂದಿಗೆ ದೃಢವಾಗಿ ನಿಲ್ಲುತ್ತದೆ. ನಿಮ್ಮನ್ನು ಸುರಕ್ಷಿತವಾಗಿ ರಾಜ್ಯಕ್ಕೆ ಕರೆತರಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

## ದರ್ಶನಕ್ಕೆ ನಿರ್ಬಂಧವಿಲ್ಲ

ಬೆಟ್ಟದಲ್ಲಿ ಮಾತನಾಡಿದ ಅವರು ಮಂಗಳವಾರ ಮಧ್ಯಾಹ್ನ 3.50ರಿಂದ ಸಂಜೆ 6.40ರವರೆಗೆ ಚಂದ್ರಗ್ರಹಣವಿದೆ. ಆದರೆ, ಮಲೆ ಮಹದೇಶ್ವರ ಸ್ವಾಮಿ ದರ್ಶನಕ್ಕೆ ಯಾವುದೇ ನಿರ್ಬಂಧ ಇರುವುದಿಲ್ಲ ಈ ವೇಳೆಯಲ್ಲಿಯೂ ಭಕ್ತಾದಿಗಳು ಸ್ವಾಮಿ ದರ್ಶನ ಪಡೆಯಬಹುದು. ಚಂದ್ರಗ್ರಹಣ ಮುಗಿದ ನಂತರ ಧಾರ್ಮಿಕ ಸಂಪ್ರದಾಯದಂತೆ ದೇವಸ್ಥಾನದ ಆವರಣವನ್ನು ಶುದ್ಧೀಕರಿಸಿ ವಿಶೇಷ ಪೂಜೆ ನಂತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದರು. ಮಾ.3 ರಂದು ರಕ್ತಚಂದ್ರ ಗ್ರಹಣ ಹಿನ್ನೆಲೆ ಗವಿಗಂಗಾಧರೇಶ್ವರ ದೇವಾಲಯದಲ್ಲಿ ಎಂದಿನಂತೆ ಪೂಜೆ ಪುನಸ್ಕಾರಗಳು ನೆರವೇರಲಿವೆ. ಬೆಳ್ಳಗ್ಗೆ 6 ಗಂಟೆಯಿಂದ ಜಲಾಭಿಷೇಕ ವಿಶೇಷ ಪೂಜೆ ನೆರವೇರಿಸಿ, 9 ಗಂಟೆಗೆ ದರ್ಬೆಯಿಂದ ಗರ್ಭಗುಡಿ ಬಂದ್ ಮಾಡಲಾಗುತ್ತದೆ. ನಂತರ ಸಂಜೆ 7.30ಕ್ಕೆ ದೇವಸ್ಥಾನ ತೆರೆದು ಸ್ವಾಮಿಗೆ ಜಲಾಭಿಷೇಕ ಮಾಡಲಾಗುವುದು. ಮರುದಿನ ಬುಧವಾರ ಬೆಳಗ್ಗೆ ದೇವಸ್ಥಾನ ಶುಚಿಗೊಳಿಸುವ ಕಾರ್ಯ ನಡೆಯಲಿದೆ ಎಂದು ಸೋಮಸುಂದರ್ ದೀಕ್ಷಿತ್ ಗುರೂಜಿ ತಿಳಿಸಿದ್ದಾರೆ.

## ಜೂನ್ ವರೆಗೆ ನೀರು ಲಭ್ಯ

**ನೀಡಿದರು. ರಮ್ಮನಳ್ಳಿ, ಬೋಗಾದಿ, ಕಡಕೊಳ ಹಾಗೂ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಬೇಕಿರುವ 13 ಎಂಎಲ್‌ಡಿ ನೀರಿಗೆ ಕಬಿನಿ ಯೋಜನೆಯಡಿ ಪ್ರಸ್ತಾವನೆ ನೀಡಲಾಗಿದೆ ಎಂದು ನಗರ ಸ್ಥಳೀಯ ಸಂಸ್ಥೆಗಳ ಯೋಜನಾ ನಿರ್ದೇಶಕಿ ಪ್ರಿಯಾದರ್ಶಿನಿ ಮಾಹಿತಿ ನೀಡಿದರು.**

## ಸಮಸ್ಯೆ ಆಗದಂತೆ ನಿಗಾವಹಿಸಿ

ಬೇಕಿರುವ ಅನುದಾನದ ಬಗ್ಗೆ ವರದಿ ಸಿದ್ಧಪಡಿಸಿ ಎಂದರು. ಸಭೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಜಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಉಪಸ್ಥಿತರಿದ್ದರು.

## ಮಹಾಯುದ್ಧ ಮಧ್ಯಪ್ರಾಚ್ಯ ಧಗಧಗ

ವಾಯುಪಡೆಯ ಕಮಾಂಡರ್‌ನ ಪ್ರಧಾನ ಕಚೇರಿಯನ್ನು ಗುರಿಯಾಗಿಸಲಾಗಿತ್ತು ಎಂದು ಇರಾನ್ ಹೇಳಿದೆ. ದಾಳಿ ಯಲ್ಲಿ ಖೈಬರ್ ಕ್ಷಿಪಣಿಗಳನ್ನು ಬಳಸಲಾಗಿದೆ ಎಂದು ತಿಳಿಸಿದೆ. ಅಮೆರಿಕ–ಇಸ್ರೇಲಿ ಏರ್‌ಸ್ಟ್ರೈಕ್‌ನಿಂದ ಇರಾನ್ ನಲ್ಲಿ ಇದುವರೆಗೆ ಕನಿಷ್ಠ 555 ಜನರು ಸಾವನ್ನಪ್ಪಿದ್ದಾರೆ ಎಂದು ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿ ತಿಳಿಸಿದೆ. ಶನಿವಾರದಿಂದ ಇಸ್ರೇಲ್ ಮತ್ತು ಅಮೆರಿಕ ಇರಾನ್‌ನಾದ್ಯಂತ ದಾಳಿಗಳನ್ನು ನಡೆಸಿವೆ. ಖಮೇನಿ ಹತ್ಯೆಯೊಂದಿಗೆ ಪ್ರಾರಂಭವಾದ ಯುದ್ಧವು ಈ ಪ್ರದೇಶವನ್ನು ಆವರಿಸಿದೆ. ದುಬೈ, ಬಹ್ರೇನ್, ಇರಾಕ್ ಮತ್ತು ಇತರೆಡೆಗಳಲ್ಲಿ ಸ್ಫೋಟಗಳ ಸದ್ದು ಮೊಳಗುತ್ತಿವೆ. ಕುವೈತ್‌ನಲ್ಲಿರುವ ಯುಎಸ್ ರಾಯಭಾರ ಕಚೇರಿಯಿಂದ ಕಪ್ಪು ಹೊಗೆ ಹೊರಹೊಮ್ಮಿದೆ. ಆದರೆ, ಯುಎಸ್ ಯುದ್ಧ ವಿಮಾನಗಳನ್ನು ಇರಾನ್ ಹೊಡೆದುರುಳಿಸಿದ್ದು, ಪೈಲಟ್‌ಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇರಾನ್ ಕೊಲ್ಲಿಯಲ್ಲಿ ಮೂರನೇ ದಿನ ಪ್ರತೀಕಾರದ ದಾಳಿ ಮುಂದುವರಿದಿದೆ.

## ರಸ್ತೆ ಅಗಲೀಕರಣಕ್ಕೆ ಸೂಚನೆ

ನಿಯಮಾನುಸಾರ ಟ ಡಿ ಆರ್ ನೀಡಿ ಜಾಗ ಪಡೆಯಲು ತಿಳಿಸಿದರು. ಶಾಸಕರಾದ ತನ್ವೀರ್ ಸೇಠ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯುಕೇಶ್ ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್ ಭಾಗವಹಿಸಿದ್ದರು.

## ಶ್ರೀಮಂತರು ಗ್ಯಾರಂಟಿ ಬಿಡಿ

ಗ್ಯಾರಂಟಿ ಯೋಜನೆ ಜೊತೆಗೆ ಅಭಿವೃದ್ಧಿ ಆಗುತ್ತಿದೆ. ಗ್ಯಾರಂಟಿ ಯೋಜನೆ ಅಭಿವೃದ್ಧಿಯ ಒಂದು ಭಾಗ. ಗೃಹಲಕ್ಷ್ಮಿ, ಶಕ್ತಿ ಯೋಜನೆಗಳು ಅಭಿವೃದ್ಧಿಯ ಒಂದು ಭಾಗ. ಗ್ಯಾರಂಟಿ ಯೋಜನೆಯಿಂದ ಅಭಿವೃದ್ಧಿ ಕೆಲಸಗಳು ಕುಂಠಿತಗೊಳ್ಳುವುದಿಲ್ಲ ಎಂದು ಸಮರ್ಥಿಸಿಕೊಂಡರು.

## ಫೋನ್ ಟ್ಯಾಪಿಂಗ್: ಎಚ್‌ಡಿಕೆ

ಹೇಳುತ್ತಿದ್ದೇನೆ. ಕದ್ದಾಲಿಕೆ ಆಗಲೂ ಇತ್ತು. ಈಗಲೂ ಇದೆ. ಆದರೆ ಕೆಲವೊಮ್ಮೆ ವಿಷಯಗಳು ಹೊರಗೆ ಬಂದು ಕೆಲವರ ತಲೆ ಉರುಳುತ್ತವೆ. ಇವತ್ತಿನ ಸರ್ಕಾರದಲ್ಲಿ ಅದು ಎಷ್ಟು ಜಾಸ್ತಿಯಾಗಿದೆ ಎಂದು ಅವರನ್ನೇ ಕೇಳಬೇಕು ಎಂದು ವ್ಯಂಗ್ಯವಾಡಿದರು. ಮುಖ್ಯಮಂತ್ರಿಯ ಒಂದು ಗುಂಪು, ಮುಖ್ಯಮಂತ್ರಿ ಆಗಬೇಕು ಎಂದುಕೊಂಡವರದ್ದು ಇನ್ನೊಂದು ಗುಂಪು ಪರಸ್ಪರ ಗೂಢಚಾರಿಕೆ ನಡೆಸುತ್ತಿರುವುದು ದುರಂತ ಎಂದರು. ಗಲ್ಫ್ ದೇಶಗಳಲ್ಲಿ ಸಿಲುಕಿರುವ ಕನ್ನಡಿಗರೂ ಸೇರಿದಂತೆ ಎಲ್ಲ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಕೇಂದ್ರ ಸರ್ಕಾರ ಕ್ರಮ ವಹಿಸುತ್ತಿದೆ. ವಿಮಾನಗಳ ಹಾರಾಟ ಸ್ಥಗಿತಗೊಂಡಿರುವುದರಿಂದ ಸಮಸ್ಯೆ ಆಗಿದೆ. ದುಬೈನಲ್ಲಿರುವ ಕನ್ನಡಿಗರು ಪ್ರವಾಸಿ ಕನ್ನಡಿಗರ ಸಹಾಯಕ್ಕೆ ಬಂದಿದ್ದಾರೆ ಎಂದು ತಿಳಿಸಿದರು.

## ಸಿಎಂಗೆ ಎಚ್‌ಡಿಕೆ ಆಗ್ರಹ

ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಜನಾಭಿಪ್ರಾಯ ಪರಿಗಣಿಸದೆ ಏಕಪಕ್ಷೀಯವಾಗಿ ಸಂಪುಟ ಸಭೆಯಲ್ಲಿ ಕೂಡ ನಿರ್ಣಯ ಕೈಗೊಳ್ಳಲಾಗಿದೆ. ಸರ್ಕಾರ ಜನತೆಯ ನಿಲುವುಗಳಿಗೆ ವಿರುದ್ಧವಾಗಿ ಹೋಗಬಾರದು. ಈ ಹಿನ್ನೆಲೆಯಲ್ಲಿ ತಾವು ಮಧ್ಯಪ್ರವೇಶ ಮಾಡಿ ಇದಕ್ಕೆ ತಡೆಯೊಡ್ಡಬೇಕು ಎಂದು ಆಗ್ರಹಿಸಿದ್ದಾರೆ.

ರೈತ ನಾಯಕಿ ಸುನಂದಾ ಜಯರಾಂ ನೇತೃತ್ವದಲ್ಲಿ 70 ದಿನಗಳಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಯುತ್ತಿದೆ. ಈ ಭಾಗದ ಎಲ್ಲ ಗ್ರಾಮಗಳು ಕೃಷಿ ಆಧರಿತವಾಗಿವೆ. ಸುಮಾರು 2,000 ಎಕರೆಗೂ ಹೆಚ್ಚು ಭೂಮಿ ನೀರಾವರಿ ಪ್ರದೇಶವಾಗಿರುತ್ತದೆ ಎಂಬುದು ಗಮನಾರ್ಹ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

# ರೈತರ ಸಾಲ ಮನ್ನಾಗೆ ಒತ್ತಾಯ

## ರಾಜ್ಯ ರೈತಸಂಘ(ರೈತಬಣ)ದ ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಒತ್ತಾಯ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮಾ.6 ರಂದು ಮಂಡಿಸಲಿರುವ 2026–27ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯದ ರೈತರ ವಿವಿಧ ರಾಷ್ಟ್ರೀಕೃತ ಬ್ಯಾಂಕು, ಸೊಸೈಟಿ ಮತ್ತಿತರ ಸಹಕಾರಿ ಸಂಸ್ಥೆಗಳ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕೆಂದು ಕರ್ನಾಟಕ ರಾಜ್ಯ ರೈತಸಂಘ(ರೈತಬಣ)ದ ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಒತ್ತಾಯಿಸಿದರು.

ಜಲದರ್ಶಿನಿ ಅತಿಥಿಗೃಹದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ರೈತರ ಕುರಿತು ಮಾತನಾಡುವಾಗ ತಾವು ರೈತನಾಯಕ ಪ್ರೊ.ನಂಜುಂಡಸ್ವಾಮಿ ಶಿಷ್ಯ, ನಾನೂ ರೈತಸಂಘದಲ್ಲಿ ಇದ್ದೆ, ನನಗೂ ರೈತರ ಕಷ್ಟ ಗೊತ್ತು ತಾವು ರೈತಪರ ಎಂದು ಎಲ್ಲಾ ವೇದಿಕೆಗಳಲ್ಲಿ ಹೇಳಿಕೊಳ್ಳುತ್ತಿದ್ದು, 2026–27ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯದ ರೈತರ ಸಂಪೂರ್ಣ ಸಾಲವನ್ನು ಮನ್ನಾ ಮಾಡಬೇಕು. ಈ ಕಾರಣದಿಂದ 2026–27ನೇ ಸಾಲಿನ ಬಜೆಟ್‌ನಲ್ಲಿ ರೈತರ ಸಾಲ ಮನ್ನಾ ಘೋಷಣೆ ಮಾಡಬೇಕು. ಹೊಸ ಸಾಲಗಳಿಗೆ ಶೂನ್ಯ ಬಡ್ಡಿದರವನ್ನು ಜಾರಿಗೊಳಿಸಬೇಕು. ಇದರಿಂದ ರೈತರ ಆತ್ಮಹತ್ಯೆಗಳನ್ನು ತಡೆಯುವಂತಾಗುತ್ತದೆ ಮತ್ತು ಆರ್ಥಿಕ ಸ್ಥಿರತೆ ಸಾಧ್ಯವಾಗುತ್ತದೆ. ಕರ್ನಾಟಕದ ಲಕ್ಷಾಂತರ ಬಡ ರೈತರು ನಮೂನೆ 50, 53 ಮತ್ತು 57ರ ಅಡಿಯಲ್ಲಿ ಬಗರ್ ಹುಕುಂ ಭೂಮಿ ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿ ವರ್ಷಗಳಿಂದ ಕಾಯುತ್ತಿದ್ದಾರೆ ಎಂದರು.

ಸಾಂಸ್ಕೃತಿಕ ರಾಜಧಾನಿ, ನಿವೃತ್ತರ ಸ್ವರ್ಗ, ಅರಮನೆಗಳ ತವರು, ಅತ್ಯುತ್ತಮ ಪ್ರವಾಸೋದ್ಯಮ ಕ್ಷೇತ್ರವಾಗಿರುವ ಮೈಸೂರು ಇಂದು ಡ್ರಗ್ಸ್ ಕೇಂದ್ರವಾಗಿದೆ. ಸರ್ಕಾರ ಮೈಸೂರು ಪೊಲೀಸರಿಗೆ ಮತ್ತಷ್ಟು ಶಕ್ತಿ ತುಂಬಿ ಟ್ರಗ್ಸ್ ಮಾರಾಟ ಜಾಲವನ್ನು ಹತ್ತಿಕ್ಕುವ ಮೂಲಕ ಮೈಸೂರು ಮತ್ತು ಇಡೀ ರಾಜ್ಯವನ್ನು ಡ್ರಗ್ಸ್ ಮುಕ್ತ ಮಾಡಬೇಕು. ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಕಚ್ಚಾಟದಿಂದ ಅಭಿವೃದ್ಧಿ ಕುಂಠಿತಗೊಂಡಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತಸಂಘ (ರೈತಬಣ)ದ ರಾಜ್ಯ ಸಂಚಾಲಕ ಕೆಆರ್‌ಎಸ್ ರಾಮೇಗೌಡ, ರಾಜ್ಯ ಕಾರ್ಯದರ್ಶಿ ಡಾ.ಅರುಣ್ ಕುಮಾರ್, ಪಿರಿಯಾಪಟ್ಟಣ ತಾಲ್ಲೂಕು ಅಧ್ಯಕ್ಷ ಶಿವಪ್ರಸಾದ್, ಉಪಾಧ್ಯಕ್ಷ ತಮ್ಮಣ್ಣೇಗೌಡ, ಪ್ರಧಾನ ಕಾರ್ಯದರ್ಶಿ ಯೋಗೇಶ್, ಬೆಟ್ಟದಪುರ ಹೋಬಳಿ ಗೌರವ ಅಧ್ಯಕ್ಷ ರಾಜೇಗೌಡ, ವರುಣ ಹೋಬಳಿ ಅಧ್ಯಕ್ಷ ಪುಟ್ಟಸ್ವಾಮಿ ನಾಯಕ, ಚಿಕ್ಕಮಗಳೂರು ಜಿಲ್ಲಾಧ್ಯಕ್ಷ ನಾಗರಾಜು, ಹಾಸನ ಜಿಲ್ಲಾ ಮಹಿಳಾ ವಿಭಾಗದ ಅಧ್ಯಕ್ಷೆ ತಾರಾ, ಮೈಸೂರು ಜಿಲ್ಲಾ ಮಹಿಳಾ ಅಧ್ಯಕ್ಷೆ ದಾಕ್ಷಾ ಶಿವರಾಮ್, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ವೆಂಕಟೇಶ್, ಅಂಕ್ಕಪ್ಪ ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಸಿದ್ದಪ್ಪ, ಮಂಡ್ಯ ಜಿಲ್ಲಾ ರಕ್ಷಣಾ ವೇದಿಕೆ ಅಧ್ಯಕ್ಷ ಅಶೋಕ್, ಬೆಂಗಳೂರು ನಗರ ಉಪಾಧ್ಯಕ್ಷ ರಘು, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಕೆಂಪರಾಜು, ಪಾಂಡವಪುರ ತಾಲ್ಲೂಕು ಅಧ್ಯಕ್ಷ ಸಂತೋಷ್, ಬೆಳಗಾವಿ ಜಿಲ್ಲಾ ಸಂಚಾಲಕ ಈರಣ್ಣ, ಶ್ರೀರಂಗಪಟ್ಟಣ ತಾಲ್ಲೂಕು ಅಧ್ಯಕ್ಷ ರವಿಕುಮಾರ್ ಮತ್ತಿತರರು ಇದ್ದರು.




### ರಾಜಕಾರಣಿಗಳೇ ದಲ್ಲಾಳಿಗಳಾಗಿದ್ದಾರೆ

**ಮೈಸೂರು ಮಹಾನಗರ ಪಾಲಿಕೆಯನ್ನು ಗ್ರೇಟರ್ ಮೈಸೂರು ಎಂದು ಘೋಷಣೆ ಮಾಡಿದ್ದು, ಭೂಮಿಗೆ ಬಂಗಾರದ ಬೆಲೆ ಸಿಗುತ್ತಿದೆ. ಈ ನಡುವೆ ಬಡ ರೈತರ ತುಂಡು ಭೂಮಿಯನ್ನು ಬಲಾಢ್ಯರು ಖರೀದಿಸಲು ಮುಂದಾಗಿದ್ದು, ಇದಕ್ಕೆ ರಾಜಕಾರಣಿಗಳೇ ದಲ್ಲಾಳಿಗಳಾಗಿದ್ದಾರೆ. ರಾಜ್ಯದಲ್ಲಿ ಲಕ್ಷಾಂತರ ಯುವಕರು ನಿರುದ್ಯೋಗಿಗಳಾಗಿದ್ದಾರೆ. ಕಾಲ ಕಾಲಕ್ಕೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ ವಿದ್ಯಾವಂತ ಯುವ ಜನಾಂಗಕ್ಕೆ ಉದ್ಯೋಗ ಕೊಡಬೇಕಾದುದು ಸರ್ಕಾರದ ಕರ್ತವ್ಯ, ಆದರೆ ಕಾಂಗ್ರೆಸ್ ಸರ್ಕಾರ ಯಾವುದೇ ಇಲಾಖೆಯಲ್ಲಿ ಖಾಲಿ ಇರುವ ಉದ್ಯೋಗಗಳನ್ನು ಭರ್ತಿ ಮಾಡದೆ, ಹಿಂದಿನ ಸರ್ಕಾರದತ್ತ ಬೊಟ್ಟು ತೋರುವುದು ನಾಚಿಕೆಗೇಡಿನ ಸಂಗತಿ, ಧಾರವಾಡದ ಪ್ರತಿಭಟನೆಗೆ ಬೆಚ್ಚಿ 50 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದು, 2.5 ಲಕ್ಷ ಹುದ್ದೆ ಖಾಲಿ ಇದ್ದರೂ ಕೇವಲ 50 ಸಾವಿರ ಭರ್ತಿ ಮಾಡುವುದು ವಿದ್ಯಾವಂತ ಯುವಕರಿಗೆ ನೀವು ಮಾಡುತ್ತಿರುವ ಘೋರ ಅನ್ಯಾಯ. ಸರ್ಕಾರ ಕೂಡಲೇ ಖಾಲಿ ಇರುವ 2.5 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲಿ ಎಂದು ಹೇಳಿದರು.**

ಮೊದಲ ಪುಟದಿಂದ

## ಡಿಕೆಶಿ ಬಣದ ಮೇಲೆ 'ಸ್ಪೈಕಣ್ಣು'

ಅವರು ಎಚ್ಚತ್ತುಕೊಂಡಿದ್ದು, ಶಾಸಕರ ಚಲನವಲನಗಳ ಬಗ್ಗೆ ಸೂಕ್ಷ್ಮ ವಿವರಗಳನ್ನು ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈಗ ಸಿಎಂ ನಿಯಂತ್ರಣದಲ್ಲಿರುವ ರಾಜ್ಯ ಗುಪ್ತಚರ ಇಲಾಖೆಗೆ ದಿನನಿತ್ಯದ ಮಾಹಿತಿಗಿಂತ ಹೆಚ್ಚಿನ ಮಾಹಿತಿಯನ್ನು ಪ್ರತಿದಿನ ನೀಡುವಂತೆ ಸೂಚಿಸಲಾಗಿದೆ.

ಡಿಕೆಶಿ ಬಣದ ಶಾಸಕರು ಬಜೆಟ್ ಅಧಿವೇಶನದ ನಂತರ ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಅನ್ನು ಭೇಟಿಯಾಗುವುದಾಗಿ ಸಂದೇಶ ಕಳುಹಿಸಿತ್ತು. ಎರಡೂ ಬಣಗಳಿಂದ ದೂರವಾಗಿ ತಟಸ್ಥರಾಗಿದ್ದ ಕೆಲವು ಶಾಸಕರು ಸಿಎಂ ಬದಲಾವಣೆ ಪರವಾಗಿದ್ದಾರೆ. ಆದರೆ 2028ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಇಮೇಜ್‌ಗೆ ಧಕ್ಕೆ ತರದಂತೆ ಮತ್ತು ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರದ ನಿರ್ಧಾರವನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳಬೇಕೆಂದು ಬಯಸಿರುವುದಾಗಿ ಕೆಲವು ಶಾಸಕರು ತಿಳಿಸಿದ್ದಾರೆ.

ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದರೆ ಮುಂದೆ ಎದುರಾಗುವ ಕಾನೂನು ತೊಡಕುಗಳ ಬಗ್ಗೆ ಎಐಸಿಸಿ ಕಾನೂನು ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿದೆ. ಅಕ್ರಮ ಆಸ್ತಿ ಪ್ರಕರಣ ಸೇರಿದಂತೆ ಶಿವಕುಮಾರ್ ವಿರುದ್ಧ ಬಾಕಿ ಇರುವ ಕೆಲವು ಪ್ರಕರಣಗಳನ್ನು ನಿರ್ವಹಿಸುತ್ತಿರುವ ಸುಪ್ರೀಂ ಕೋರ್ಟ್ ವಕೀಲ ಕಪಿಲ್ ಸಿಬಲ್ ಶೀಘ್ರವೇ ಎಐಸಿಸಿಗೆ ಮಾಹಿತಿ ನೀಡಲಿದ್ದಾರೆ ಎಂದು ತಿಳಿದು ಬಂದಿದೆ.

ಅಕ್ರಮ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಜೈಲುವಾಸದಿಂದ ಹೊರಬಂದಿರುವ ಶಿವಕುಮಾರ್ ಪ್ರಕರಣವನ್ನು ಬಿಜೆಪಿ ಅಸ್ತ್ರವಾಗಿರಿಸಿಕೊಳ್ಳುತ್ತದೆ ಎಂಬ ಭಯ ಕಾಂಗ್ರೆಸ್ ಗೆ ಕಾಡುತ್ತಿದೆ. ಹೀಗಾಗಿ ಕಾಂಗ್ರೆಸ್ ಹೈಕಮಾಂಡ್ ಎಚ್ಚರಿಕೆಯ ಹೆಜ್ಜೆ ಇಡಲಿದೆ. 2024ರ ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್ ಅವರ ವಿರುದ್ಧದ 2018ರ ಹಣ ವರ್ಗಾವಣೆ ಪ್ರಕರಣವನ್ನು ವಜಾಗೊಳಿಸಿತ್ತು.

## ಏ.10ಕ್ಕೆ ಬೃಹತ್ ಉದ್ಯೋಗ ಮೇಳ

ಮೈಸೂರು: ಮೇಟಗಳ್ಳಿಯ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿಯ ಮೈಕಾಸ್ ಕಾಲೇಜಿನಲ್ಲಿ ಏ.10 ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ನಿರ್ದೇಶಕ ಡಾ.ಜಿ. ರಾಮಚರಣ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಬೃಹತ್ ಉದ್ಯೋಗ ಮೇಳದಲ್ಲಿ ರಾಜ್ಯದ ಹೆಸರಾಂತ ಕಂಪನಿಗಲು ಪಾಲ್ಗೊಳ್ಳುತ್ತಿವೆ. ಒಂದೇ ಸ್ಥಳದಲ್ಲಿ ಬಹು ಕಾಲೇಜುಗಳ ಉದ್ಯೋಗಾಕಾಂಕ್ಷಿಗಳು, ಕಂಪನಿಗಳನ್ನು ಒಂದೆಡೆ ಸೇರಿಸಿ ಬಿಎ ಮೊದಲಾದ ವಿವಿಧ ವಿದ್ಯಾರ್ಹತೆ ಹೊಂದಿರುವವರಿಗೆ ಉದ್ಯೋಗಾವಕಾಶ ಕಲ್ಪಿಸುವುದು ಇದರ ಉದ್ದೇಶವಾಗಿದೆ. ಕಳೆದ ಬಾರಿ ಒಟ್ಟು 42 ಕಂಪನಿ ಪಾಲ್ಗೊಂಡಿದ್ದವು. ಈಗ ಇನ್ನಷ್ಟು ಕಂಪನಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. 100 ರೂ. ನೋಂದಣಿ ಶುಲ್ಕ. ಹೆಚ್ಚಿನ ಮಾಹಿತಿಗೆ ದೂ. 74831 76616 ನ್ನು ಸಂಪರ್ಕಿಸಬಹುದೆಂದರು. ಪ್ರಚಾರ್ಯರಾದ ಡಾ.ರಮ್ಯಾ ತೆಕ್ಕಡೆ ಹಾಗೂ ರಯಾನ್, ವಿಕ್ರಮ್ ಇದ್ದರು.




ಮೊದಲ ಪುಟದಿಂದ

## ಹಿಂದಿನ ಸರಾಸರಿ ಬೆಲೆಗೆ ತಂಬಾಕು ಖರೀದಿಸಿ

ನಗರದಲ್ಲಿ ಕೇಂದ್ರ ತಂಬಾಕು ಮಂಡಳಿ ಸೋಮವಾರ ಆಯೋಜಿಸಿದ್ದ ಜನಪ್ರತಿನಿಧಿಗಳು ಹಾಗೂ ಪ್ರಮುಖ ವರ್ತಕರೊಂದಿಗಿನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ತಂಬಾಕು ಉತ್ಪನ್ನಗಳಿಗೆ ವಿಧಿಸಲಾಗುತ್ತಿರುವ ತೆರಿಗೆ ಕುರಿತು ದೂರುಗಳಿದ್ದಲ್ಲಿ ಅದನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರೆ ಕೇಂದ್ರ ಹಣಕಾಸು ಸಚಿವರ ಗಮನಕ್ಕೆ ತಂದು ಪರಿಹಾರಕ್ಕೆ ಪ್ರಯತ್ನಿಸಲಾಗುವುದು. ಆದರೆ ತೆರಿಗೆಯ ನೆಪದಲ್ಲಿ ರೈತರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ಐಟಿಸಿ ಕಂಪನಿ ಹಿರಿಯ ಅಧಿಕಾರಿ ರವಿ ಮಾತನಾಡಿ, ತಂಬಾಕು ಉತ್ಪನ್ನಗಳಿಗೆ ವಿಧಿಸುತ್ತಿದ್ದ ಜಿಎಸ್‌ಟಿಯನ್ನು ಕೇಂದ್ರ ಸರ್ಕಾರ ಶೇ.18ರಿಂದ ಶೇ.40ಕ್ಕೆ ಏರಿಸಿದೆ. ಸಿಗರೇಟುಗಳ ಮೇಲಿನ ತೆರಿಗೆಯು ದುಪ್ಪಟ್ಟಾಗಿದೆ. ಪ್ರತಿ ಸಿಗರೇಟಿನ ಬೆಲೆ 6–7 ರೂ. ಜಾಸ್ತಿ ಆಗಿದೆ. ಹೀಗಾಗಿ ಉತ್ಪನ್ನಗಳಿಗೆ ಬೇಡಿಕೆ ಕುಸಿಯುತ್ತಿದೆ. ನಾವು ನಿಗದಿತ ಪ್ರಮಾಣಕ್ಕಿಂತ ಕಡಿಮೆ ತಂಬಾಕನ್ನು ಕೊಳ್ಳುವುದು ಅನಿವಾರ್ಯವಾಗಿದೆ. ಆದರೆ ಬೆಲೆಯಲ್ಲಿ ಯಾವುದೇ ವ್ಯತ್ಯಾಸ ಮಾಡಿಲ್ಲ ಎಂದು ತಿಳಿಸಿದರು.

ಸಂಸದ ಯದುವೀರ್ ಒಡೆಯರ್ ಮಾತನಾಡಿ, ರಾಜ್ಯದಲ್ಲಿ ಈ ವರ್ಷ 8.5 ಕೋಟಿ ಕೆ.ಜಿ.ಯಷ್ಟು ತಂಬಾಕು ಬೆಳೆದಿದೆ. ಇದರಲ್ಲಿ 4 ಕೋಟಿ ಕೆ.ಜಿ.ಯಷ್ಟು ಉತ್ಪನ್ನ ಈಗಾಗಲೇ ಕಡಿಮೆ ಬೆಲೆಗೆ ಹರಾಜಾಗಿದೆ. ಉಳಿದ ಉತ್ಪನ್ನವನ್ನು ಹರಾಜು ಆರಂಭವಾದ ದಿನದ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಖರೀದಿಸಿ ಎಂದು ಐಟಿಸಿ ಕಂಪನಿ ಪ್ರತಿನಿಧಿಗಳಿಗೆ ಸೂಚಿಸಿದರು. ಮೈಸೂರು ಜಿಲ್ಲೆಯ ಮಾರುಕಟ್ಟೆಗಳಲ್ಲಿ ಐಟಿಸಿ ಕಂಪನಿಯು ಏಕಸ್ವಾಮ್ಯ ಸಾಧಿಸಿದೆ. ಇದರಿಂದ ರೈತರಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ತಂಬಾಕಿಗೆ ಸ್ಪರ್ಧಾತ್ಮಕ ದರ ಒದಗಿಸುವ ಸಲುವಾಗಿ ಎಫ್‌ಡಿಐ ಮೂಲಕ ವಿದೇಶಿ ಕಂಪನಿಗಳೂ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಒತ್ತಾಯಿಸಿದರು. ಸಭೆಯಲ್ಲಿದ್ದ ಇತರ ಜನಪ್ರತಿನಿಧಿಗಳೂ ಇದಕ್ಕೆ ಸಹಮತ ಸೂಚಿಸಿದರು. ಈ ಬಗ್ಗೆ ಪರಿಶೀಲಿಸಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸುವುದಾಗಿ ತಂಬಾಕು ಮಂಡಳಿ ಅಧಿಕಾರಿಗಳು ಭರವಸೆ ನೀಡಿದರು. ಸಂಸದ ಸುನಿಲ್ ಬೋಸ್, ಶಾಸಕರಾದ ಎ.ಮಂಜು, ಜಿ.ಡಿ.ಹರೀಶ್ ಗೌಡ, ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ ಭಾಗವಹಿಸಿದ್ದರು.

### ಮೈಸೂರು ರೇಷ್ಮೆ ಕಾರ್ಖಾನೆ ಮುಚ್ಚಲ್ಲ: ಸಚಿವ ಮಹದೇವಪ್ಪ

ಬಿಜೆಪಿಯವರು ರಾಜಕೀಯಕ್ಕಾಗಿ ಗೊಂದಲ ಸೃಷ್ಟಿಸಿದ್ದಾರೆ ಎಂದು ದೂರಿದರು. ಅಧಿಕಾರ ಹಂಚಿಕೆ ವಿಚಾರ ಕುರಿತ ಪ್ರಶ್ನೆಗೆ, ನಾನು ಯಾರ ಅಥವಾ ಯಾವುದರ ಬಗ್ಗೆಯೂ ಮಾತನಾಡುವುದಿಲ್ಲ. ನನ್ನ ಬಗ್ಗೆ ಯಾರೇ ಏನೇ ಹೇಳಿಕೆ ನೀಡಿದರೂ ಪ್ರತಿಕ್ರಿಯಿಸುವುದಿಲ್ಲ. ಪಕ್ಷದ ವಿಚಾರವನ್ನು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಸಚಿವರು ಹೇಳಿದರು.

**ಎಐಸಿಸಿ ವಕ್ತಾರರಾದ ಸಲಹೆ**

# ಜಿಪಂ, ತಾಪಂಗೆ ಮಹಿಳೆಯರು ಸಿದ್ಧರಾಗಿ: ಭವ್ಯ ನರಸಿಂಹಮೂರ್ತಿ

ಮೈಸೂರು: ಮುಂಬರುವ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಮಹಿಳೆಯರು ಸ್ಪರ್ಧೆ ಮಾಡಲು ಇಂದಿನಿಂದಲೇ ತಯಾರಿ ನಡೆಸಿ ಎಂದು ಎಐಸಿಸಿ ವಕ್ತಾರರಾದ ಭವ್ಯ ನರಸಿಂಹಮೂರ್ತಿ ಸಲಹೆ ನೀಡಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಿಳಾ ಸಹಕಾರ ವಿಭಾಗದವತಿಯಿಂದ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮಹಿಳಾ ನಾಯಕತ್ವ ವಿಚಾರವಾಗಿ ಕಾರ್ಯಾಗಾರವನ್ನು ಉದ್ದೇಶಿ ಮಾತನಾಡಿದರು. ಇಂದಿರಾಗಾಂಧಿ ಭಾರತದ ದೀರ್ಘಾವಧಿ ಪ್ರಧಾನ ಮಂತ್ರಿಯಾಗಿ ಇಡೀ ಮಹಿಳಾ ಸಮುದಾಯವನ್ನು ಪ್ರತಿನಿಧಿಸಿದವರಾಗಿದ್ದಾರೆ. ಒಟ್ಟಾರೆ ಜನಸಂಖ್ಯೆಯ ಅರ್ಧದಷ್ಟು ಇರುವ ಮಹಿಳೆಯರು ಆತ್ಮಸ್ಥೈರ್ಯದಿಂದ ಮುನ್ನುಗ್ಗಿದಾಗ ಮಾತ್ರ ಏನಾದರೂ ಸಾಧಿಸಲು ಸಾಧ್ಯ. ಸರ್ಕಾರ ಮಹಿಳೆಯರಿಗೆ 50 ಪರ್ಸೆಂಟ್ ಮೀಸಲಾತಿ ಕಲ್ಪಿಸಿ ಕೊಡುವ ಚಿಂತನೆಯಲ್ಲಿ ತೊಡಗಿದೆ. ಶಕ್ತಿ ಹಾಗೂ ಗ್ಯಾರಂಟಿ ಯೋಜನೆಗಳು ಮಹಿಳೆಯರ ಆರ್ಥಿಕ, ಸಾಮಾಜಿಕ, ಚಿಂತನ ಸಬಲೀಕರಣಕ್ಕೆ ಕಾರಣವಾಗಿದೆ. ಸಾಮಾಜಿಕ ಮಾಧ್ಯ ಮಗಳಲ್ಲಿಯೂ ಹೆಚ್ಚು ಮಹಿಳೆಯರು ಇರಬೇಕೆಂದು ಹೇಳಿದರು.



ಕಾರ್ಯಾಗಾರವನ್ನು ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಹಿಳಾ ಸಬಲೀಕರಣ ದೇಶದ ಸಬಲೀಕರಣ ಎಂದ ಅಂಬೇಡ್ಕರ್, ಗಾಂಧೀಜಿ ಕಂಡ ಕನಸು ಇಂದು ನನಸಾಗುವ ಸಂದರ್ಭ ಸೃಷ್ಟಿಯಾಗಿದೆ. ಸಂಸಾರ ಮುನ್ನಡೆಸುತ್ತಿರುವ ಮಹಿಳೆಯರ ಕೈಗಳಿಗೆ ಶಕ್ತಿ ತುಂಬುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ ಎಂದರು. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ ಮಹಿಳೆಯರು ರಾಜಕೀಯವಾಗಿ ಪ್ರಬುದ್ಧರಾದಾಗ ಮಾತ್ರ ಸಮಾಜವನ್ನು ಎದುರಿಸಲು ಸಾಧ್ಯ. ಮುಂಬರುವ ಚುನಾವಣೆಗಳಿಗೆ ಇಂದಿನಿಂದಲೇ ತಯಾರಿ ನಡೆಸಬೇಕು. ಸಹಕಾರ ವಿಭಾಗಕ್ಕೆ ನೇಮಕಗೊಂಡ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿ ಪಕ್ಷಕ್ಕೆ ನಿಷ್ಠೆಯಿಂದ ಇರಬೇಕು ಎಂದು ಹೇಳಿದರು. 16 ಬ್ಲಾಕಿನ ಮಹಿಳಾ ವಿಭಾಗದ ಅಧ್ಯಕ್ಷ ಹಾಗೂ ಜಿಲ್ಲಾ ಮಹಿಳಾ ಸಹಕಾರ ವಿಭಾಗದ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದರು. ಕೆಪಿಸಿಸಿ ಸಹಕಾರ ವಿಭಾಗದ ರಾಜ್ಯ ಅಧ್ಯಕ್ಷ ಧನರಾಜ್ ತಾಳಂಪಳ್ಳಿ, ಸಹಕಾರ ವಿಭಾಗದ ಮೈಸೂರು ಜಿಲ್ಲಾಧ್ಯಕ್ಷ ಎನ್.ಸಿದ್ದಯ್ಯ, ಮಹಿಳಾ ವಿಭಾಗದ ಅಧ್ಯಕ್ಷೆ ತಾರಾಕುಮಾರ್ ಗೌಡ, ಸಹಕಾರ ವಿಭಾಗದ ಕಾರ್ಯಾಧ್ಯಕ್ಷ ಸಂತೋಷ್ ಕುಮಾರ್ ಗೌಡ, ಡಿಸಿಸಿ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಶಿವಪ್ರಸಾದ್ ಇದ್ದರು.

# ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಚಾಲನೆ



ಗುಂಡ್ಲುಪೇಟೆ :-ಮಾಡ್ರಹಳ್ಳಿ ಗ್ರಾಮದಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದ ಅಡಿಯಲ್ಲಿ ಸಿ ಸಿ ರಸ್ತೆ ಮತ್ತೆ ಚರಂಡಿ ನಿರ್ಮಾಣ ಕಾಮಗಾರಿ ಮಾಡಲಾಗುತ್ತಿದೆ ಎಂದು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ತಿಳಿಸಿದರು.

ತಾಲೂಕಿನ ಮಾಡ್ರಹಳ್ಳಿ ಗ್ರಾಮದಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು ನಂತರ ಮಾತನಾಡಿ ಮುಖ್ಯಮಂತ್ರಿಗಳ 25-26ನೇ ಸಾಲಿನ ವಿಶೇಷ ಅನುದಾನದಲ್ಲಿ 50 ಕೋಟಿಯಲ್ಲಿ ಮಾಡ್ರಹಳ್ಳಿ ಗ್ರಾಮಕ್ಕೆ ನಲವತ್ತು ಲಕ್ಷ ವೆಚ್ಚದಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ ಎಂದರು.

ಕಳೆದ ಬಾರಿ ಅವೈಜ್ಞಾನಿಕವಾಗಿ ಚರಂಡಿ ನಿರ್ಮಾಣವಾಗಿದ್ದು ಇದ್ದರಿಂದ ಮೆಟ್ಟಿಲುಗಳನ್ನು ನಿರ್ಮಿಸಿಕೂಂಡು ಓಡಾಡುವಂತಹ ಪರಿಸ್ಥಿತಿ ಉಂಟಾಗಿದೆ ವಾಹನ ನಿಲುಗಡೆ ಸಮಸ್ಯೆ ಎದುರಾ ಗಿದ್ದು ಇದಕ್ಕೆ ಶಾಶ್ವತ ಪರಿಹಾರ ಕಂಡುಕೂಳ್ಳುವ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಗ್ರಾಮಕ್ಕೆ ಹೆಚ್ಚಿನ ಅನುದಾನ ನೀಡುವುದಾಗಿ ಬರವಸೆ ನೀಡದರು.

ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಬೆರಟಹಳ್ಳಿ 45 ಲಕ್ಷ ತೆರಕಣಾಂಬಿಗೆ 25 ಲಕ್ಷ ಗುರುವಿನಪುರ 40 ಲಕ್ಷ ಹುತ್ತೂರು 30ಲಕ್ಷ ಚಿರಕನಹಳ್ಳಿ 50 ಲಕ್ಷ ವೆಚ್ಚದಲ್ಲಿ ಅನುದಾನ ಹಂಚಿಕೆ ಮಾಡಲಾಗಿದೆ ಎಂದರು ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್ ಮುಖಂಡ ರಾಜಶೇಖರ. ದಸಂಸ ಮುಖಂಡ ರಂಗಸ್ವಾಮಿ. ರೈತ ಮುಖಂಡ ಮಹದೇವಪ್ಪ ಬಸವರಾಜಪ್ಪ. ಮಾಣಿಕ್ಯ. ಮಹದೇವಪ್ಪ. ಚನ್ನಪ್ಪ. ನಾಗಪ್ಪ. ಮಹೇಶ್ ಮಾಯಿ. ಇನ್ನು ಇತರರು ಹಾಜರಿದ್ದರು

# ಆದಿಚುಂಚನಗಿರಿ ಜಾತ್ರಾ ಮಹೋತ್ಸವ: ಅನ್ನದಾನ

ರಾಮನಗರ: ಆದಿಚುಂಚನಗಿರಿ ಜಾತ್ರಾ ಮಹೋತ್ಸವದ ಪ್ರಯುಕ್ತ ಬಿಜಿಎಸ್ ಭಕ್ತವೃಂದ ರಾಮನಗರ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಆವರಣದಲ್ಲಿ ಅರವಂಟಿಕೆ ಏರ್ಪಡಿಸಿದ್ದರು. ಇದೇ ವೇಳೆ ಕಾಂಗರೂ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಬೆಳ್ಳಿ ರಕ್ತನಿಧಿವತಿಯಿಂದ ರಕ್ತದಾನ ಶಿಬಿರ ನಡೆಯಿತು.

ಬಿಜಿಎಸ್ ಭಕ್ತವೃಂದ ಮತ್ತು ಕೆ.ಎಸ್.ಆರ್.ಟಿ.ಸಿ. ನೌಕರರು ಹಲವಾರು ವರ್ಷಗಳಿಂದ ಅರವಂಟಿಗೆ ನಡೆಸಿಕೊಂಡು ಜಾತ್ರೆಗೆ ತೆರಳುವ ಭಕ್ತರಿಗೆ ಅನ್ನದಾನ ವ್ಯವಸ್ಥೆ ಮಾಡುತ್ತಿದ್ದಾರೆ.

ರಾಮನಗರದಿಂದ ಆದಿಚುಂಚನಗಿರಿಗೆ ಕೆ.ಎಸ್.ಆರ್.ಟಿ.ಸಿ 60ಕ್ಕೂ ಹೆಚ್ಚು ಬಸ್‌ಗಳನ್ನು ನಿಯೋಜಿಸಿದ್ದರು. ಈ ಬಸ್ಸುಗಳು 100ಕ್ಕೂ ಹೆಚ್ಚು ಟ್ರಿಪ್‌ಗಳನ್ನು ಮಾಡುತ್ತಿವೆ ಎಂದು ಬಿಜಿಎಸ್ ಭಕ್ತವೃಂದದ ಸಿದ್ದಲಿಂಗೇಗೌಡ (ಮಧು) ತಿಳಿಸಿದರು. 13 ನೇ ವರ್ಷದ ಅರವಂಟಿಗೆಯನ್ನು ಈ ದಿನ ಆಯೋಜಿಸಲಾಗಿದೆ. ಸುಮಾರು 8000 ಮಂದಿಗೆ ಅನ್ನದಾನ ಮತ್ತು 2000 ಮಂದಿಗೆ ಆರೋಗ್ಯ ತಪಾಸಣೆಯನ್ನು ನಡಸಲಾಗಿದೆ. 41 ಯೂನಿಟ್ ರಕ್ತ ಸಂಗ್ರಹವಾಗಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಜನರ ಮನಸ್ಸಿನಲ್ಲಿ ಉಳಿಯುವಂತ ಕಾರ್ಯಕ್ರಮ ರೂಪಿಸಲು ಸಹಕಾರ ನೀಡಿದ ದಾನಿಗಳಿಗೆ, ಕಾಂಗರೂ ಆಸ್ಪತ್ರೆಯ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಅರವಂಟಿಗೆಯಲ್ಲಿ ಶಾಸಕ ಇಕ್ಬಾಲ್ ಹುಸೇನ್ ಭಾಗವಹಿಸಿ ಭಕ್ತರಿಗೆ ಅನ್ನದಾನ ಸೇವೆ ನಡೆಸಿದರು. ಆದಿ ಚುಂಚನಗಿರಿ ಶಾಖಾ ಮಠದ ಮುಖ್ಯಸ್ಥರಾದ ಶ್ರೀ ಅನ್ನದಾನೇಶ್ವರಸ್ವಾಮೀಜಿ, ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಯು.ನರಸಿಂಹಯ್ಯ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ಸತೀಷ್, ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿ ಪುರುಷೋತ್ತಮ, ವಿಭಾಗೀಯ ಸಂಚಲನಾಧಿಕಾರಿ ಚಂದ್ರಶೇಖರ್, ಘಟಕದ ಪ್ರಭಾರ ವ್ಯವಸ್ಥಾಪಕ ಶಂಕರ್, ಬಿಜಿಎಸ್ ಭಕ್ತವೃಂದದ ಪದಾಧಿಕಾರಿಗಳು, ಒಕ್ಕಲಿಗ ಸರ್ಕಾರಿ ನೌಕರರ ಸಂಘ ಮತ್ತು ನೇಗಿಲಯೋಗಿ ಟ್ರಸ್ಟ್ ಪದಾಧಿಕಾರಿಗಳು ಭಾಗವಹಿಸಿದ್ದರು.



# ಸಮಾನತೆ ಅಂಬೇಡ್ಕರ್ ಆಶಯ

## ಚಿಂತಕ ಡಾ.ದೇವರಾಜ್ ಹೇಳಿಕೆ । ನಾಗಮೋಹನ್ ದಾಸ್ ಅವರ ವರದಿ ಕುರಿತು ಅವಲೋಕನ

ಚಾಮರಾಜನಗರ: ಭಾರತದಲ್ಲಿರುವ ಜಾತಿ ಪದ್ದತಿ ಹಾಗೂ ಅಸಮಾನತೆಯನ್ನು ನಿರ್ಮೂಲನೆಯಾಗುವವರೆಗೆ ಹಾಗೂ ಸಮಾನತೆಯನ್ನು ಜಾರಿಯಾಗುವ ತನಕ ಮೀಸಲಾತಿ ಕಲ್ಪಿಸಿಕೊಡಬೇಕೆಂಬುವುದು ಸಂವಿಧಾನ ಶಿಲ್ಪ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯವಾಗಿತ್ತು. ಆದರೆ, ಇತ್ತೀಚಿನ ಬೆಳವಣ ಗೆಗಳು ಇದಕ್ಕೆ ತತ್ವರುದ್ದವಾಗಿದೆ ಎಂದು ಭೋಗಾಪುರ ವಸತಿಯುಕ್ತ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲರು ಹಾಗೂ ಚಿಂತಕರು ಆದ ಡಾ..ಪಿ. ದೇವರಾಜ್ ತಿಳಿಸಿದರು.

ನಗರದ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಚಾ.ನಗರದ ಪರಿವರ್ತನ ಅಧ್ಯಯನ ಕೇಂದ್ರ ಮತ್ತು ರೈಟ್ಬುಲ್ ಟ್ರಸ್ಟ್ ಆಯೋಜನೆ ಮಾಡಿದ್ದ ಸಂವಿಧಾನ ಮತ್ತು ಮೀಸಲಾತಿ ನಾಗ ಮೋಹನರ್ ದಾಸ್ ವರದಿ ಒಂದು ಅವಲೋಕನ ಹಾಗೂ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸ್ವಾತಂತ್ರ್ಯ ಪೂರ್ವದಿಂ ದಲು ರಾಜಮಹಾರಾಜನ ಆಡಳಿದಲ್ಲಿಂದಲೂ ಮೀಸಲಾತಿ ಜಾತಿಯಲ್ಲಿದೆ. 1935ರಲ್ಲಿ ತಮ್ಮ ಅಡಳಿತ ಅವಧಿಗಳಲ್ಲಿ ಶಾಹು ಮಹಾರಾಜ್, ನಾಲ್ವಡಿ ಕೃಷ್ಣರಾಜ್ ಒಡೆಯರು ಮೀಸಲಾತಿಯನ್ನು ನೀಡಿದ್ದರು. ಶಿಕ್ಷಣದಲ್ಲಿ ಮೀಸಲಾತಿ ಕೊಟ್ಟಿದ್ದರು. ಶೋಷಿತ ವರ್ಗಗಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದರು. ಇದರ ಬಗ್ಗೆ ಅಂಬೇಡ್ಕರ್ ಅವರು ಅಧ್ಯಯನ ಮಾಡಿ, ಅಂದಿನ ಬ್ರಿಟಿಷರ್ ಸರ್ಕಾರಕ್ಕೆ ಮೀಸಲಾತಿಯನ್ನು ನೀಡುವಂತೆ ಈಸ್ಟ್ ಇಂಡಿಯಾ ಕಂಪನಿಗೆ ಪತ್ರ ಬರೆದಿದ್ದರು. ಅಂದಿನ ಬ್ರಿಟಿಷ ಸರ್ಕಾರ ಒಪ್ಪಿತ್ತು. ಇಂಥ ಇತಿಹಾಸವನ್ನು ಹೊಂದಿರುವ ಮೀಸಲಾತಿ ಸ್ವಾತಂತ್ರ್ಯ ನಂತರ ಡಾ. ಬಿ.ಆರ್. ಅಂಭೇಡ್ಕರ್ ಅವರು ಸಂವಿಧಾನ ರಚನೆ ಮಾಡಿದ ಬಳಿಕ ಕಾನೂನು ವ್ಯಾಪ್ತಿಗೆ ಒಳಪಟ್ಟು, ಪರಿಣಾಮಕಾರಿಯಾಗಿ ಜಾರಿಯಾಗಲು ಸಾಧ್ಯವಾಯಿತು. ಶೋಷಿತರು , ಅವಕಾಶ ವಂಚಿತರು ಮೀಸಲಾತಿ ಮೂಲಕ ಹಕ್ಕುಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು ಎಂದರು.

ಕಳೆದ 75 ವರ್ಷಗಳಿಂದ ಮೀಸಲಾತಿ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಆದರೆ, ಈ ಅವಧಿಯಲ್ಲಿ ಎಷ್ಟು ಪ್ರಮಾಣದಲ್ಲಿ ಮೀಸಲಾತಿ ಜಾರಿಯಾಯಿತು. ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆ ಬಂದಿದೆಯೇ. ಒಬ್ಬ ವ್ಯಕ್ತಿಗೆ ಸಾಮಾಜಿಕ, ಶೈಕ್ಷಣ ?ಕ ಹಾಗೂ ಧಾಮಿಕವಾಗಿ ಸ್ವಾತಂತ್ರ್ಯ ದೊರೆಯುವವರೆಗೆ ಆತನಿಗೆ ಮೀಸಲಾತಿ ಅಗತ್ಯವಿದೆ. ಇನ್ನು ಸಹ ನಮ್ಮ ಜನ ಜಾತಿ ಪದ್ದತಿ ಮತ್ತು ಅಸ್ಪಶ್ಯತೆಯ ಬೂತದಲ್ಲಿ ಬದುಕುತ್ತಿದ್ದಾರೆ. ಇಂಥ ವಿಚಾರಗಳು ಚರ್ಚೆಯಾಗಬೇಕು. ಅದ? ಬಿಟ್ಟು, ಮಾದಿಗ, ಹೊಲಯ ಎಂಬ ವಿಚಾರಗಳನ್ನು ಮುನ್ನೆಲೆ ತಂದು ನಮ್ಮ ನಮ್ಮಲ್ಲಿ ಜಗಳಉಂಟು ಮಾಡುವ ಹುನ್ನಾರ ನಡೆಯುತ್ತಿದೆ. ಹೀಗಾಗಿ ನದಿ ನೀರು ಹಂಚಿಕೆ ವಿಚಾರದಲ್ಲಿ ರೈತರೇ ತಿರ್ಮಾನ ಮಾಡಿಕೊಂಡ ಮಾದರಿಯಲ್ಲಿ ಈ ಮೀಸಲಾತಿ ವಿಚಾರವನ್ನು ನಾವುಗಳೇ ತೀರ್ಮಾನ ಮಾಡಿಕೊಳ್ಳಲು ಅವಕಾಶ ಮಾಡಿಕೊಳ್ಳಿ ಎಂದರು.

ಅದಿ ಕರ್ನಾಟಕ, ಆದಿ ಅಂದ್ರ, ಅದಿ ದ್ರಾವಿಡ ಪದಗಳು ಜಾತಿ ಸೂಚಕ ಪದಗಳಾಗಿವೆ. ಇವುಗಳನ್ನು ಒಪ್ಪಿ ಗೆಜೆಟ್ ಆಗಿದೆ. ಇದನ್ನು ಬಿಡುವುದು ಎಂದರೆ ಅರ್ಥ. ಅಂಬೇಡ್ಕರ್ ಅವರು ಜಾತಿ ಪದ್ದತಿಯನ್ನು ವಿರೋಧಿಸಿ ಬೌದ್ದ ಧರ್ಮವನ್ನು ಸ್ವೀಕರಿಸಿದರು. ಹೀಗಾಗಿ ನಮ್ಮ ಜನ ಇನ್ನು ಮುಂದೆ ಜಾತಿ ಆಧಾರಿತ ಮೀಸಲಾತಿಯನ್ನು ಬಿಟ್ಟು ಧರ್ಮ ಆಧಾರಿತ ಮೀಸಲಾತಿಯನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ಹೇಳಿದರು.



### ಒಳ ಮೀಸಲಾತಿ ವರದಿಯೇ ಸಂವಿಧಾನ ವಿರೋಧಿ

**ಬೆಂಗಳೂರಿನ ತಹಶೀಲ್ದಾರ್ ನಾಗ ಸಿದ್ದಾರ್ಥ ಹೊಲೆಯರ್ ಮಾತನಾಡಿ, ನ್ಯಾ. ನಾಗ ಮೋಹನ ದಾಸ್ ಅವರು ನೀಡಿರುವ ಒಳ ಮೀಸಲಾತಿ ವರದಿಯೇ ಸಂವಿಧಾನ ವಿರೋಧಿಯಾಗಿದೆ. ಸಂವಿಧಾನದಲ್ಲಿ ಇದಕ್ಕೆ ಅವಕಾಶವಿಲ್ಲ. ಯಾವುದೇ ಜಾತಿಯನ್ನು ಮೀಸಲಾತಿ ಪಟ್ಟಿಗೆ ಸೇರ್ಪಡೆ ಮಾಡಲು ಹಾಗು ತೆಗೆದು ಹಾಕುವ ಅಧಿಕಾರ ಇರುವುದು ಸಂಸತ್‌ಗೆ ಮಾತ್ರ. ಇದನ್ನು ಅರ್ಥ ಮಾಡಿಕೊಂಡರೆ ಸಾಕು. ಇನ್ನು ಒಳ ಮೀಸಲಾತಿಯನ್ನು ಎಲ್ಲಿ ಜಾರಿ ಮಾಡಲು ಸಾಧ್ಯವಿದೆ. ಸಂವಿಧಾನ ಆಶಯ ಎಲ್ಲರಿಗೂ ಸಾಮಾಜಿಕ ನ್ಯಾಯ ಕೊಡುವುದು ಅಗಿದೆ. ಆದರೆ, ನಾಗ ಮೋಹನ್ ದಾಸ್ ಅವರ ವರದಿಯಲ್ಲಿ ಅಲೆಮಾರಿಗಳಿಗೆ ದೊಡ್ಡ ಅನ್ಯಾಯವಾಗಿದೆ. ಇದು ಸಂವಿಧಾನ ವಿರೋಧಿ ಅಲ್ಲವೇ ಎಂದು ಪ್ರಶ್ನೆ ಮಾಡಿದರು.**

### ಕೇವಲ ಪರಿಶಿಷ್ಟ ಜಾತಿಗೆ ಮೀಸಲಾತಿ ಕಲ್ಪಿಸಲಿಲ್ಲ

**ಅಂಬೇಡ್ಕರ್ ಅವರು ಕೇವಲ ಪರಿಶಿಷ್ಟ ಜಾತಿಗೆ ಮೀಸಲಾತಿ ಕಲ್ಪಿಸಲಿಲ್ಲ. ಎಲ್ಲಾ ವರ್ಗದ ಬಡವರು ಹಾಗೂ ಶೋಷಿತ ಸಮುದಾಯಗಳಿಗೆ ಮೀಸಲಾತಿಯನ್ನು ಕಲ್ಪಿಸಿಕೊಟ್ಟರು. ಸ್ವಾತಂತ್ರ್ಯ ಬಳಿಕ ಅವರು ಸಂವಿಧಾನ ರಚನಾ ಸಮಿತಿಗೆ ಹೋಗುವುದನ್ನು ತಡೆಯಲು ಪಟ್ಟಭದ್ರ ಶಕ್ತಿಗಳು ಚುನಾವಣೆಯಲ್ಲಿ ಸೋಲಿಸಿದರು. ಇಂಥ ಕ್ಲಿಷ್ಟಕರ ಪರಿಸ್ಥಿತಿಯಲ್ಲಿಯೂ ಅಂಬೇಡ್ಕರ್ ಅವರು ನನ್ನ ಸಮುದಾಯಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ ಎಂಬ ಸಂಕಲ್ಪ ಮಾಡಿ, ಸಂವಿಧಾನ ರಚನೆ ಮಾಡಿದರು. ಸಂಸತ್‌ನಲ್ಲಿ ಈ ಬಗ್ಗ ಚರ್ಚೆ ನಡೆದಾಗ ಸಮರ್ಥವಾಗಿ ವಾದವನ್ನು ಮಂಡಿಸಿದ್ದಾರೆ. ಹೀಗಾಗಿ ಕಷ್ಟಪಟ್ಟು ನೀವೇ ಮತ ಹಾಕಿ ಅಧಿಕಾರಕ್ಕೆ ತಂದಿರುವ ಸರ್ಕಾರದ ವಿರುದ್ದ ಹೋರಾಟ ಮಾಡುವುದು. ಪ್ರತಿಭಟನೆ, ಭಾವಚಿತ್ರಗಳನ್ನು ಸುಟ್ಟುವುದರಿಂದ ಪ್ರಯೋಜನ ವಿಲ್ಲ. ಸೌಹಾರ್ದತೆಯಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಮುಂದಾಗಬೇಕು ಎಂದರು.**

ನಂತರ ನಡೆದ ಸಂವಾದದಲ್ಲಿ ಉದ್ಯಮಿ ನಾಗಯ್ಯ, ವಕೀಲರ ಸಂಘದ ಅಧ್ಯಕ್ಷ ರಾಮಸಮುದ್ರ ಪುಟ್ಟಸ್ವಾಮಿ, ದಲಿತ ಮುಖಂಡರಾದ ಸಿ.ಎಂ. ಕೃಷ್ಣಮೂರ್ತಿ, ಶೇಖರ್ ಬದ್ದ, ಎಸ್. ಕುಮಾರ್ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಚಾ.ನಗರದ ಪರಿವರ್ತನ ಅಧ್ಯಯನ ಕೇಂದ್ರ ಮತ್ತು ರೈಟ್ಬುಲ್ ಟ್ರಸ್ಟ್ ಮಹೇಂದ್ರ, ಪರಿವರ್ತನ ಅಧ್ಯಯನ ಕೇಂದ್ರದ ನಟರಾಜು, ರಮೇಶ್ ಉತ್ತುವಳ್ಳಿ, ಮಹೇಶ್ ಅಮ್ಮನಪುರ, ಕಾಂತರಾಜ್ ಕೊಳ್ಳೇಗಾಲ ಮೊದಲಾಧವರು ಇದ್ದರು

# ಮಾ. 4 ರಂದು ಶ್ರೀ ಯೋಗಿನಾರಾಯಣ ಜಯಂತಿ

ಚಾಮರಾಜನಗರ, ಶ್ರೀ ಯೋಗಿ ನಾರಾಯಣ ಜಯಂತೋತ್ಸವದ ಅಂಗವಾಗಿ ದಾಸಬಣಜಿಗ ಸಂಘದ ಆಶ್ರಯದಲ್ಲಿ ಮಾ, 4 ರಂದು ಬುಧವಾರ ಶ್ರೀ ಯೋಗಿ ನಾರಾಯಣರ ಭಾವಚಿತ್ರ ಮೆರವಣಿಗೆ ನಡೆಯಲಿದೆ.

ಅಂದು ಬೆಳಿಗ್ಗೆ 10-30 ಕ್ಕೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಿಂದ ಮೆರವಣಿಗೆ ಹೊರಟು ನಗರಸಭೆ ರಸ್ತೆ, ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂತೆ ಮರಹಳ್ಳಿ ವೃತ್ತ, ಡಿವಿಯೇಷನ್ ಮೂಲಕ ಭುವನೇಶ್ವರಿ ವೃತ್ತ ತಲುಪಲಿದೆ. ಬಳಿಕ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ತೆರಳಿ ಡಾ, ರಾಜ ಕುಮಾರ್ ಕಲಾಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಚುನಾಯಿತ ಪ್ರತಿನಿಧಿಗಳು, ಅತಿಥಿ ಗಣ್ಯರು ಭಾಗವಹಿಸಲಿದ್ದಾರೆ.

ಕುಲಬಾಂಧವರು ಹಿರಿಯರು ಮತ್ತು ಕಿರಿಯರು ಮಹಿಳೆ ಯರು, ಮಹಿಳೆ ಸಂಘದ ಸದಸ್ಯರು ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಬಣಜಿಗ ಸಂಘದ ಪ್ರಕಟಣೆಯಲ್ಲಿ ಕೋರಲಾಗಿದೆ.

**VARTHAMAN KANNADA DAILY NEWS PAPER (KARNATAKA) STATMENT-ABOUT OWNERSHIP AND OTHER PARTICULAR ABOUT NEWS PAPER VARTHAMAN, MYSORE**

**FORM IV**

**PLACE OF PUBLICATION :** MYSORE
**PERIODICITY OFITS :** DAILY MORNING
**PRINTERS NAME :** M.S.SHIVAPRAKASH
**WHETHER CITIZEN OF INDIA :** YES
**ADDRESS :** IDEAL OFFSET PRINTERS NO. 337, SLJ TEMPLE STREET, OLD TOWN, MANDYA-571491
**MOBILE :** 944810 1147
**PUBLISHER NAME:** MIHIR AKASH K.R
**WHETHER CITIZEN OF INDIA:** YES
**ADDRESS :** NO 170, NIRVIKALPA ROAD, E&F BLOCK, RAMAKRISHNA NAGAR, MYSORE - 570022
**MOBILE :** 8904581258
**EDITOR'S NAME :** K.N.RAVI
**WHETHER CITIZEN OF INDIA:** YES
**ADDRESS :** NO 170, NIRVIKALPA ROAD, E&F BLOCK, RAMAKRISHNA NAGAR, MYSORE - 570022
**NAME AND ADDRESS OF :** NOT APPLICABLE
INDIVIDUALS WHO OWN THE NEWS PAPERS AND PARTNER OF SHARE HOLDERS HOLDING MORE THAN OF PERCENT OF THE TOTAL CAPITAL

IS. MIHIR AKASH K.R. HERE BY DECLARE TRAT THE PARTICULARS GIVEN ABOVE ARE TRUE AND TO THE BEST OF MY KNOWLEDGE sd/- MIHIR AKASH K.R
PLACE: MYSORE
DATE: 03-03-2026 PUBLISHER

# ಕೂರ್ಗಳ್ಳಿ ಪಬ್ಲಿಕ್ ಶಾಲೆ ಕೊಠಡಿ ಗುದ್ದಲಿಪೂಜೆ



ಮೈಸೂರು: ನಗರದ ಕೂರ್ಗಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ನಲ್ಲಿ ಎರಡು ಶಾಲಾ ಕೊಟ್ಟಡಿಯ ಕಟ್ಟಡದ ಪೂಜೆ, ಶಾಲೆಯ ದ್ವಾರದ ಗುದ್ದಲಿ ಪೂಜೆಯನ್ನು ಶಾಸಕ ಜಿ.ಟಿ.ದೇವೇಗೌಡ ನೇರವೇರಿಸಿದರು.

ಯೋಗ ನರಸಿಂಹಸ್ವಾಮಿ ದೇವಸ್ಥಾನದ ವ್ಯವಸ್ಥಾಪಕ ಶ್ರೀನಿವಾಸ್, ಉಪನಿರ್ದೇಶಕ ಉದಯ್ ಕುಮಾರ್, ಗ್ರಾಮದ ಮುಖಂಡರಾದ ಜಿ.ಪಂ ಮಾಜಿ ಅಧ್ಯಕ್ಷ ಮಹದೇವು, ಗ್ರಾ.ಪಂ. ಮಾಜಿ ಸದಸ್ಯ ನಂಜುಂಡೇಗೌಡ, ಚೆನ್ನಪ್ಪ ಶಾಲೆಯ ಎಸ್ ಡಿಎಂಸಿ ಅಧ್ಯಕ್ಷ ರೇವಣ್ಣ, ಆಕಾಶ್ ಪ್ಯಾಕೇಜಿಂಗ್ ಮಾಲೀಕ ಗುರುರಾಜ್, ಬಿಆರ್ ಸಿ ಗೀತಾ, ಇಸಿಓ ಸುಬ್ಬಾಶೆಟ್ಟಿ, ಸಿಆರ್ ಪಿ ದನಂಜಯ್, ಮುಖ್ಯಶಿಕ್ಷಕ ನಾಗರಾಜು, ರಿಟೈರ್ಡ್ ಮುಖ್ಯ ಶಿಕ್ಷಕ ನರಸಿಂಹಮೂರ್ತಿ, ಸತೀಶ್, ಪಂಚಾಯಿತಿ ಮಾಜಿ ಸದಸ್ಯ ಜಿಮ್ ರಾಮು, ಮಾದೇಶ್, ರಕ್ತದಾನಿ ಮಂಜು, ಪಂಚಾಯತಿ ಮಾಜಿ ಅಧ್ಯಕ್ಷೆ ನಾಗರತ್ನ, ಭೈರಪ್ಪ, ಧನಂಜಯ, ಜಿಮ್ ಪ್ರಕಾಶ್, ಮುದ್ದಪ್ಪ, ರಾಮಪ್ಪ, ಕೃಷ್ಣಪ್ಪ, ಕೃಷ್ಣ, ನಿಂಗೇಗೌಡ, ಮೀಸೆ ಇನ್ನಿತರರು ಉಪಸ್ಥಿತರಿದ್ದರು.

# ಆದಿವಾಸಿ ಒಕ್ಕಲೆಬ್ಬಿಸುತ್ತಿರುವುದೇ ಸವಾಲು

ಮೈಸೂರು: ಅಭಿವೃದ್ಧಿಯ ಹೆಸರಿನಲ್ಲಿ ಆದಿವಾಸಿಗಳ ಬುಡಕಟ್ಟು ಜನರನ್ನು ಪೈಪೋಟಿಯಿಂದ ಒಕ್ಕಲೆಬ್ಬಿಸುತ್ತಿರುವುದೇ ದೊಡ್ಡ ಸವಾಲಾಗಿದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಕೇಂದ್ರದ ಹಿರಿಯ ಪ್ರಾಧ್ಯಾಪಕ ಪ್ರೊ.ಜೆ. ಸೋಮಶೇಖರ್ ತಿಳಿಸಿದರು.



ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಕರ್ನಾಟಕ ರಾಜ್ಯ ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸೋಮವಾರ ನಡೆದ ಒಂದು ದಿನದ ರಾಷ್ಟ್ರೀಯ ವಿಚಾರಣ ಸಂಕಿರಣದಲ್ಲಿ ಬುಡಕಟಟು ಸಮುದಾಯದ ಸಮಸ್ಯೆಗಳ ಕುರಿತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬುಡಕಟ್ಟು ಜನರು ಕಾಡಿನ ಸಂಪತ್ತನ್ನು ರಕ್ಷಣೆ ಮಾಡುತ್ತಿದ್ದಾರೆ. ಸಂವಿಧಾನದಲ್ಲಿ ಬುಡಕಟ್ಟು ಜನರಿಗೆ ವಿಶೇಷವಾದ ಯೋಜನೆ ರೂಪಿಸಲು ಅವಕಾಶಕೊಟಟಿದೆ. ಆದರೆ ಕಾಡಿನ ಬದುಕಿಗೆ ಒಗ್ಗಿರುವವರನ್ನು ನಾಡಿನ ಬದುಕಿಗೆ ಒಗ್ಗಿಸುವುದೇ ದೊಡ್ಡ ಸವಾಲಾಗಿದೆ. ಬುಡಕಟ್ಟು ಜನರನ್ನು ಕಾಡಿನಿಂದ ನಾಡಿಗೆ ಹೊರಹಾಕಿದಾಗ ಅವರು, ಅನುಭವಿಸುವ ತೊಂದರೆಗಳು ಹಾಗೂ ಕಾಡಿನ ಮಕ್ಕಳಿಗೂ ನಾಡಿನ ಮಕ್ಕಳಿಗೂ ಇರುವ ವ್ಯತ್ಯಾಸವನ್ನು ನೋಡಬೇಕಾಗಿದೆ ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಸಿ.ಶಿವಕುಮಾರ್, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ಮಾತನಾಡಿದರು. ವಿಚಾರಸಂಕಿರಣದಲ್ಲಿ ಡಾ. ಕೃಷ್ಣಮೂರ್ತಿ, ಡಾ.ಕೆ.ವಿ.ಮೋಹನ್‌ಕುಮಾರ್, ಡಾ. ಕಲಾವತಿ, ಲೆಕ್ಕಾಧಿಕಾರಿ, ಬಿ.ಆರ್.ಭವ್ಯ, ಅಧೀಕ್ಷಕಿ ಎಂ.ವಿ.ನಾಗರತ್ನ, ಕೆ.ರಮೇಶ್, ಡಾ.ರವಿಕುಮಾರ್, ಡಾ.ಎಸ್.ಎಂ.ಮುತ್ತಯ್ಯ, ಎಂ.ಸಿ.ವೇಣುಕಾಂತ, ಭರತ್‌ಕುಮಾರ್, ಎಂ.ಮನೋಜ್, ಆರ್. ಮಮತಾ, ಪುಷ್ಪಲತಾ, ಸಿದ್ದರಾಜು ಹಾಜರಿದ್ದರು.

# ಚಿರತೆ ಮೃತದೇಹ ಪತ್ತೆ

ಗುಂಡ್ಲುಪೇಟೆ :-ರಂಗೂಪುರ ಗ್ರಾಮದ ಹೂರವಲಯದ ಗುಡ್ಡದಲ್ಲಿ ಚಿರತೆ ಮೃತದೇಹ ಪತ್ತೆಯಾಗಿದೆ ಗುಡ್ಡದ ಸಮೀಪ ಮಹೇದವಪ್ಪ ಎಂಬುವರ ಜಮೀನಿನ ಬಳಿ ಚಿರತೆ ಮೃತದೇಹ ನೋಡಿದ್ದ ಗ್ರಾಮಸ್ಥರು ಮಾಹಿತಿ ನೀಡಿದರು.

ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು. ಚಿರತೆ ಒಂದರಿಂದ ಎರಡು ವರ್ಷ ಪ್ರಾಯದಾಗಿದ್ದು ಮುಳ್ಳು ಹಂದಿಯನ್ನು ತಿನ್ನುವ ಪ್ರಯತ್ನದಲ್ಲಿ ಅಗಿರುವ ಗಾಯಗಳಿಂದ ಮೃತಪಟ್ಟಿರಬಹುದು ಎಂದು ಅಂದಾಜಿಸಲಾಗಿದೆ ಗುಂಡ್ಲುಪೇಟೆ ಪಶು ವೈದ್ಯಾಧಿಕಾರಿ ಪ್ರಯೋಗಾಲಯಕ್ಕೆ ಕಳುಹಿಸಲು ಮಾದರಿ ಸಂಗ್ರಹಿಸಿ ಮರಣೋತ್ತರ ಪರೀಕ್ಷೆ ನಡೆಸಿದರು ನಂತರ ಅಂತ್ಯಕ್ರಿಯ ನಡೆಸಲಾಯಿತು.



### 25 ವರ್ಷಗಳ ಬಳಿಕ ವಿದ್ಯಾರ್ಥಿಗಳ ಸಮಾಗಮ

# ಕ್ರಿಸ್ತರಾಜ ಶಾಲೆಯಲ್ಲಿ ಗುರುವಂದನಾ, ಸ್ನೇಹ ಸಮ್ಮಿಲನ

ಚಾಮರಾಜನಗರ:ನಗರದ ರಾಮಸಮುದ್ರ ಕ್ರಿಸ್ತರಾಜ ಬಾಲರಪಟ್ಟಣ ವಿದ್ಯಾಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಂದ ಗುರುಗಳಿಗೆ ನಮನ, ಸಿಆರ್ ಬಿಪಿಗೆ ವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ಭಾನುವಾರ ಅರ್ಥಪೂರ್ಣವಾಗಿ ನಡೆಯಿತು.

25 ವರ್ಷಗಳ ಬಳಿಕ ವಿದ್ಯಾರ್ಥಿಗಳ ಸಮಾಗಮ, ಹಳೇ ದಿನಗಳ ಮೆಲುಕು, ಶಾಲಾ ಕ್ಷಣಗಳ ಸ್ಮರಣೆಯು ಭಾವ ಸ್ಪರ್ಶಿ ಕ್ಷಣಗಳಿಗೆ ಸಾಕ್ಷಿಯಾಯಿತು.

1997-1998 ರ ಸಾಲಿನ ಏಳನೇ ತರಗತಿ ಮತ್ತು 2000-2001ರ ಸಾಲಿನ ಹತ್ತನೇ ತರಗತಿಯ ಹಳೆಯ ವಿದ್ಯಾರ್ಥಿಗಳು ಒಂದೆಡೆ ಸೇರಿ ಸಂಭ್ರಮದಲ್ಲಿ ಮಿಂದೆದ್ದರು. ಶಾಲೆಗಳಲ್ಲಿ ವಿದ್ಯಾಭ್ಯಾಸ ಕಲಿತ ಅಂದಿನ ವಿದ್ಯಾರ್ಥಿಗಳು ಇದೀಗ ವಿವಿಧ ವೃತ್ತಿಯಲ್ಲಿ ಜೀವನವನ್ನು ಕಟ್ಟಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ತಮಗೆ ಅಕ್ಷರ ಕಲಿಸಿದ ಗುರುಗಳಿಗೆ ಗೌರವ ಸಲ್ಲಿಸಲು ಇಂದು ಸಮ್ಮಿಲನಗೊಂಡಿದ್ದರು. ವಿವಿಧ ವಿಷಯಗಳ ಶಿಕ್ಷಕರಿಗೆ ಸನ್ಮಾನಿಸಿ ಕಲಿಕಾ ಋಣ ತೀರಿಸುವ ಕೆಲಸ ಮಾಡಿದರು. ಜತೆಗೆ, ಹಳೇ ಸಹಪಾಠಿಗಳೊಂದಿಗೆ ಹರಟೆ ಹೊಡೆದು ಶಾಲಾ ಜೀವನದ ಚಟುವಟಿಕೆಗಳನ್ನು ಸ್ಮರಿಸಿಕೊಂಡರು.



ಗುರುಗಳಿಗೆ ಗೌರವ ಸಮರ್ಪಣೆ:ನಿವೃತ್ತ ಶಿಕ್ಷಕರಾದ ಜೋಸೆಫ್ ರಾಜ್, ಸುಜಯ್ ಕುಮಾರ್, ಪುಟ್ಟವೀರಪ್ಪ, ನಿರಂಜನ್ ಕುಮಾರ್, ನಿರ್ಮಲ ಮೇರಿ, ಎಲಿಜಬೆತ್ ಮೇರಿ, ನಾಗರಾಜು, ಸರ್ವಮಂಗಳ, ಸವಿತಾ, ಫ್ರಾನ್ಸಿಸ್ ಬಾಬು, ನರಸಿಂಹಯ್ಯ, ಫಿಲೋಮಿನ, ನಟರಾಜು, ಯೂಸೆಫ್, ಫಿಲೋಮಿನ ಮೆಂಥೋರ್, ರೂಲ್ದ್ ಮೇರಿ, ಚಿನ್ನಯ್ಯ, ಮೂರ್ತಿ, ಲಕ್ಷ್ಮಣ್, ಪುಷ್ಪಕುಮಾರಿ, ಸ್ಟೆಲಾಮೇರಿ, ಜೋಸೆಫ್, ಸಿಂಥೆ ಅಲುವೇರ, ಶಿವನಂಜಯ್ಯ, ಮಾರ್ಗರೇಟ್, ಜಾನ್ವಿಟರ್, ಶಾಂತಕುಮಾರಿ, ಮೇರಿ, ಡ್ಯಾನಿ, ನಾಗರಾಜು ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

ಬ್ರದರ್ ಜಾನ್ ಪೀಟರ್, ಬ್ರದರ್ ಚಾರ್ಲ್ಸ್ ಅವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಎಲ್ಲಾ ವಿದ್ಯಾರ್ಥಿಗಳು ಶುಭ ಕೋರಿದರು. ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಮುಖ್ಯ ಶಿಕ್ಷಕ ಸುಜಯ್ ಕುಮಾರ್ ಮಾತನಾಡಿ, ನೀವು ಶಾಲೆಯಲ್ಲಿ ಓದುವ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸಬೇಕು ಎಂಬ ಕಾರಣಕ್ಕಾಗಿ ನಿಮ್ಮೊಂದಿಗೆ ನಿಷ್ಠುರವಾಗಿ ನಡೆದುಕೊಂಡಿರುವುದು ನೆನಪಿಗೆ ಬರುತ್ತಿದೆ. ಮುಂದಿನ ಜೀವನದಲ್ಲೂ ಚೆನ್ನಾಗಿರಿ ಎಂದು ಶುಭಕೋರಿದರು.

**ಸಂಸ್ಕಾರವನ್ನು ಮುಂದಿನ ಪೀಳಿಗೆಗೂ ಕಲಿಸಿ**

ನಿವೃತ್ತ ಶಿಕ್ಷಕ ನಿರಂಜನ್ ಕುಮಾರ್ ಮಾತನಾಡಿ, ನಮ್ಮ ಉದ್ಯೋಗವನ್ನು ಪ್ರೀತಿಯಿಂದ ಪ್ರಾಮಾಣಿಕವಾಗಿ ಮಾಡಿದ್ದೇವೆ. ಗೌರವ ಕೊಟ್ರೆ ತುಂಬಾ ಸಂತಸ. ನಿಮ್ಮಲ್ಲಿ ಒಂದು ಕೃತಜ್ಞತೆ ಇದೆ ಉಪಕಾರ ಸ್ಮರಣೆ ಇದೆ. ನಿಮ್ಮಲ್ಲಿ ಒಂದು ಸಂಸ್ಕಾರ ಇದೆ. ಅದು ಇತ್ತೀಚಿನ ದಿನಗಳಲ್ಲಿ ಕಾಣೆಯಾಗಿದೆ. ನೀವು ಒಬ್ಬ ಶಿಕ್ಷಕರಾಗಿದ್ದರೆ, ಸ್ವಂತ ಮಕ್ಕಳ ಜೊತೆ ನಿಮ್ಮ ಶಾಲೆಯ ಮಕ್ಕಳಿಗೂ ವಿದ್ಯೆಯ ಜೊತೆಗೆ ಸಂಸ್ಕಾರ ಕಲಿಸುವಂತೆ ಸಲಹೆ ನೀಡಿದರು. ವಿದ್ಯಾ ಸಂಸ್ಥೆ ಸಂಸ್ಥಾಪಕರಾದ ರೆ.ಬ್ರದರ್ ರೋಮಲಸ್ ಅವರ ಪುಣ್ಯ ಸ್ಮರಣೆ ಪ್ರಯುಕ್ತ ವಿದ್ಯಾರ್ಥಿಗಳ ಮೊಂಬತ್ತಿಹಚ್ಚಿ ಒಂದು ನಿಮಿಷ ಮೌನಾಚರಣೆ ಮಾಡಿ ಗೌರವ ಸಲ್ಲಿಸಲಾಯಿತು. ಸಾಗರ್ ಪ್ರಾಸ್ತಾವಿಕ ಭಾಷಣ ಮಾಡಿದರು.ಪ್ರಕಾಶ್ ನಿರೂಪಿಸಿದರು, ಶಿವಕುಮಾರ್ ಸ್ವಾಗತಿಸಿದರು, ಡಾ.ನಾಗೇಂದ್ರ ಪ್ರಸಾದ್ ವಂದಿಸಿದರು.

# ಮದ್ಯದಂಗಡಿ ತೆರೆಯದಂತೆ ಮಹಿಳೆಯರ ಮನವಿ



ಎಚ್.ಡಿ.ಕೋಟೆ: [illegible]ಲೆಹುಂಡಿ ಗ್ರಾಮದ ಸರ್ವೆ ನಂಬರ್ 16/2 ರಲ್ಲಿ ಎನ್. ಬಸವ ರಾಜ್ ಬಿನ್ ಪಿ.ನಿಂಗೇ ಗೌಡ ಅವರ ಜಮೀನಿನಲ್ಲಿ ಸಿಎಲ್ 7 ಮದ್ಯದಂಗಡಿ ತೆರೆಯುತ್ತಿರುವುದನ್ನು ತಡೆ ಹಿಡಿಯಬೇಕು ಎಂದು ಗ್ರಾಮದ ಮಹಿಳೆಯರು ಅಬಕಾರಿ ಇನ್ಸ್ಪೆಕ್ಟರ್ ಶಿವರಾಜ್‌ಗೆ ಮನವಿ ಪತ್ರ ಸಲ್ಲಿಸಿದರು.

ಗ್ರಾಮದ ಮಹಿಳೆಯರಾದ ಸರೋಜಮ್ಮ ಮತ್ತು ಸುಶೀಲಾ ಮಾತನಾಡಿ, ಮದ್ಯದಂಗಡಿ ತೆರೆಯುತ್ತಿರುವ ಜಾಗದಲ್ಲಿ ಸಾರ್ವಜನಿಕ ಬಸ್ ನಿಲ್ದಾಣ ಇದ್ದು, ದಲಿತರು ಮತ್ತು ಹಾಡಿ ಜನಾಂಗದವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತಿರುವುದರಿಂದ, ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ. ಈಗಾಗಲೇ ಆ ಸ್ಥಳದಲ್ಲಿ ಎಂಟು ಜನ ಅಪಘಾತವಾಗಿ ಸಾವನ್ನಪ್ಪಿದ್ದಾರೆ. ಇತ್ತೀಚಿನ ಯುವಕರು ಶಾಲೆ ಬಿಟ್ಟು ದುಡಿದ ಹಣವನ್ನು ಕುಡಿತಕ್ಕೆ ಬಳಸಿಕೊಂಡು ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಆದ್ದರಿಂದ, ಆ ಸ್ಥಳದಲ್ಲಿ ಯಾವುದೇ ಕಾರಣಕ್ಕೂ ಬಾರ್ ತೆರೆಯಬಾರದು. ಒಂದು ವೇಳೆ ತೆರೆದರೆ ಬೃಹತ್ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಸಿದರು.

ತಾ.ಪಂ ಮಾಜಿ ಸದಸ್ಯ ಆರ್. ಎಂ.ಚಂದ್ರೇಗೌಡ ಮಾತನಾಡಿ, ಬಾರ್ ತೆರೆಯಲು ಉದ್ದೇಶಿಸಿರುವ ಸ್ಥಳವು ಸೂಕ್ಷ್ಮ ವಲಯವಾಗಿದೆ. ಯಾವುದೇ ಕಾರಣಕ್ಕೂ ಮದ್ಯದ ಅಂಗಡಿಯನ್ನು ತೆರೆಯಬಾರದು ಇಲ್ಲಿ ದಲಿತರು ಹಾಡಿ ಜನಾಂಗದವರು ವಾಸ ಮಾಡುತ್ತಿದ್ದಾರೆ ಒಂದು ವೇಳೆ ಮದ್ಯದ ಅಂಗಡಿ ತೆರೆದರೆ ಅವರು ಕುಡಿದು ಜೀವನವನ್ನು ಆಳು ಮಾಡಿಕೊಳ್ಳುತ್ತಾರೆ ಎಂದು ಹೇಳಿದರು.

ಗ್ರಾ.ಪಂ ಮಾಜಿ ಅಧ್ಯಕ್ಷ ವೀರೇಗೌಡ ಮಾತನಾಡಿ, ಈ ಸ್ಥಳದಲ್ಲಿ ಈಗಾಗಲೇ ಎಂಟು ಜನ ಅಪಘಾತವಾಗಿ ಮರಣವನ್ನು ಹೊಂದಿದ್ದಾರೆ ಈ ಜಾಗವನ್ನು ಹೊರತು ಪಡಿಸಿ ಬೇರೆ ಎಲ್ಲಾದರೂ ಮಾಡಿದರೆ ನಮ್ಮ ತಂಟೆ ತಕರಾರು ಇಲ್ಲ ಈ ವಿಚಾರವಾಗಿ ನಾನು ಈಗಾಗಲೇ ಶಾಸಕರು ಮತ್ತು ಅಬಕಾರಿ ಇಲಾಖೆಯವರ ಹತ್ತಿರ ಮಾತನಾಡಿದ್ದೇನೆ ಇನ್ಸ್ಪೆಕ್ಟರ್ ಸ್ಥಳವನ್ನು ಪರಿಶೀಲನೆ ಮಾಡಿ ಮದ್ಯದ ಅಂಗಡಿ ತೆರೆಯುವುದನ್ನು ನಿಲ್ಲಿಸಬೇಕು ಎಂದು ಹೇಳಿದರು. ಸರೋಜಾ, ಜ್ಯೋತಿ, ಯಶೋದಮ್ಮ, ಚೆನ್ನಾಜಮ್ಮ, ಗೀತಾ, ಜಯಮ್ಮ, ರತ್ನಮ್ಮ, ಜವರಮ್ಮ, ಜಯಶ್ರೀ, ಬೀರಮ್ಮ, ಶಶಿಕಲಾ, ಮಂಗಳಮ್ಮ, ಪುಟ್ಟನಿಂಗಮ್ಮ, ಶೋಭಾ ಸೇರಿದಂತೆ ಅನೇಕರಿದ್ದರು.

### ಹಲವು ಭಾರಿ ಮನವಿ ಸಲ್ಲಿಕೆ

**ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ ಮಹದೇವಪ್ಪ, ಶಾಸಕ ಅನಿಲ್ ಚಿಕ್ಕಮಾದು, ಜಿಲ್ಲಾಧಿಕಾರಿ, ತಹಶೀಲ್ದಾರ್, ಅಬಕಾರಿ ಕಮಿಷನರ್, ಅಬಕಾರಿ ಇನ್ಸ್ಪೆಕ್ಟರ್, ಗ್ರಾಮ ಪಂಚಾಯಿತಿ ಎಲ್ಲರಿಗೂ ಮಧ್ಯದ ಅಂಗಡಿ ತಡೆ ಹಿಡಿಯುವಂತೆ ಗ್ರಾಮಸ್ಥರು ಮನವಿ ಪತ್ರ ಸಲ್ಲಿಸಿದ್ದಾರೆ.**

# ಉಚಿತ ಕಣ್ಣಿನ ತಪಾಸಣಾ ಶಿಬಿರ



ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ಉಚಿತ ಕಣ್ಣಿನ ತಪಾಸಣಾ ಶಿಬಿರನಡೆಯಿತು.

ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ,ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 230 ಮಂದಿ ತಪಾಸಣೆ ಮಾಡಿಸಿಕೊಂಡರು. 90 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು.

**230 ಮಂದಿ ತಪಾಸಣೆ, 90 ಮಂದಿಗೆ ಶಸ್ತ್ರ ಚಿಕಿತ್ಸೆಗೆ ಆಯ್ಕೆ**

ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ,ರೋಟರಿ ಸಂಸ್ಥೆಯು ಪ್ರತಿ ತಿಂಗಳು ಮೊದಲನೆಯ ಭಾನುವಾರ ಉಚಿತ ನೇತ್ರ ತಪಾ ಸಣಾ ಶಿಬಿರವನ್ನು ಅಯೋಜಿಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆಯುತ್ತಿರುವುದು ತುಂಬಾ ಸಂತಸವಾಗಿದ್ದು,ಮುಂದಿನ ಶಿಬಿರದ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಶಿಬಿರದಲ್ಲಿ ರೋಟರಿ ಸಂಸ್ಥಾಪಕ ಸದಸ್ಯ ರಾದ ಸಿ.ವಿ.ಶ್ರೀನಿವಾಸಶೆಟ್ಟಿ, ಜಿ.ಆರ್.ಅಶ್ವಥ್ ನಾರಾಯಣ್, ಮಾಜಿ ಅಧ್ಯಕ್ಷ ಶ್ರೀನಿವಾಸನ್, ಎಲ್.ನಾಗರಾಜ, ಜಂಟಿ ಕಾರ್ಯ ದರ್ಶಿ ಜಿ. ಅಂಕಶೆಟ್ಟಿ, ಯೋಗರಾಜ್, ಅಬ್ದುಲ್ ಅಜೀತ್ ದೀನಾ, ರೋಟಿರಿಯನ್ ಸಿದ್ದಮಲ್ಲಪ್ಪ, ರಾಜು ವರ್ಗೀಸ್, ಎಸ್ ಆರ್ ಎಸ್ ಶ್ರೀನಿವಾಸ, ಚಂದ್ರಪ್ರಭಜೈನ್, ಮನೋಜ್ ಕುಮಾರ್, ಸವಿತಾ, ಪಿಆರ್ ಒ ವಿಜಯಕಾಂತ್ ಇತರರು ಹಾಜರಿದ್ದರು.

## ನಾಳೆ ಗುರುಪೂರ್ಣಿಮೆ ಕಾರ್ಯಕ್ರಮ



ಮೈಸೂರು: ಗೌರ ಪೂರ್ಣಿಮೆ ಅಂಗವಾಗಿ ಮಾ.4 ರಂದು ಸಂಜೆ 6.30 ಕ್ಕೆ ನಗರದ ಹುಣಸೂರು ರಸ್ತೆ ಎಸ್‌ಆರ್‌ಕೆ ಕನ್ವೆನ್ಷನ್ ಹಾಲ್‌ನಲ್ಲಿ ವೃಂದಾವನ್ ಸಂಸ್ಥೆ ವತಿಯಿಂದ ಭವ್ಯ ಪುಷ್ಪ ಹೋಳಿ ಮಹೋತ್ಸವ ಹಮ್ಮಿಕೊಂಡಿರುವುದಾಗಿ ಸಂಸ್ಥೆಯ ಸಂಸ್ಥಾಪಕರಾದ ದಿವ್ಯಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸುಮಾರು 500 ವರ್ಷಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ಅವತರಿಸಿದ ಚೈತನ್ಯ ಮಹಾಪ್ರಭುಗಳು ಭಕ್ತಿ ಭಾವದಿಂದ ಶ್ರೀಕೃಷ್ಣನ ಪವಿತ್ರನಾಮದ ಸಮೂಹ ಕೀರ್ತನೆ ಮೂಲಕ ಕೃಷ್ಣನ ದಿವ್ಯ ಉಪದೇಶ ಪ್ರಸಾರ ಮಾಡಿದರು. ಇದರ ಅಂಗವಾಗಿ ಪುಷ್ಪ ಹೋಳಿ ಮಹೋತ್ಸವ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸಂಸ್ಥೆಯ ವಿಕಾಸ್ ಮಾತನಾಡಿ, ಕಾರ್ಯಕ್ರಮದಂದು ಶ್ರೀ ರಾಧಾ ಕೃಷ್ಣರ ಭವ್ಯ ವಿಗ್ರಹಗಳಿಗೆ ಪುಷ್ಪಾಭಿಷೇಕ ಮಾಡಿ, ಅದರೊಡನೆ ಸುಮಾರು 450 ಕೆಜಿ ಪುಷ್ಪದ ಎಸಳುಗಳಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡವರು ಪುಷ್ಪ ಹೋಳಿಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗುವುದು. 20 ಕ್ಕೂ ಹೆಚ್ಚು ವೈವಿಧ್ಯಮಯ ಸಾತ್ವಿಕ ಬಫೆ ಸಹಾ ಇರಲಿದೆ. ಹೆಚ್ಚಿನ ಮಾಹಿತಿಗೆ ದೂ. 90352 76643 ನ್ನು ಸಂಪರ್ಕಿಸಬಹುದೆಂದರು. ಸಂಸ್ಥೆಯ ಲಿಂಗರಾಜು ಇದ್ದರು.

**ಮಧ್ಯಪ್ರಾಚ್ಯದ ಅಸ್ಥಿರ ಪರಿಸ್ಥಿತಿ ಹಿನ್ನೆಲೆ**

## ಚಾ.ನಗರ ಜಿಲ್ಲೆಯ ನಿವಾಸಿಗಳು, ಸಂಬಂಧಿಕರ ನೆರವಿಗೆ ಸಹಾಯವಾಣಿ

**ಜಿಲ್ಲಾಧಿಕಾರಿ ಶ್ರೀರೂಪ**

ಚಾಮರಾಜನಗರ, ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಪ್ರಚಲಿತದಲ್ಲಿರುವ ಅಸ್ಥಿರ ಪರಿಸ್ಥಿತಿಯಿಂದಾಗಿ ಅಂತರಾಷ್ಟ್ರೀಯ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದ್ದು, ಚಾಮರಾಜನಗರ ಜಿಲ್ಲೆಯ ನಿವಾಸಿಗಳು ಅಥವಾ ಅವರ ಸಂಬಂಧಿಕರು ಹೆಚ್ಚಿನ ಮಾಹಿತಿ ಮತ್ತು ಸಹಾಯಕ್ಕಾಗಿ 24ಥ7ಅವಧಿಯಲ್ಲಿಯೂ ಕಾರ್ಯನಿರ್ವಹಿಸುವ ಚಾಮರಾಜನಗರ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರದ ಸಹಾಯವಾಣಿ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದ್ದಾರೆ.

ವೈಮಾನಿಕ ನಿರ್ಬಂಧ ಮತ್ತು ಪ್ರಚಲಿತ ಸ್ಥಿತಿ, ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ ಸೇರಿದಂತೆ ಒಟ್ಟು 11 ದೇಶಗಳ ವೈಮಾನಿಕ ಮಾರ್ಗಗಳನ್ನು ಅನಿರ್ದಿಷ್ಟ ಅವಧಿಯವರೆಗೆ ಮುಚ್ಚಲಾಗಿದೆ. ಈ ಅನಿರೀಕ್ಷಿತ ಅಡಚಣೆಯಿಂದಾಗಿ ಹಾಗೂ ಕರ್ನಾಟಕದ ಅನೇಕ ಪ್ರಯಾಣಿಕರು ಯುಎಇ (ದುಬೈ) ಸೇರಿದಂತೆ ವಿವಿಧ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸಿಲುಕಿಕೊಂಡಿದ್ದಾರೆ. ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ನಿರ್ದೇಶನದಂತೆ ರಾಜ್ಯ ಮತ್ತು ಜಿಲ್ಲಾ, ತುರ್ತು ಕಾರ್ಯಾಚರಣೆ ಕೇಂದ್ರವು 24ಥ7 ಅವಧಿಯಲ್ಲೂ ಕಾರ್ಯನಿರ್ವಹಿಸುತ್ತಿವೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ರಾಯಭಾರಿ ಕಚೇರಿಗಳು ನೀಡುವ ಸೂಚನೆಗಳನ್ನು ಜಿಲ್ಲಾಡಳಿತವು ನಿರಂತರವಾಗಿ ಗಮನಿಸುತ್ತಿದೆ. ಚಾಮರಾಜನಗರ ಜಿಲ್ಲೆಯ ನಿವಾಸಿಗಳು ಅಥವಾ ಅವರ ಸಂಬಂಧಿಕರು ಹೆಚ್ಚಿನ ಮಾಹಿತಿಗಾಗಿ ಮತ್ತು ಸಹಾಯಕ್ಕಾಗಿ 24/7 ಕಾರ್ಯನಿರ್ವಹಿಸುವ ಚಾಮರಾಜನಗರ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರದ ದೂರವಾಣಿ ಸಂಖ್ಯೆ 08226–223160, 223161, 223163, ಮೊ.ಸಂ 9740942901, ಟೋಲ್ ಫ್ರೀ ಸಂಖ್ಯೆ 1077 ಸಂಪರ್ಕಿಸಬಹುದು. ಹಾಗೂ ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ 080–22340676, 080–22253707, ಟೋಲ್ ಫ್ರೀ ಸಂಖ್ಯೆ: 1070 ಗೆ ಕರೆ ಮಾಡಿ ಮಾಹಿತಿ ಹಾಗೂ ಸಹಾಯ ಪಡೆಯಬಹುದು. ಮಧ್ಯಪ್ರಾಚ್ಯ ದೇಶಗಳಲ್ಲಿ ರುವ ಕರ್ನಾಟಕದ ನಿವಾಸಿಗಳು ಹಾಗೂ ಜಿಲ್ಲೆಯವರಿದ್ದಲ್ಲಿ ಅಲ್ಲಿನ ಸ್ಥಳೀಯ ಸರ್ಕಾರಗಳು ನೀಡುವ ಸುರಕ್ಷತಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಕಷ್ಟದಲ್ಲಿರುವವರು ಆಯಾ ದೇಶದ ಭಾರತೀಯ ರಾಯಭಾರಿ ಕಚೇರಿಯ ಸಹಾಯವಾಣಿಗೆ ಕರೆ ಮಾಡಬೇಕು ಅಥವಾ ಸಾರಥಿ ಸಹಾಯತಾ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ವಿಸಾ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ಹತ್ತಿರದ ಎಫ್.ಆರ್.ಆರ್.ಓ ಕಚೇರಿಯನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಪೊಲೀಸ್ ರನ್ ಅಭಿಯಾನ

## ಗಮನಸೆಳೆದ ಬೃಹತ್ ಮ್ಯಾರಾಥಾನ್ ಓಟ–ಜಿಲ್ಲಾಧಿಕಾರಿ ಶ್ರೀರೂಪರಿಂದ ಚಾಲನೆ



ಚಾಮರಾಜನಗರ, ಕರ್ನಾಟಕ ಪೊಲೀಸ್ ರನ್ ಅಭಿಯಾನದಡಿ ಜನಸ್ನೇಹಿ ಪೊಲೀಸ್, ಮಾದಕ ವಸ್ತುಗಳ ಬಗ್ಗೆ ಜಾಗೃತಿ ಹಾಗೂ ಸೈಬರ್ ಅಪರಾಧಗಳ ಕುರಿತು ಅರಿವು ಮೂಡಿಸುವ ಸಂಬಂಧ ನಗರದಲ್ಲಿ ಆಯೋಜಿಸಿದ್ದ 5 ಕಿ.ಮೀ. ಬೃಹತ್ ಮ್ಯಾರಾಥಾನ್ ಓಟಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಚಾಲನೆ ನೀಡಿದರು.

ಚರ ಜಿಲ್ಲಾ ಪೊಲೀಸ್ ವತಿಯಿಂದ ನಗರದ ಪೊಲೀಸ್ ಕವಾಯತು ಮೈದಾನದಲ್ಲಿಂದು ಬೆಳಿಗ್ಗೆಯೇ ನಮ್ಮ ಪೊಲೀಸ್–ನಮ್ಮ ಹೆಮ್ಮೆ, ಎಲ್ಲರಿಗೂ ಫಿಟ್ನೆಸ್–ಮಾದಕ ಮುಕ್ತ ಕರ್ನಾಟಕ ಘೋಷಣೆಯೊಂದಿಗೆ ಹಮ್ಮಿಕೊಳ್ಳಲಾಗಿದ್ದ ಬೃಹತ್ ಮ್ಯಾರಾಥಾನ್ ಓಟದಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ವಿದ್ಯಾರ್ಥಿಗಳು, ಯುವಜನರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ನಾಗರಿಕರಲ್ಲಿ ಜಾಗೃತಿ ಮೂಡಿಸಿ ಗಮನ ಸೆಳೆದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಎಲ್ಲರಿಗೂ ಶಾರೀರಿಕ ಸುಸ್ಥಿತಿ ಅತೀ ಅಗತ್ಯವಾಗಿದೆ. ದೇಹ–ಮನಸ್ಸಿನ ಸಮತೋಲನಕ್ಕಾಗಿ ಪ್ರತಿಯೊಬ್ಬರು ಫಿಟ್ನೆಸ್ ಕಾಪಾಡಿಕೊಳ್ಳಬೇಕು. ಮಾದಕ ವಸ್ತುಗಳ ದುಷ್ಪರಿಣಾಮ, ಸೈಬರ್ ಅಪರಾಧಗಳ ಬಗ್ಗೆ ಜಾಗೃತಿಗಾಗಿ ಮ್ಯಾರಾಥಾನ್ ಆಯೋಜಿಸಲಾಗಿದೆ. ಓಟದಲ್ಲಿ ಗ್ರಾಮೀಣ ಭಾಗದ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ನಗರ ಪ್ರದೇಶದ ಮಕ್ಕಳು, ಯುವಜನರು, ಸಾರ್ವಜನಿಕರು ಭಾಗವಹಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಮಾದಕ ವ್ಯಸನ ಮುಕ್ತ ಕರ್ನಾಟಕಕ್ಕಾಗಿ ಹಾಗೂ ಸೈಬರ್ ಅಪರಾಧಗಳ ಅರಿವು ಎಲ್ಲರಿಗೂ ಬೇಕಾಗಿದೆ. ಸೈಬರ್ ಅಪರಾಧಗಳು ಇಂದು ಎಲ್ಲೆಡೆ ಹೆಚ್ಚಾಗುತ್ತಿದ್ದು, ಇದಕ್ಕೆ ಮುಗ್ಧ ನಾಗರಿಕರು ಹೆಚ್ಚಾಗಿ ಸಿಲುಕುತ್ತಿರುವುದು ವಿಪರ್ಯಾಸವಾಗಿದೆ. ಅಂತರ್ಜಾಲ ಬಳಕೆಯಲ್ಲಿ ಪ್ರತಿಯೊಬ್ಬರು ಎಚ್ಚರಿಕೆವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮತ್ತು ರಾಜು ಅವರು ಮಾತನಾಡಿ ಈ ಹಿಂದೆ ಪೊಲೀಸ್ ಅಂದರೆ ಸಾರ್ವಜನಿಕರು ದೂರ ಉಳಿಯುತ್ತಿದ್ದರು. ಪೊಲೀಸ್ ವ್ಯವಸ್ಥೆಯನ್ನು ಜನಸ್ನೇಹಿಯಾಗಿಸುವ ಉದ್ದೇಶದಿಂದ ಪೊಲೀಸರೊಂದಿಗೆ ಸಾರ್ವಜನಿಕರ ಓಟ ಏರ್ಪಡಿಸಲಾಗಿದೆ. ಎಲ್ಲರು ಸದೃಢ ದೇಹ ಮತ್ತು ಮನಸ್ಸು ಹೊಂದಬೇಕು. ಆಗಮಾತ್ರ ಸ್ವಾಸ್ಥ್ಯ ಸಮಾಜ ಕಟ್ಟಬಹುದಾಗಿದೆ. ಇತ್ತೀಚೆಗೆ ಮಾದಕ ವಸ್ತುಗಳಿಗೆ ಯುವಜನರು ಹೆಚ್ಚಾಗಿ ಆಕರ್ಷಿತರಾಗುತ್ತಿದ್ದು, ಈ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ. ಸೈಬರ್ ಅಪರಾಧ ಕಡಿಮೆ ಮಾಡುವುದು ಹಾಗೂ ಮಾದಕ ವ್ಯಸನ ಮುಕ್ತ ಕರ್ನಾಟಕ ಬೃಹತ್ ಮ್ಯಾರಾಥಾನ್ ಓಟದ ಪ್ರಮುಖ ಉದ್ದೇಶವಾಗಿದೆ ಎಂದರು. ಹೆಚ್ಚುವರಿ ಜಿಲ್ಲಾ ಅಧೀಕ್ಷಕರಾದ ಎಂ.ಎನ್. ಶಶಿಧರ್, ಡಿವೈಎಸ್‌ಪಿ ಸ್ನೇಹರಾಜ್, ಜಿಲ್ಲಾ ಮೀಸಲು ಪೊಲೀಸ್ ವಿಭಾಗದ ಡಿವೈಎಸ್‌ಪಿ ಸೋಮಣ್ಣ, ಪಡೆಯ ಚಾಮೂಲ್ ವ್ಯವಸ್ಥಾಪಕ ನಿರ್ದೇಶಕರಾದ ರಾಜ್‌ಕುಮಾರ್, ಬ್ಯಾಂಕ್ ಆಫ್ ಬರೋಡಾದ ಶ್ರೀಧರ್, ಇತರರು ಕಾರ್ಯಕ್ರಮದಲ್ಲಿ ಇದ್ದರು.

### ಬಂದೂಕಿನಲ್ಲಿ ಗುಂಡು ಹಾರಿಸಿ ಹಸಿರು ನಿಶಾನೆ

**ಬಳಿಕ ಆರಂಭವಾದ ಬೃಹತ್ ಮ್ಯಾರಾಥಾನ್ ಓಟಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಬಂದೂಕಿನಲ್ಲಿ ಗುಂಡು ಹಾರಿಸಿ ಹಸಿರು ನಿಶಾನೆ ತೋರಿದರು. ಜಿಲ್ಲಾ ಪೊಲೀಸ್ ಕವಾಯತು ಮೈದಾನದಿಂದ ಆರಂಭವಾದ ಮ್ಯಾರಾಥಾನ್ ಬಿ. ರಾಚಯ್ಯ ಜೋಡಿರಸ್ತೆ – ಭುವನೇಶ್ವರಿ ವೃತ್ತ – ಸಂತೇಮರಹಳ್ಳಿ ವೃತ್ತ – ಪಾಲಿಟೆಕ್ನಿಕ್ ಕಾಲೇಜು (ಯೂ ಟರ್ನ್) ನಿಂದ ಪುನಹ – ಸಂತೇಮರಹಳ್ಳಿ ವೃತ್ತ – ಭುವನೇಶ್ವರಿ ವೃತ್ತ – ಜೋಡಿರಸ್ತೆ ಮಾರ್ಗವಾಗಿ ವಾಪಸ್ಸು ಬಂದು ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಮುಕ್ತಾಯಗೊಂಡಿತು. ಮ್ಯಾರಾಥಾನ್ ಓಟದಲ್ಲಿ ಸ್ವತಹ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಇತರೆ ಗಣ್ಯರು ಪಾಲ್ಗೊಂಡು ವಿದ್ಯಾರ್ಥಿಗಳು, ಯುವಜನರು ಹಾಗೂ ಸಾರ್ವಜನಿಕರಲ್ಲಿ ಹುರುಪು ತುಂಬಿದರು.**

### ಬಹುಮಾನ ವಿತರಣೆ

**ಮ್ಯಾರಾಥಾನ್ ವಿಜೇತರಿಗೆ ಪ್ರಥಮ ಬಹುಮಾನವಾಗಿ ಸೈಕಲ್, ದ್ವಿತೀಯ 5 ಸಾವಿರ ರೂ. ನಗದು ಬಹುಮಾನ, ತೃತೀಯ 3 ಸಾವಿರ ರೂ. ನಗದು ಬಹುಮಾನವನ್ನು ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ನಿಗದಿ ಮಾಡಲಾಗಿತ್ತು. ಮೊದಲು ಗುರಿ ತಲುಪಿದ 10 ಓಟಗಾರ ರಿಗೆ ಪದಕ, ಪ್ರಮಾಣಪತ್ರವನ್ನು ನೀಡಿ ಪ್ರೋತ್ಸಾಹಿಸಲಾಯಿತು.**

**ಪುರುಷರ ವಿಭಾಗದಲ್ಲಿ ಗುಂಡ್ಲುಪೇಟೆ ತಾಲೂಕಿನ ಹೊರೆಯಾಲ ಗ್ರಾಮದ ಮಣಿಕಂಠ ಅವರು 17 ನಿಮಿಷ 12 ಸೆಕೆಂಡುಗಳಲ್ಲಿ ಗುರಿ ತಲುಪಿ ಪ್ರಥಮ ಸ್ಥಾನ ಪಡೆದರು. 17 ನಿಮಿಷ 33 ಸೆಕೆಂಡುಗಳಲ್ಲಿ ಗುರಿ ತಲುಪಿದ ಭೀಮಪ್ಪ ಅವರು ದ್ವಿತೀಯ ಸ್ಥಾನ ಹಾಗೂ 18 ನಿಮಿಷ 45 ಸೆಕೆಂಡುಗಳಲ್ಲಿ ಗುರಿ ತಲುಪಿದ ವೆಂಕಟಯ್ಯನ ಛತ್ರದ ಯೋಗೇಶ್ ತೃತೀಯ ಸ್ತಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಕೊಳ್ಳೇಗಾಲ ತಾಲೂಕಿನ ತೆಳ್ಳನೂರಿನ ಡಿ.ಆರ್. ಪ್ರೀತಿ, ದ್ವಿತೀಯ ಸ್ಥಾನಿ ನದಿಯಾ ಹಾಗೂ ಚಂದ್ರಮ್ಮ ಅವರು ತೃತೀಯ ಸ್ಥಾನ ಪಡೆದರು. ಮೊದಲು ಗುರಿ ತಲುಪಿದ 10 ಮಂದಿ ಮಹಿಳಾ ವಿಜೇತರಲ್ಲಿ ಒಂದೇ ಶಾಲೆಯ 8 ಮಂದಿ ವಿದ್ಯಾರ್ಥಿನಿಯರು ಮ್ಯಾರಾಥಾನ್‌ನ ವಿಶೇಷವಾಗಿತ್ತು.**

## ಸರ್ಕಾರದ ನಿಲುವಿಗೆ ಸ್ವಾಗತ



ಮೈಸೂರು: ಒಳ ಮೀಸಲಾತಿ ವಿವಾದ ಈಗಾಗಲೇ ಹೈಕೋರ್ಟ್ನಲ್ಲಿದೆ. ಹೀಗಾಗಿ ರಾಜ್ಯ ಸರ್ಕಾರ ಸುಮಾರು 56 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ವೇಳೆ ಹಳೇ ಮೀಸಲಾತಿ ಅನುಸರಿಸುವುದನ್ನು ಸ್ವಾಗತಿಸುತ್ತೇವೆ ಎಂದು ಲಕ್ಷ್ಮಿನಾರಾಯಣ ನಾಗವಾರ ಸ್ಥಾಪಿತ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ಸಂಚಾಲಕ ಭುಗತಗಳ್ಳಿ ಮಣಿಯಯ್ಯ ತಿಳಿಸಿದರು.

ರಾಜ್ಯಾದ್ಯಂತ ಒಳ ಮೀಸಲಾತಿ ವಿಚಾರದಲ್ಲಿ ಪರ ವಿರೋಧಗಳು ವ್ಯಕ್ತವಾಗುತ್ತಿವೆ. ಅಲ್ಲದೆ, ಜರಿಗೆ ತಂದಿರುವ ರೋಸ್ಟರ್ ಬಿಂದು ವಿರೋಧಿಸಿ ಹಾಗೂ ಇದು ಜಾರಿ ಆದರೆ ಬಲಗೈ ಸಮುದಾಯಕ್ಕೆ ಅನ್ಯಾಯ ಆಗಲಿದೆ ಎಂಬ ಕೂಗು ಕೇಳಿ ಬಂದಿದೆ. ಆದರೆ ಹೈಕೋರ್ಟ್ ತೀರ್ಪು ಬಂದ ನಂತರ ಸರ್ಕಾರ 101 ಜಾತಿಗಳಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಿಕೊಡಬೇಕು ಎಂದರು. ಆಲಗೂಡು ಶಿವಣ್ಣ, ಈಶ್ವರ್ ಬೊಮ್ಮನಹಳ್ಳಿ, ಬೊಕ್ಕಳ್ಳಿ ಲಿಂಗಯ್ಯ, ವಿ.ಎಸ್. ಮೋಹನ್ ಕುಮಾರ್, ಎಸ್.ಬಿ.ಸಣ್ಣಸ್ವಾಮಿ, ಶಾಂತಕುಮಾರ್ ಚೌಹಳ್ಳಿ, ಕಿರಣ್ ಕುಮಾರ್, ರಾಜಶೇಖರ್, ಕಾಂತರಾಜ್ ಸಿ.ಭುಗತಗಳ್ಳಿ ಇದ್ದರು.

## ಅಕ್ಕಕೆಫೆ ಉದ್ಘಾಟಿಸಿದ ಸಚಿವ ಮಹದೇವಪ್ಪ




ಮೈಸೂರು: ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲಿ ನಿರ್ಮಿಸಲಾಗಿರುವ ಅಕ್ಕ ಕೆಫೆಯನ್ನು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ: ಹೆಚ್.ಸಿ ಮಹದೇವಪ್ಪ ಉದ್ಘಾಟಿಸಿದರು. ಶಾಸಕರಾದ ತನ್ವೀರ್ ಸೇಠ್, ಜಿಲ್ಲಾ ಗ್ಯಾರಂಟಿ ಯೋಜನೆ ಅಧ್ಯಕ್ಷ ಅರುಣ್ ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಸೇರಿ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಮುದಾಯಕ್ಕೆ ಶ್ರಮಿಸಿದ ಕೆ.ಶಿವರಾಂ



ಚಾಮರಾಜನಗರ: ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರು ರಾಜ್ಯದಲ್ಲಿ ಛಲವಾದಿ ಮಹಾಸಭಾ ಕಟ್ಟಿಕೊಂಡು ಸಮುದಾಯದ ಏಳಿಗೆಗಾಗಿ ಶ್ರಮಿಸಿದ್ದಾರೆ ಎಂದು ಛಲವಾದಿ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಛಲವಾದಿ ಮಹಾಸಭಾದ ಚಾಮರಾಜನಗರ ಜಿಲ್ಲಾ ಸಮಿತಿ ವತಿಯಿಂದ ನಡೆದ ಛಲವಾದಿ ಮಹಾಸಭಾದ ಸಂಸ್ಥಾಪಕರ, ನಿವೃತ್ತ ಐಎಎಸ್ ಅಧಿಕಾರಿಯಾದ ಕೆ. ಶಿವರಾಂ ಅವರ 2ನೇ ವರ್ಷದ ಪುಣ್ಯಸ್ಮರಣೆ ಕಾರ್ಯ ಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ನಾನೊಬ್ಬ ಛಲವಾದಿ ಅಧಿಕಾರಿ ಎಂದು ಹೇಳಿಕೊಂಡಂತಹ ಅಧಿಕಾರಿ ಕೆ.ಶಿವರಾಂ ಅವರು ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಐಎಎಸ್ ತೇರ್ಗಡೆ ಹೊಂದಿ ಜಿಲ್ಲಾಧಿಕಾರಿಯಾಗಿ ಅನೇಕ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿ ದರು. ಸ್ವಯಂ ನಿವೃತ್ತಿ ಹೊಂದಿ ಛಲವಾದಿ ಮಹಾಸಭಾ ಕಟ್ಟಿಕೊಂಡು ಪ್ರತಿಜಿಲ್ಲಾ ಕೇಂದ್ರಗಳಲ್ಲಿ ಛಲವಾದಿ ಭವನಗಳನ್ನು ನಿರ್ಮಾಣ ಮಾಡುವ ಚಿಂತನೆ ಹೊಂದಿದ್ದರು. ಅಂಬೇಡ್ಕರ್ ಅವರ ಮೀಸಲಾತಿ ಪ್ರಕಾರ ಅಧಿಕಾರ ಸೇರಿದಂತೆ ಎಲ್ಲವೂ ಸಿಗಬೇಕು ಎಂದು ಹೇಳಿಕೊಟ್ಟರು ಅದೇ ರೀತಿಯಲ್ಲಿ ಮಾಡಿದವರು ನಾವು ಅವರ ಹಾದಿಯಲ್ಲಿ ಸಾಗಿ ಮಹಾಸಭಾವನ್ನು ಸಂಘ ಟನೆ ಮಾಡಬೇಕು ಎಂದು ಹೇಳಿದರು. ಕಾರ್ಯಕ್ರಮ ದಲ್ಲಿ ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಎನ್.ಕುಮಾರ್, ಗೌರವಾಧ್ಯಕ್ಷ ಶಿವನಂಜಯ್ಯ ರಾಮನಮುದ್ರ, ಮಾಜಿ ಅಧ್ಯಕ್ಷ ಕೆ. ಆರ್.ನಾರಾಯಣ್, ಮುಖಂಡರಾದ ಎಲ್.ಮಹದೇವಯ್ಯ, ಶಿವಪ್ರಸಾದ್, ರಮೇಶ್, ಪರ ಮೇಶ್, ಸಿದ್ದರಾಜು, ಮಹಣಾಪುರ ನಾಗರಾಜು, ಕಿರಣ್, ಚಿದಾನಂದಮೂರ್ತಿ, ಚಂದ್ರು, ನಾಗರಾಜು, ಕಲಾವಿದ ಮಹದೇವು, ನಂಜರಾಜು, ಶಂಕರ್, ಮಂಜು, ಮಧುಪ್ರಸಾದ್,ಇದ್ದರು

**ಪುರಸಭೆ ವಿಪಕ್ಷ ನಾಯಕ ಸಿ.ಉಮೇಶ್ ಹೇಳಿಕೆ**

# ಶಾಸಕರ ಪ್ರಯತ್ನದಿಂದ ನಿರೀಕ್ಷೆ ಮೀರಿ ಅಭಿವೃದ್ಧಿ



ರಾಮನಗರ: ಮಾಗಡಿ ಕ್ಷೇತ್ರದಲ್ಲಿ ಯಾರೂ ನಿರೀಕ್ಷೆ ಮಾಡದಷ್ಟು ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಇದು ಶಾಸಕ ಎಚ್.ಸಿ.ಬಾಲಕೃಷ್ಣರವರ ಕ್ರಿಯಾಶೀಲತೆಗೆ ಸಾಕ್ಷಿ ಎಂದು ಬಿಡದಿ ಪುರಸಭೆ ವಿಪಕ್ಷ ನಾಯಕ ಸಿ. ಉಮೇಶ್ ಹೇಳಿದರು.

ಬಿಡದಿ ಪಟ್ಟಣದಲ್ಲಿ ಶಾಸಕ ಎಚ್.ಸಿ.ಬಾಲಕೃಷ್ಣರವರ ಹುಟ್ಟುಹಬ್ಬದ ಪ್ರಯುಕ್ತ ಪತ್ರಕರ್ತರಿಗೆ ಹೆಲ್ಮೆಟ್ ವಿತರಿಸಿ ಅವರು ಮಾತನಾಡಿದರು. ಶಾಸಕರು ಎಲ್ಲರ ನಿರೀಕ್ಷೆಗೂ ಮೀರಿ ಅನುದಾನ ತಂದು ಕೆಲಸ ಮಾಡುತ್ತಿದ್ದು, ನಾವುಗಳು ಅವರೊಂದಿಗೆ ಕೈಜೋಡಿಸಿದ್ದೇವೆ. ಬಿಡದಿ ಪಟ್ಟಣದಲ್ಲಿ ಸುಮಾರು 25 ಕೋಟಿ ರುಪಾಯಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಶೀಘ್ರದಲ್ಲಿಯೇ ಪುರಸಭೆಯಿಂದ ನಗರಸಭೆಯಾಗಿ ಮೇಲ್ದರ್ಜೆಗೇರಲಿದೆ ಎಂದರು.

ಬಿಡದಿ ಪಟ್ಟಣಕ್ಕೆ ಯುಜಿಡಿ ಮತ್ತು ಮಂಚನಬೆಲೆಯಿಂದ ಕುಡಿಯುವ ನೀರಿನ ಯೋಜನೆ ಪ್ರಗತಿಯಲ್ಲಿದೆ.

ನಲ್ಲಿಗುಡ್ಡೆಕೆರೆಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಈಗಷ್ಟೇ ಜಲಸಾಹಸ ಕ್ರೀಡೆಗಳಿಗೆ ಚಾಲನೆ ನೀಡಲಾಗಿದೆ. ಕೆರೆಯಲ್ಲಿ ವಾಕಿಂಗ್ ಪಾಥ್ ನಿರ್ಮಾಣ ಹಾಗೂ ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣ ಮಾಡುವ ಉದ್ದೇಶವನ್ನು ಶಾಸಕ ಬಾಲಕೃಷ್ಣ ಹೊಂದಿದ್ದಾರೆ ಎಂದು ಸಿ.ಉಮೇಶ್ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎಲ್.ಚಂದ್ರಶೇಖರ್ ಮಾತನಾಡಿ, ಶಾಸಕ ಬಾಲಕೃಷ್ಣರವರು ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಬಿಡದಿ ಪಟ್ಟಣ ಎಷ್ಟು ವೇಗವಾಗಿ ಬೆಳವಣಿಗೆ ಹೊಂದುತ್ತಿದೆಯೊ ಅಭಿವೃದ್ಧಿ ಕಾರ್ಯಗಳಿಗೂ ಬಾಲಕೃಷ್ಣ ಅಷ್ಟೇ ವೇಗ ನೀಡಿದ್ದಾರೆ ಎಂದು ಹೇಳಿದರು. ಶಾಸಕ ಬಾಲಕೃಷ್ಣರವರು ಜನ್ಮದಿನ ಆಚರಿಸಿಕೊಳ್ಳುವುದಕ್ಕಷ್ಟೆ ಸೀಮಿತವಾಗಿಲ್ಲ. ಶಾಸಕರಾಗಿ ಗೆದ್ದ ದಿನದಿಂದಲೂ ಕ್ಷೇತ್ರದ ಜನರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಕ್ಷೇತ್ರದ ಅಭಿವೃದ್ಧಿಗೂ ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು. ಬಿಡದಿ ಪುರಸಭೆ ಸದಸ್ಯರಾದ ಹೊಂಬಯ್ಯ, ಮಹಿಮಾ ಕುಮಾರ್ , ಬಿಂದ್ಯಾ, ಶ್ರೀನಿವಾಸ್, ಲೋಕೇಶ್, ಬಿಎಂಐಸಿಪಿ ನಿರ್ದೇಶಕ ಅಬ್ಬನಕುಪ್ಪೆ ರಮೇಶ್, ಮುಖಂಡರಾದ ಶಿವಲಿಂಗಯ್ಯ, ಸುಜ್ಞಾನಮೂರ್ತಿ, ನಾಗೇಶ್ , ಅಂಕೇಗೌಡ ಮತ್ತಿತರರು ಹಾಜರಿದ್ದರು.

# ಸಂಕ್ಷಿಪ್ತ ಸುದ್ದಿ

## ಕೈವಾರ ತಾತಯ್ಯ ಜಯಂತೋತ್ಸವ

**ತುಮಕೂರು:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಬಲಿಜ ಸಂಘದ ಸಹಯೋಗದಲ್ಲಿ ಮಾರ್ಚ್ 3ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಅಮಾನಿಕೆರೆ ರಸ್ತೆಯಲ್ಲಿರುವ ಕನ್ನಡ ಭವನದಲ್ಲಿ "ಶ್ರೀ ಯೋಗಿ ನಾರೇಯಣ ಯತೀಂದ್ರರ(ಕೈವಾರ ತಾತಯ್ಯ) ಜಯಂತೋತ್ಸವ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಜನಪ್ರತಿನಿಧಿಗಳು, ಗಣ್ಯರು, ಅಧಿಕಾರಿಗಳು ಭಾಗವಹಿಸುವರು. ಜಿಲ್ಲೆಯ ವಿವಿಧ ಸಮುದಾಯದ ಮುಖಂಡರು, ಕಲಾವಿದರು, ಬಲಿಜ ಸಮುದಾಯದ ಸಂಘ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ವಿವಿಧ ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ್ ಕು ಮಿರ್ಜಿ ಮನವಿ ಮಾಡಿದ್ದಾರೆ.

## ಯುವತಿ ಕಾಣೆ

**ತುಮಕೂರು:** ಕುಣಿಗಲ್ ತಾಲ್ಲೂಕಿನ ಅರೆಪಾಳ್ಯ ಗ್ರಾಮದ ಸುಮಾರು 18 ವರ್ಷದ ನಿರ್ಮಲ ಎಂಬ ಯುವತಿಯು ಫೆಬ್ರವರಿ 16ರಂದು ಕುಣಿಗಲ್‌ನಲ್ಲಿರುವ ಶ್ರೀ ರಾಘವೇಂದ್ರ ದೇವಸ್ಥಾನಕ್ಕೆ ಹೋದವಳು ಮರಳಿ ಬಾರದೆ ಕಾಣೆಯಾಗಿದ್ದಾಳೆ ಎಂದು ಕುಣಿಗಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಇವಳು ಪದವಿ ವಿದ್ಯಾರ್ಥಿನಿಯಾಗಿದ್ದು, ಸುಮಾರು 5.5 ಅಡಿ ಎತ್ತರ, ಎಣ್ಣೆಗೆಂಪು ಬಣ್ಣ, ಸಾಧಾರಣ ಮೈಕಟ್ಟು, ಕೋಲು ಮುಖ ಹೊಂದಿದ್ದು, ಕನ್ನಡ ಹಾಗೂ ಇಂಗ್ಲೀಷ್ ಭಾಷೆ ಮಾತನಾಡುತ್ತಾಳೆ. ಕಾಣೆಯಾದ ಸಂದರ್ಭದಲ್ಲಿ ನೇರಳೆ ಬಣ್ಣದ ಫ್ರಾಕ್ ಧರಿಸಿದ್ದಳು.

ಕಾಣೆಯಾದವಳ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.ವಾ.ಸಂ. 08132-220229, 0816-2272451ನ್ನು ಸಂಪರ್ಕಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

## ಚಿಕಿತ್ಸೆ ಫಲಕಾರಿಯಾಗದೆ ಅಪರಿಚಿತ ಸಾವು

**ತುಮಕೂರು:** ಕೋರಾ ಪೊಲೀಸ್ ಠಾಣೆ ವ್ಯಾಪ್ತಿಯ ನಿರಾಶ್ರಿತ ಪರಿಹಾರ ಕೇಂದ್ರದಲ್ಲಿದ್ದ ಸುಮಾರು 40 ವರ್ಷದ ಅಶೋಕ ಬಿನ್ ನಾಗರಾಜು ಎಂಬ ವ್ಯಕ್ತಿಯು ಅನಾರೋಗ್ಯದಿಂದ ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಫೆಬ್ರವರಿ 23ರಂದು ಸಾವನ್ನಪ್ಪಿದ್ದು ಠಾಣೆಯಲ್ಲಿ ದೂರು ದಾಖಲಾಗಿದೆ.

ಈತನು ನಿರಾಶ್ರಿತ ಕೇಂದ್ರದಲ್ಲಿದ್ದಾಗ ತನ್ನ ವಿಳಾಸ ಸರ್ಜಾಪುರ, ಬ್ರಹ್ಮಸಂದ್ರ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಎಂದು ಹೇಳಿದ್ದು, ವಾರಸುದಾರರು ಯಾರೆಂದು ತಿಳಿಸಿರುವುದಿಲ್ಲ.


ಮೃತನು 160 ಸೆಂ.ಮೀ. ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಕೋಲು ಮುಖ ಹೊಂದಿದ್ದು, ಈತನ ಮೈಮೇಲೆ ಹಳದಿ ಮತ್ತು ನೀಲಿ ಬಣ್ಣದ ಗೆರೆಗಳಿರುವ ಅಂಗಿ ಹಾಗೂ ಆಕಾಶ ನೀಲಿ ಬಣ್ಣದ ಪ್ಯಾಂಟ್(ಎನ್.ಪಿ.ಕೆ ಕೇಂದ್ರದ ಸಮವಸ್ತ್ರ) ಇರುತ್ತದೆ.

ಮೃತನ ವಾರಸುದಾರರು ಯಾರಾದರೂ ಇದ್ದಲ್ಲಿ ದೂ.ವಾ.ಸಂ. 0816-2278000, 2272340/ 2275301/ 2242006, ಮೊ.ಸಂ.9480802900-20-31-49ನ್ನು ಸಂಪರ್ಕಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

## ದೇವರಾಯನದುರ್ಗ : ಮದ್ಯ ಮಾರಾಟ ನಿಷೇಧ

**ತುಮಕೂರು:** ಜಿಲ್ಲೆಯ ತುಮಕೂರು ತಾಲ್ಲೂಕು ಊರ್ಡಿಗೆರೆ ಹೋಬಳಿಯ ಪ್ರವರ್ಗ 'ಎ' ಅಧಿಸೂಚಿತ ಸಂಸ್ಥೆಯಾದ ದೇವರಾಯನದುರ್ಗ ಗ್ರಾಮದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕ್ಷೇತ್ರದ ಬ್ರಹ್ಮರಥೋತ್ಸವದ ಅಂಗವಾಗಿ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಆದೇಶಿಸಿದ್ದಾರೆ.

ಬ್ರಹ್ಮರಥೋತ್ಸವದ ಸಂದರ್ಭದಲ್ಲಿ ಯಾವುದೇ ಅಬಕಾರಿ ಅಕ್ರಮಗಳು ಜರುಗದಂತೆ ಕಟ್ಟೆಚ್ಚರ ವಹಿಸಲು ಹಾಗೂ ಶಾಂತಿ ಕಾಪಾಡುವ ಉದ್ದೇಶದಿಂದ ಮಾರ್ಚ್ 2ರ ಮಧ್ಯರಾತ್ರಿ 12 ರಿಂದ ಮಾರ್ಚ್ 3ರ ಮಧ್ಯರಾತ್ರಿ 12 ಗಂಟೆಯವರೆಗೆ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕ್ಷೇತ್ರದ 5 ಕಿ.ಮೀ. ವ್ಯಾಪ್ತಿಯಲ್ಲಿ ಒಣದಿನವೆಂದು ಘೋಷಿಸಿ ಎಲ್ಲಾ ತರಹದ ಮದ್ಯದಂಗಡಿಯನ್ನು ಮುಚ್ಚಿಸಿ ಮದ್ಯ ಮಾರಾಟವನ್ನು ನಿಷೇಧಿಸಿದ್ದಾರೆ.



# ನಮ್ಮ ನಡೆ ಸ್ವಚ್ಛತೆಯ ಕಡೆ ರನ್ ಫಾರ್ ಮಂಡ್ಯ

## ಮಾ.8 ರಂದು ಸ್ವಚ್ಛತಾ ಮ್ಯಾರಾಥಾನ್: ಪಿ. ರವಿಕುಮಾರ್

**ಮಂಡ್ಯ :** ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸಲು ಹಾಗೂ ಫಿಟ್‌ನೆಸ್ ಉತ್ತೇಜಿಸಲು ಮಾರ್ಚ್ 8 ರಂದು ನಗರದ ಜಿಲ್ಲಾ ಕ್ರೀಡಾಂಗಣದಿಂದ "ನಮ್ಮ ನಡೆ ಸ್ವಚ್ಛತೆಯ ಕಡೆ -ರನ್ ಫಾರ್ ಮಂಡ್ಯ" ಮ್ಯಾರಾಥಾನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಂಡ್ಯ ವಿಧಾನಸಭಾ ಶಾಸಕರಾದ ರವಿಕುಮಾರ್ ಅವರು ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿ ಗಳ ಕಚೇರಿಯಲ್ಲಿ ಸ್ವಚ್ಛ ಭಾರತ್ ಅಭಿಯಾನದಡಿ "ನಮ್ಮ ನಡೆ ಸ್ವಚ್ಛತೆಯ ಕಡೆ- ರನ್ ಫಾರ್ ಮಂಡ್ಯ" ಘೋಷವಾಕ್ಯದೊಂದಿಗೆ ಮ್ಯಾರಾಥಾನ್ ಕಾರ್ಯಕ್ರಮ ಹಮ್ಮಿಕೊಳ್ಳುವ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಮಾರ್ಚ್ 8 ರಂದು ಬೆಳಿಗ್ಗೆ 6.30 ಗಂಟೆಗೆ ನಗರದ ಸರ್. ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ 25 ಸಾವಿರ ಜನರು ಭಾಗವಹಿಸುವಂತೆ ಈ ಮ್ಯಾರಾಥಾನ್ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು. ಈ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲ ಸಂಘಟನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕಾಗಿ ತಿಳಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಮಾರ್ಚ್ 8 ರಂದು ನಡೆಯುವ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಬೇಕು. ಈ ಸಂಬಂಧ ಕ್ರೀಡಾಂಗಣದಲ್ಲಿ ವೇದಿಕೆ ನಿರ್ಮಾಣ, ಕುಡಿಯುವ ನೀರು, ಆಂಬುಲೆನ್ಸ್ ವ್ಯವಸ್ಥೆ ಹಾಗೂ ಉಪಹಾರದ ವ್ಯವಸ್ಥೆ ಮಾಡಿಕೊಳ್ಳಲು ಅಗತ್ಯ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಮಾರ್ಚ್ 8 ರಂದು ನಡೆಯುವ ಮ್ಯಾರಾಥಾನ್ ಕಾರ್ಯಕ್ರಮಕ್ಕೆ ಹೊರಗಿನಿಂದ ಭಾಗವಹಿಸಲು ಅನುಕೂಲವಾಗುವಂತೆ ಆನ್ ಲೈನ್ ನೊಂದಣಿ ವ್ಯವಸ್ಥೆಗೆಷಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸರ್ಕಾರಿ ನೌಕರರು ಎನ್.ಜಿ.ಓಗಳು ಮತ್ತು ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಸಂಬಂಧ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ತಿಳಿಸಿದರು.

ಸಭೆಯಲ್ಲಿ ಮಂಡ್ಯ ಉಪ ವಿಭಾಗಾಧಿಕಾರಿ ಶಿವಮೂರ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಗಂಗಾಧರ್ ಸ್ವಾಮಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ನರಸಿಂಹಮೂರ್ತಿ ಹಾಗೂ ವಿವಿಧ ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

### ಡಿಜಿಟಲ್ ಮೋಡ್ ನಲ್ಲಿ ಮೊದಲ ಜನ ಗಣತಿ

## ಜನಗಣತಿ ಕಾರ್ಯವನ್ನು ಅತ್ಯಂತ ಜವಬ್ದಾರಿಯಿಂದ ನಿರ್ವಹಿಸಿ ; ಡಾ ಕುಮಾರ

**ಮಂಡ್ಯ :** ಜನಗಣತಿ ಕಾರ್ಯವು ರಾಷ್ಟ್ರದ ಅತ್ಯಂತ ಪ್ರಮುಖ ಮತ್ತು ಬೃಹತ್ ಕಾರ್ಯಕ್ರಮವಾಗಿದ್ದು, ದೇಶದ ಜನಗಣತಿ ಕಾರ್ಯಕ್ಕೆ ನಿಯೋಜಿಸಿರುವ ಜಿಲ್ಲೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಅತ್ಯಂತ ಜವಾಬ್ದಾರಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ ಜಿಲ್ಲಾಧಿಕಾರಿ ಡಾ ಕುಮಾರ ಅವರು ನಿರ್ದೇಶನ ನೀಡಿದರು.

ಇಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜನಗಣತಿ ಕಾರ್ಯದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಜನಗಣತಿಯು ದೇಶದ ಅತಿದೊಡ್ಡ ಸಾರ್ವಜನಿಕ ಅಭ್ಯಾಸ ಚಟುವಟಿಕೆಯಾಗಿದ್ದು, ದೇಶದಲ್ಲಿ ಅತ್ಯಂತ ತಳಮಟ್ಟದಿಂದ ಮಾಹಿತಿ ಸಂಗ್ರಹಿಸುವ ಏಕೈಕ ಕಾರ್ಯಕ್ರಮ ಇದಾಗಿದ್ದು, ಮುಂದಿನ 10 ವರ್ಷಗಳ ಕಾಲ ದೇಶದ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ಈ ದಾಖಲೆ ಬಳಕೆಯಾಗಲಿದ್ದು, ಗಣತಿ ಕಾರ್ಯದಲ್ಲಿ ತೊಡಗಿರುವ ಪ್ರತಿಯೊಬ್ಬರೂ ಅತ್ಯಂತ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು ಎಂದರು.

ಜನಗಣತಿಯು ರಾಷ್ಟ್ರೀಯ ಮಟ್ಟದ ಪ್ರಮುಖ ಕಾರ್ಯವಾಗಿದ್ದು ಚುನಾವಣಾ ಕೆಲಸದಷ್ಟೇ ಗಂಭೀರವಾದುದು. ಅಧಿಕಾರಿಗಳ ನಡುವೆ ಸಮರ್ಪಕ ಸಮನ್ವಯತೆ ಇರಬೇಕು ಎಂದು ಅವರು ತಿಳಿಸಿದರು.




ಈ ಬಾರಿಯ ಜನಗಣತಿಯು ಸ್ವತಂತ್ರ ನಂತರ ನಡೆಯುತ್ತಿರುವ 8 ನೇ ಜನಗಣತಿಯಾಗಿದ್ದು, ಡಿಜಿಟಲ್ ಮೋಡ್ ನಲ್ಲಿ ನಡೆಯುತ್ತಿರುವ ಮೊದಲ ಗಣತಿಯಾಗಿದೆ. ಜನಗಣತಿಯು 2 ಹಂತದಲ್ಲಿ ನಡೆಯಲಿದ್ದು, ಮೊದಲ ಹಂತದಲ್ಲಿ 2026ರ ಏಪ್ರಿಲ್ 16 ರಿಂದ ಮೇ 15 ರ ವರೆಗೆ ಮನೆ ಪಟ್ಟಿ ಕ್ಷೇತ್ರ ಕಾರ್ಯ ನಡೆಯಲಿದೆ ಹಾಗೂ ಎರಡನೇ ಹಂತದ ಜನಗಣತಿಯೂ 2027ರ ಫೆಬ್ರವರಿ 1 ರಿಂದ ಫೆಬ್ರವರಿ 28ರವರೆಗೆ ನಡೆಯಲ್ಲಿದೆ ಎಂದು ಅವರು ತಿಳಿಸಿದರು

ಪ್ರಸ್ತುತ ನಡೆಯುವ ಗಣತಿಯು ಸಂಪೂರ್ಣ ಆನ್‌ಲೈನ್ ಮೋಡ್ ನಲ್ಲಿರುವುದದರಿಂದ ತಿದ್ದಪಡಿಗಳನ್ನು ಮಾಡಲು ಅವಕಶವಿಲ್ಲ ಆದ್ದರಿಂದ ಗಣತಿದಾರರು ಅತ್ಯಂತ ಎಚ್ಚರಿಕೆಯಿಂದ ದಾಖಲೆಗಳನ್ನು ನಮೂದಿಸಬೇಕು ಎಂದು ಅವರು ತಿಳಿಸಿದರು.

ಜನಗಣತಿ ಕಾರ್ಯಕ್ಕೆ ನಿಯೋಜಿಸುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿಗಧಿತ ಅವಧಿಯೊಳಗೆ ಗಣತಿ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವಂತೆ ತಿಳಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಬಿ. ಸಿ. ಶಿವನಂದಾಮೂರ್ತಿ, ಉಪ ವಿಭಾಗಧಿಕಾರಿ ಶಿವಮೂರ್ತಿ, ಶ್ರೀನಿವಾಸ್ ಹಾಗೂ ಧನ್ಯ, ಕುಲದೀಪ್ ಯಾದವ್ ಹಾಗೂ ರಮೇಶ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

## ಧರ್ಮ ರಾಜ್ಯ ಸ್ಥಾಪನೆಯ ನಾಟಕ ಪ್ರದರ್ಶನ ನಾಳೆ

**ಹೊಳೆನರಸೀಪುರ :** ತಾಲೂಕಿನ ಶ್ರೀ ಲಕ್ಕಮ್ಮ ಲಕ್ಷ್ಮಿ ದೇವಿ ಕೃಪಾ ಪೋಷಿತ ನಾಟಕ ಮಂಡಳಿ ವತಿಯಿಂದ ಸಂಕ್ಷಿಪ್ತ ಮಹಾಭಾರತ ಅಥವಾ ಧರ್ಮ ರಾಜ್ಯ ಸ್ಥಾಪನೆಯ ನಾಟಕ ಪ್ರದರ್ಶನವು ಮಾರ್ಚ್ 4 ರಂದು ರಾತ್ರಿ 7 ಗಂಟೆಗೆ ನಗರನಹಳ್ಳಿ ಗ್ರಾಮ (ಜೈ ಭೀಮ್ ) ನಗರದಲ್ಲಿ ನಡೆಯಲಿದೆ.

ಶಾಸಕ ಎಚ್. ಡಿ ರೇವಣ್ಣ ಅವರು ಉದ್ಘಾಟನೆ ಮಾಡಲಿದ್ದಾರೆ. ಅರಕಲಗೂಡು ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವರಾದ ಎ ಮಂಜು, ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ, ಲೋಕಸಭಾ ಸದಸ್ಯ ಶ್ರೇಯಸ್ ಎಂ ಪಾಟೀಲ್, ವಿಧಾನಸಭಾ ಕ್ಷೇತ್ರದ ಕೆ.ಪಿ.ಸಿ.ಸಿ ಸದಸ್ಯರಾದ ಎಂ.ಕೆ ಶೇಷೇಗೌಡ, ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಎ.ಟಿ ರಾಮಸ್ವಾಮಿ, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶಶಿಕಲಾ ಕುಮಾರ್, ಪ್ರಾಂಶುಪಾಲರಾದ ಎನ್. ಆರ್ ಶಿವರಾಮ್, ಮುಖ್ಯ ಶಿಕ್ಷಕರಾದ ಎನ್.ಬಿ ವಿಶ್ವನಾಥ, ಉಪನ್ಯಾಷಕರಾದ ಎನ್.ಬಿ ಮಂಜುನಾಥ, ಗ್ರಾ.ಪಂ ಉಪಾಧ್ಯಕ್ಷರಾದ ಎನ್.ಬಿ ವಿರೂಪಾಕ್ಷ, ಜೆ.ಡಿ.ಎಸ್ ಅಧ್ಯಕ್ಷರಾದ ಪುಟ್ಟಸ್ವಾಮಪ್ಪ, ಮಾ.ತಾ. ಪಂ ಸದಸ್ಯರಾದ ಜವರೇಗೌಡ, ಉಪನ್ಯಾಸಕರಾದ ಎನ್. ಆರ್ ಕಾಂತರಾಜು, ಎಇಇ. ಕೆಇಬಿ ದೇವರಾಜು, ಗುತ್ತಿಗೆದಾರರು ಕುಮಾರ್, ಪಶು ಇಲಾಖೆ ಎನ್.ಎಲ್ ವಿಶ್ವನಾಥ್ , ಎನ್,ಎಲ್ ಗಣೇಶ್, ಮುಖ್ಯ ಅತಿಥಿಗಳು, ಮುಖಂಡರು, ಸದ್ಯಸರು ಇತರರು ಪಾಲ್ಗೊಳ್ಳಲಿದ್ದಾರೆ.



## ರೈತರಿಗೆ ಒಂದು ದಿನದ ಕೃಷಿ ಕಾರ್ಯಾಗಾರ



**ಮಂಡ್ಯ:** ಸಂಪೂರ್ಣ ಸಾವಯವ ಕೃಷಿಕರ ಸಂಘ ಮಳವಳ್ಳಿ ಇವರ ವತಿಯಿಂದ ಮಾರ್ಚ್ 6 ರ ಶುಕ್ರವಾರ ಬೆಳಿಗ್ಗೆ 10:00 ಗಂಟೆಗೆ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ರೈತರಿಗೆ ಒಂದು ದಿನದ ಕೃಷಿ ಕಾರ್ಯಾಗಾರ ಏರ್ಪಡಿಸಲಾಗಿದೆ ಎಂದು ಕೃಷಿಕರ ಸಂಘದ ಅಧ್ಯಕ್ಷ ಎಂ.ಎನ್.ಮಹೇಶ್ ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ?ಅಡಗಲಿ ರಾಸಾಯನಿಕ ಗೊಬ್ಬರ ಅಮೃತ ವಾಗಲಿ ಕೊಟ್ಟಿಗೆ ಗೊಬ್ಬರ? ಎಂಬ ಘೋಷವಾಕ್ಯದೊಂದಿಗೆ ಸಾವಯವ ಕೃಷಿ ಮತ್ತು ಸಾಂಪ್ರದಾಯಿಕ ಕೃಷಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಸಣ್ಣ ಪರಿವರ್ತನೆ ಉಂಟುಮಾಡಲು ಹಾಗೂ ದೇಶಿ ತಳಿ ಸಂರಕ್ಷಿಸಲು ರೈತರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಇದರ ಜೊತೆಗೆ ಭೂಮಿಯ ಫಲವತ್ತತೆ ಹೆಚ್ಚಿಸಲು ?ನಮ್ಮ ನಿಮ್ಮೆಲ್ಲರ ನಡೆ ಸಾಂಪ್ರದಾಯಿಕ ಕೃಷಿಯ ಕಡೆ? ಎನ್ನುತ್ತಾ ?ಮನೆಗೊಂದು ಹಳ್ಳಿಕಾರ್ ಹಸು, ಊರಿಗೊಂದು ಹಳ್ಳಿಕಾರ್ ಹೋರಿ? ಎಂಬ ಸಂಕಲ್ಪದಿಂದ ಜಿಲ್ಲೆಯನ್ನು ರಾಸಾಯನಿಕ ಮುಕ್ತ ಜಿಲ್ಲೆಯನ್ನಾಗಿಸಲು ಈ ಕಾರ್ಯಾಗಾರ ಆಯೋಜಿಸುತ್ತಿದ್ದು 1500ಕ್ಕೂ ಹೆಚ್ಚು ರೈತರು ಭಾಗವಹಿಸುತ್ತಿದ್ದಾರೆ ಎಂದರು.

ಈ ಕಾರ್ಯಾಗಾರದ ದಿವ್ಯ ಸಾನಿಧ್ಯವನ್ನು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥಸ್ವಾಮೀಜಿ ವಹಿಸಲಿದ್ದು, ಮಹಾರಾಷ್ಟ್ರದ ಕೊಲ್ಲಾಪುರದ ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಲಿದ್ದು, ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಘನ ಉಪಸ್ಥಿತಿ ಇರಲಿದೆ.

ಕೃಷಿ ಬೆಲೆ ಆಯೋಗದ ನಿವೃತ್ತ ಅಧಿಕಾರಿ ಅಶೋಕ ದಳವಾಯಿ ಹಾಗೂ ಭಾರತ ಸರ್ಕಾರ ಗ್ರಾಮೀಣ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ರಾಜೇಶ್ವರಿ. ಎಸ್.ಎಂ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ಕೃಷಿಕರು ಕಾರ್ಯಾಗಾರದ ಸದುಪಯೋಗ ಪಡೆಯಬೇಕೆಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಚಿಕ್ಕಣ್ಣ, ಸಹ ಕಾರ್ಯದರ್ಶಿ ಶಿವಕುಮಾರ್, ಸದಸ್ಯರಾದ ಸುವರ್ಣ, ಅಪ್ಪಾಜಿ, ಕೆಂಪರಾಜು ಹಾಗೂ ದಿನೇಶ್ ಇದ್ದರು

## ಕೆ.ಆರ್.ಶ್ಯಾಮಸುಂದರ್ ಮತ್ತು ನಿರ್ದೇಶಕ ಎಂ.ಎಸ್.ನರಸಿಂಹ ರವರಿಗೆ ಸನ್ಮಾನ



**ಮೈಸೂರು:** ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಲಿ. ನ ಅಧ್ಯಕ್ಷ ಕೆ.ಆರ್. ಶ್ಯಾಮಸುಂದರ್ ಮತ್ತು ನಿರ್ದೇಶಕ ಎಂ.ಎಸ್.ನರಸಿಂಹ ಅವರನ್ನು ಕರುನಾಡ ದೀಪ ಸೇವಾ ಟ್ರಸ್ಟ್ ವತಿಯಿಂದ ಮೈಸೂರಿನಲ್ಲಿ ಆಯೋಜಿಸಿದ್ದ ವಿವಿಧ ಕ್ಷೇತ್ರಗಳ ನಾಡಿನ ಸಾಧಕರುಗಳಿಗೆ ಅಭಿನಂದನಾ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ದ್ವಯ ಸಿದ್ಧಾಂತ ಪೀಠದ ಶ್ರೀ ಧನುರ್ ದಾಸ ರಾಮಾನುಜ ಜೀಯರ್ ಸ್ವಾಮಿಗಳು, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಜಿ ಎಸ್ ಟಿ ಅಪೀಲು ನ್ಯಾಯಾಧಿಕರಣ ತಾಂತ್ರಿಕ ಸದಸ್ಯ ಡಿ.ಜಗನ್ನಾಥ್ ಸಾಗರ್, ಡಿ ವೈ ಎಸ್ ಪಿ ಆರ್.ಶ್ರೀಕಾಂತ್, ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್, ಮೈಸೂರು, ಮಂಡ್ಯ ಹಾಗೂ ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಎಸ್.ಆರ್.ನಾರಾಯಣರಾವ್ ಇದ್ದರು.

## ಗೀತನಮನ ಹಾಗೂ ಪುಸ್ತಕಗಳ ಬಿಡುಗಡೆ ಸಮಾರಂಭ

**ಮಂಡ್ಯ:** ಇಲ್ಲಿನ ಕರ್ನಾಟಕ ಸಂಘ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದ ವತಿಯಿಂದ ಹಾಗೂ ಕೆವಿ ಶಂಕರಗೌಡ ಅಧ್ಯಯನ ಪೀಠದ ಸಹಯೋಗದಲ್ಲಿ ನಾಳೆ(ಮಾ.4) ರಂದು ಶಂಕರ ಸಂಸ್ಮರಣೆ -36 ಪ್ರಯುಕ್ತ ಶಂಕರಗೌಡರ ಕುರಿತ ಗೀತನಮನ ಹಾಗೂ ಪುಸ್ತಕಗಳ ಬಿಡುಗಡೆ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ಸಂಘದ ಸಂಪನ್ಮೂಲ ವ್ಯಕ್ತಿ, ಚಿಂತಕ ಡಾ.ಎಸ್ ಬಿ ಶಂಕರಗೌಡ ತಿಳಿಸಿದರು.

ಅಂದು ಬೆಳಗ್ಗೆ 11:00 ಗಂಟೆಗೆ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆಯಲಿರುವ ಸಮಾರಂಭದ ಅಧ್ಯಕ್ಷತೆಯನ್ನು ಜನತಾ ಶಿಕ್ಷಣ ಟ್ರಸ್ಟ್ ನಿರ್ದೇಶಕ ಡಾ.ರಾಮಲಿಂಗಯ್ಯ ವಹಿಸಲಿದ್ದು, ಮಹಿಳಾ ಸರ್ಕಾರಿ ಕಾಲೇಜಿನ ಸಹಪ್ರಾಧ್ಯಾಪಕ ಡಾ.ಎಸ್.ಶಿವರಾಮು ಶಂಕರಗೌಡ ಸಂಸ್ಮರಣೆ ಮಾಡುವರು ಇದೇ ಸಂದರ್ಭದಲ್ಲಿ ಪ್ರೊ||ಜಯಪ್ರಕಾಶಗೌಡರ ಎರಡು ಕೃತಿಗಳಾದ ಜನತಾ-70 (ಎಪ್ಪತ್ತರ ಹಾದಿಯಲ್ಲಿ ಮಂಡ್ಯ ಜನತಾ ಶಿಕ್ಷಣ ಸಂಸ್ಥೆ) ಹಾಗೂ ನೆನಪು ಮಾಸುವ ಮುನ್ನ (ವ್ಯಕ್ತಿ ಚಿತ್ರ ವಿಹಾರ) ಕೃತಿಗಳನ್ನು ಮೈಸೂರಿನ ವಿಶ್ರಾಂತ ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ ಬಿಡುಗಡೆ ಮಾಡುವರು. ಕೆ ವಿ ಶಂಕರಗೌಡ ಸಂಸ್ಮರಣೋತ್ಸವ ಅಂಗವಾಗಿ ಗಾಮನಹಳ್ಳಿ ಸ್ವಾಮಿ ಮತ್ತು ತಂಡ ಕೆ ವಿ ಶಂಕರಗೌಡರನ್ನು ಕುರಿತ ಗೀತೆಗಳ ಗೀತಗಾಯನ ನಡೆಸಿಕೊಡಲಿದೆ.ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ||ಜಯಪ್ರಕಾಶಗೌಡ ಉಪಸ್ಥಿತರಿರುವರು ಎಂದು ತಿಳಿಸಿದರು.




ಮಾರ್ಚ್ 6 ರಂದು 2 ನೇ ವರ್ಷದ ಜೆಪಿ ಪ್ರಶಸ್ತಿ ಪ್ರದಾನ ಸಮಾರಂಭ

ಕರ್ನಾಟಕ ಸಂಘದ ವತಿಯಿಂದ ಮಾರ್ಚ್ 6 ರ ಶುಕ್ರವಾರ ಸಂಜೆ 5.30 ಕ್ಕೆ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಎರಡನೇ ವರ್ಷದ ಪ್ರೊ||ಜಯಪ್ರಕಾಶಗೌಡ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಪ್ರಾಂಶುಪಾಲ ಎಸ್.ಬಿ.ಶಂಕರಗೌಡ ತಿಳಿಸಿದರು. ಪ್ರಸ್ತುತ ಕರ್ನಾಟಕ ಸಂಘದ ಅಧ್ಯಕ್ಷರಾಗಿರುವ ಪ್ರೊ||ಡಾ.ಬಿ.ಜಯಪ್ರಕಾಶಗೌಡ ಅವರು ಸಾಹಿತ್ಯ,ಸಂಸ್ಕೃತಿ, ರಂಗಭೂಮಿ, ಸಂಶೋಧನೆ,ಸಂಘಟನೆ ಹೀಗೆ ಹಲವು ರಂಗಗಳಲ್ಲಿ ತೊಡಗಿಸಿಕೊಂಡು ನಾಡಿನ ಗಮನ ಸೆಳೆದಿದ್ದಾರೆ.ಇವರ ಹೆಸರಿನಲ್ಲಿ ಕೊಡಮಾಡುವ ರಂಗ ಸಂಘಟಕ ಪ್ರಶಸ್ತಿಯನ್ನು ಬೆಂಗಳೂರಿನ ಶ್ರೀನಿವಾಸ ಜಿ ಕಪ್ಪಣ್ಣ ಅವರಿಗೆ ಹಾಗೂ ರಂಗಕರ್ಮಿ ಪ್ರಶಸ್ತಿಯನ್ನು ಬೆಂಗಳೂರಿನ ರಂಗಕರ್ಮಿ ಶಶಿಧರ್ ಭಾರಿಘಾಟ್ ಅವರಿಗೆ 50,000 ರೂ. ನಗದು ಹಾಗೂ ಪ್ರಶಸ್ತಿ ಫಲಕದೊಂದಿಗೆ ಪ್ರದಾನ ಮಾಡಲಾಗುವುದು ಎಂದು ವಿವರಿಸಿದರು. ಈ ಸಮಾರಂಭದ ದಿವ್ಯ ಸಾನಿಧ್ಯವನ್ನು ಆದಿಚುಂಚನಗಿರಿ ಕ್ಷೇತ್ರದ ಪೀಠಾಧ್ಯಕ್ಷ ಡಾ.ಶ್ರೀ/ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸಾನಿಧ್ಯವನ್ನು ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ ವಹಿಸಲಿದ್ದಾರೆ. ಉದ್ಯಮಿಗಳಾದ ವೆಂಕಟರಮಣಗೌಡ(ಸ್ಟಾರ್ ಚಂದ್ರು) ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು,ಆಂಧ್ರಪ್ರದೇಶದ ಮುಖ್ಯ ಆಯುಕ್ತ ಜಯರಾಮ್ ರಾಯಪುರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಈ ಸಮಾರಂಭದಲ್ಲಿ ಜಯಪ್ರಕಾಶ್‌ಗೌಡ ದಂಪತಿಗಳು ಉಪಸ್ಥಿತರಿರುವರು ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಲೋಕೇಶ್ ಚಂದಗಾಲು, ನಿರ್ದೇಶಕರಾದ ಮಂಜುಳಾ ಉದಯಶಂಕರ್, ಎಚ್.ಬಿ. ನಾಗಪ್ಪ ಹನಕೆರೆ, ಬಾಲಕೃಷ್ಣ ಹಾಗೂ ವತ್ಸಲಾ ಹಾಜರಿದ್ದರು.

## ಕದಿರೆ ಹುಣ್ಣಿಮೆ ಉತ್ಸವ ಮಾ.3, 4

**ಬರಗೂರು:** ಶಿರಾ ತಾಲೂಕು ಗೋಪಿಕುಂಟೆ ಗ್ರಾಮದ ಗ್ರಾಮ ದೇವತೆ ಶ್ರೀಲಕ್ಷ್ಮಿ ದೇವಿ ಮತ್ತು ಶ್ರೀಲಕ್ಷ್ಮಿ ನರಸಿಂಹ ಸ್ವಾಮಿ ದೇವಾಲಯದಲ್ಲಿ ಕದಿರೆ ಹುಣ್ಣಿಮೆ ಉತ್ಸವ ಮಾ.3 ಮತ್ತು 4 ರಂದು ನೆರವೇರಲಿದೆ ಎರಡು ದಿನಗಳ ಕಾಲ ಉತ್ಸವಗಳನ್ನ ಆಚರಣೆ ಮಾಡಲಿಕ್ಕೆ ಗೌಡ್ರು ಹಾಗೂ ಯಜಮಾನ್ರು ಪೂಜಾರಿ ಕೈವಾಡಸ್ತರು ನಿಗದಿಪಡಿಸಿ ವೈಭವ ಉತ್ಸವ ನೆರವೇರಿಸಲು ಸಹಕಾರಿಯಾಗಿದ್ದಾರೆ

ಮಾರ್ಚ್ 3 ರ ಬೆಳಿಗ್ಗೆ 10 ಗಂಟೆಗೆ ಅಕ್ಕಿ ಮೀಸಲು ದೇವತಾ ಉತ್ಸವಗಳು ಗಣಪತಿ ಪೂಜೆ ಗಂಗಾಪೂಜೆ ಉತ್ಸವ ನೆರವೇರುವುದು.

ತಾಂಬೂಲ, ಕಾಯಿ ಮತ್ತು ಹೂವಿನ ಹಾರಗಳಿಂದ ದೇವಿಗೆ ಅಲಂಕರಿಸುವುದು, ಮಾ.5 ರಂದು ಬೆಳಿಗ್ಗೆ 5 ಗಂಟೆಗೆ ಲಕ್ಷ್ಮಿ ದೇವರಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಂತರ 9 ಗಂಟೆಗೆ ಮಹಾಮಂಗಳಾರತಿ ಅನ್ನ ಸಂತರ್ಪಣೆ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿವೆ ಕದಿರೆ ಹುಣ್ಣಿಮೆ ಉತ್ಸವದಲ್ಲಿ ಪಾಲ್ಗೊಳ್ಳುವಂತೆ ಉತ್ಸವ ಸಮಿತಿ ತಿಳಿಸಿದೆ

# ಮಹಾಪ್ರಸಾದಿ ಶರಣ ಬಿಬ್ಬಿಬಾಚಯ್ಯನವರು

ಉಪೇಕ್ಷಿತ ವಚನಕಾರರು



| ವೀಣಾ ಹೇಮಂತ್‌ಗೌಡ ಪಾಟೀಲ್

ಪ್ರಸಾದ ಹಂಚುವುದನ್ನು ಕಾಯಕವನ್ನಾಗಿಸಿಕೊಂಡಿದ್ದ ಮಹಾಪ್ರಸಾದಿ ಶರಣ ಬಿಬ್ಬಿ ಬಾಚಯ್ಯನವರು ಕರ್ನಾಟಕ ರಾಜ್ಯದ ಗಡಿ ಜಿಲ್ಲೆಯಾದ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಗೊಬ್ಬೂರು ಗ್ರಾಮದವರಾಗಿದ್ದು ಕಾಮನ ಹುಣ್ಣಿಮೆಯ ದಿನ ಜನಿಸಿದರು. ಮೂಲದಲ್ಲಿ ಬ್ರಾಹ್ಮಣರಾದರೂ ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಕಲ್ಯಾಣಕ್ಕೆ ತೆರಳಿ ಬಸವಣ್ಣನವರಿಂದ ಲಿಂಗ ದೀಕ್ಷೆಯನ್ನು ಪಡೆದು ಶಿವಶರಣರಾದ ವ್ಯಕ್ತಿ ಬಿಬ್ಬಿ ಬಾಚಯ್ಯ 770 ಅಮರ ಗಣಂಗಳಲ್ಲಿ ಒಬ್ಬರಾಗಿದ್ದಾರೆ.

'ಏಣಾಂಕಧರ ಸೋಮೇಶ್ವರ' ಎಂಬ ಹೆಸರಿನಲ್ಲಿ ಸುಮಾರು 102 ವಚನಗಳು ಲಭ್ಯವಾಗಿವೆ. 23 ಬೆಡಗಿನ ವಚನಗಳು ಇವೆ.

ತೆಲುಗಿನ ಬಸವ ಪುರಾಣ, ಶಿವ ತತ್ವ ಚಿಂತಾಮಣಿ, ಭೈರವೇಶ್ವರ ಕಾವ್ಯ, ಬಸವೇಶ್ವರ ಪುರಾಣದ ಕಥಾಸಾಗರ, ಬೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಹಾಗೂ ಪಂಚಯ್ಯನ ಭಕ್ತಿ ರಸ ಸೋನೆ ಕೃತಿಗಳಲ್ಲಿ ಬಾಚಯ್ಯನವರ ಕುರಿತು ಉಲ್ಲೇಖಗಳನ್ನು ನಾವು ಕಾಣಬಹುದು.

ಬಿಬ್ಬಿ ಬಾಚಯ್ಯನವರು ಪ್ರಸಾದಿ ಸ್ಥಳದಲ್ಲಿ ಅಗ್ರಸ್ಥಾನವುಳ್ಳವರಾಗಿದ್ದರು ಎಂಬ ಸಂಗತಿ ಚೆನ್ನಬಸವಣ್ಣನವರ ವಚನದಿಂದ ಅರಿವಾಗುತ್ತದೆ.

**ಗುರುಪ್ರಸಾದಿ ಗುರುಭಕ್ತಯ್ಯನಾದರೇ,**
**ಲಿಂಗ ಪ್ರಸಾದಿ ಪ್ರಭುದೇವನಾದರೆ**
**ಜಂಗಮ ಪ್ರಸಾದಿ ಬಸವಣ್ಣನಾದರೆ**

ಪ್ರಸಾದ ಪ್ರಸಾದಿ ಬಿಬ್ಬಿ ಬಾಚಯ್ಯ ಎಂಬ ವಚನದ ಸಾಲುಗಳಲ್ಲಿ ನಮಗೆ ಅರಿವಾಗುತ್ತದೆ.

ಬಾಚಯ್ಯನವರು ತಮ್ಮ ಕಾಯಕದಲ್ಲಿ ನಿಷ್ಠೆಯನ್ನು ಹೊಂದಿದ್ದು ಮಹಾಪ್ರಸಾದಿ ಎಂದು ಕರೆಸಿಕೊಂಡಿದ್ದರು. ತಮ್ಮ ಎಲ್ಲಾ ವಚನಗಳಲ್ಲಿ ಕ್ರಿಯಾ ಜ್ಞಾನ ಸಮರ್ಪಣ ಸ್ತಲ, ಐಕ್ಯಾನುಭಾವ ಲಿಂಗಸ್ಥಲ, ಅಂಗಲಿಂಗ ಸ್ಥಲ ಸಮರ್ಪಣ, ಸಮರ್ಪಣ ಸರ್ವಭಾವ ಸ್ಥಲ, ಐಕ್ಯ ಅನುಭಾವ ಸ್ಥಲ, ಅಂಗಭಾವ ಜ್ಞಾನಲೇಪ ಸ್ಥಲ ಎಂಬ ಆರು ಸ್ಥಲಗಳಲ್ಲಿ ಸಮಾವೇಶಗೊಳಿಸಿದ್ದನ್ನು ನಾವು ನೋಡಬಹುದು.

ಗಾತ್ರದಲ್ಲಿ ಅತ್ಯಂತ ಚಿಕ್ಕವಾಗಿರುವ ಅವರ ವಚನಗಳು ಅಭಿವ್ಯಕ್ತಿಯಲ್ಲಿ ಸರಳತೆ ಹಾಗೂ ತೀವ್ರ ಪರಿಣಾಮಗಳನ್ನು ಹೊಂದಿದೆ. ಸಹಜವಾಗಿಯೇ ಪ್ರಸಾದಿ ಸ್ಥಲದಲ್ಲಿ ನಿಂತ ಬಾಚಯ್ಯನವರು ತಮ್ಮ ಎಲ್ಲ ವಚನಗಳಲ್ಲಿ ತಾವು ನಿಂತ ಸ್ಥಲದ ವಿಷಯವನ್ನು ವಿಶೇಷವಾಗಿ ಪ್ರತಿಪಾದಿಸಿದ್ದಾರೆ

ಬಸವಣ್ಣನ ಪ್ರಸಾದವ ಕೊಂಡ ಕಾರಣ
ಎನಗೆ ಭಕ್ತಿ ಸಾಧ್ಯವಾಯಿತು
ಚನ್ನಬಸವಣ್ಣನ ಪ್ರಸಾದವ ಕೊಂಡ ಕಾರಣ
ಎನಗೆ ಜ್ಞಾನ ಸಾಧ್ಯವಾಯಿತು
ಪ್ರಭುದೇವರ ಪ್ರಸಾದವ ಕೊಂಡ ಕಾರಣ
ಏನಗೆ ವೈರಾಗ್ಯ ಸಾಧ್ಯವಾಯಿತು



ಇಂತಿ ಮೂವರು ಒಂದೊಂದು ಕೊಟ್ಟ ಕಾರಣ
ಎನಗೆ ಸರ್ವವೂ ಸಾಧ್ಯವಾಯಿತು

ಏಣಾಂಕಧರ ಸೋಮೇಶ್ವರ ನಿಮ್ಮ ಶರಣರೆನ್ನ ಮಾತಾಪಿತರು
ಅಣ್ಣ ಬಸವಣ್ಣ, ಅವಿರಳ ಜ್ಞಾನಿ ಚನ್ನಬಸವಣ್ಣ ಅಲ್ಲಮ ಪ್ರಭುಗಳು ಇವರ ಪ್ರಸಾದದ ಫಲವಾಗಿ ತಾವು ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಹೊಂದಲು ಸಾಧ್ಯವಾಯಿತು ಎಂದು ಬಾಚಯ್ಯನವರು ನೆನೆದಿದ್ದಾರೆ.

ಕಾಯಕಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದ ವರು ಕಾಯಕದಲ್ಲಿ ಮೇಲು ಕೀಳು ಎಂಬುವುದಿಲ್ಲ ಎಂದು ಹೇಳುತ್ತಿದ್ದರು. ಅದರಲ್ಲೂ ಮಹಾಮನೆಯ ಅನ್ನಪ್ರಸಾದ ಎಂದೂ ಹಾಳಾಗಬಾರದು, ಪೋಲಾಗಬಾರದು ಎಂಬ ನಿಟ್ಟಿನಲ್ಲಿ ಅವರು ಅನ್ನಪ್ರಸಾದವನ್ನು ಉಣ ಬಡಿಸುವುದರ ಜೊತೆಗೆ ಪ್ರಸಾದದ ಮಹತ್ವವನ್ನು ತಿಳಿಸುವುದು ಅವರ ಕಾಯಕವಾಗಿತ್ತು.

**ತಮ್ಮ ಮತ್ತೊಂದು ವಚನದಲ್ಲಿ ಬಾಚಯ್ಯನವರು**

ಇಷ್ಟ ಲಿಂಗಕ್ಕೆ ದೃಷ್ಟಾರ್ಪಿತ, ಪ್ರಾಣ ಲಿಂಗಕ್ಕೆ ತೃಪ್ತಿ
ಅರ್ಪಿತ,ಮಹಾಜ್ಞಾನ ಘನ ಲಿಂಗಕ್ಕೆ ಪರಮ ಪರಿಣಾಮವೇ ಅರ್ಪಿತ
ಇಂತೀ ತ್ರಿವಿಧ ಅರ್ಪಣದಲ್ಲಿ ಸುಚಿತ್ತನಾಗಿರಬೇಕು ಏಣಾಂಕಧರ ಸೋಮೇಶ್ವರ ಲಿಂಗವನರಿರುವುದಕ್ಕೆ ಎಂದು ಹೇಳಿದ್ದಾರೆ.

ಲಿಂಗ ಭಾವವನ್ನು ಅರಿಯಲು ಸ್ಥೂಲ, ಸೂಕ್ಷ್ಮ ಕಾರಣದಲ್ಲಿ ಇಷ್ಟ,ಪ್ರಾಣ, ಭಾವವನ್ನು ಸಮರ್ಪಿಸಿ ತ್ರಿವಿಧದಲ್ಲೂ ಶುದ್ಧವಾಗಿರಬೇಕು ಎಂಬ ಭಾವವನ್ನು ಅವರು ವ್ಯಕ್ತಪಡಿಸಿದ್ದಾರೆ

ಮುಂದೆ ಕಲ್ಯಾಣದಿಂದ ತಮ್ಮ ಆತ್ಮೀಯ ಸ್ನೇಹಿತ ಚನ್ನವೀರ ಶರಣರೊಂದಿಗೆ ರಾಯಚೂರು ಜಿಲ್ಲೆಗೆ ಮರಳಿ ಬರುವ ಬಾಚಯ್ಯನವರು ಇಲ್ಲಿಯೂ ಕೂಡ ಶರಣರು ಒಕ್ಕು ಮಿಕ್ಕ ಪ್ರಸಾದವನ್ನು ಮಹಾಲಿಂಗ ಪ್ರಸಾದವೆಂದು ಅತ್ಯಂತ ಶ್ರದ್ಧಾ ಭಕ್ತಿಯಿಂದ ಬಂಡಿಯಲ್ಲಿ ತುಂಬಿಸಿಕೊಂಡು ಅದನ್ನು ಸಮಾಜದ ದೀನ, ದಲಿತ, ದುಃಖಿತ ವರ್ಗದವರಿಗೆ ಹಂಚುತ್ತಿದ್ದರು. ಹಾಗೆ ಪ್ರಸಾದವನ್ನು ಒಯ್ಯುವಾಗ ತಮ್ಮ ಬಂಡಿಯನ್ನು ತೊಳೆದು ಸ್ವಚ್ಛಗೊಳಿಸಿ ರುದ್ರಾಕ್ಷಿ ಗಂಟೆಗಳಿಂದ ಬಂಡಿಯನ್ನು ಅಲಂಕರಿಸಿ, ಎತ್ತಿನ ಕೊರಳಿಗೆ ಗೆಜ್ಜೆಗಳನ್ನು ಕಟ್ಟಿ ಜಲ್ ಜಲ್ ಎನಿಸುತ್ತ ಶಿವನಾಮಸ್ಮರಣೆ ಮಾಡುತ್ತಾ ಪ್ರಸಾದವನ್ನು ಕೊಂಡೊಯ್ಯುತ್ತಿದ್ದರು.

ಒಂದೊಮ್ಮೆ ಹೀಗೆ ಪ್ರಸಾದವನ್ನು ಒಯ್ಯುತ್ತಿರುವಾಗ ಅದರ ಮೇಲೆ ಹೊದಿಸಿದ ಬಿಳಿ ವಸ್ತ್ರವು ಹಾರಿ ಹೋದಾಗ ಅಲ್ಲಿನ ವೈದಿಕರು ಬಂಡಿಯನ್ನು ತಡೆದು ನಿಲ್ಲಿಸಿದರು. ಸತ್ತ ಶವದ ವಾಸನೆ ಬರುತ್ತಿರುವ ಆಹಾರದ ಮೇಲೆ ಸುಂದರ ಹೊದಿಕೆಯನ್ನು ಹೊಂದಿಸಿ ತಂದಿರುವ ನೀವು ಯಾರು ಎಂದು ಪ್ರಶ್ನಿಸಿ ಅಗ್ರಹಾರಕ್ಕೆ ಅವರ ಪ್ರವೇಶವನ್ನು ನಿರಾಕರಿಸಿದರು.

ಶರಣರ ಮಹಾಪ್ರಸಾದ ಎಂದು ಬಾಚಯ್ಯನವರು ಅದೆಷ್ಟೇ ಹೇಳಿದರೂ ಕೇಳದೆ ಬಂಡಿಯಲ್ಲಿದ್ದ ಆಹಾರವನ್ನು ಕೆಳಗೆ ಚೆಲ್ಲಿದ ಬ್ರಾಹ್ಮಣರ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಚೆಲ್ಲಿದ ಪ್ರಸಾದದ ಪ್ರತಿ ಅಗಳು ಬೆಂಕಿಯ ಕಿಡಿಗಳಾಗಿ ವ್ಯಾಪಿಸಿ ಇಡೀ ಅಗ್ರಹಾರವನ್ನು ಸುಡುತ್ತದೆ.

ಬೆಂಕಿಯಿಂದ ತಮ್ಮ ಮನೆಯಲ್ಲಿ ರಕ್ಷಿಸಿಕೊಳ್ಳಲು ಸಾಧ್ಯವಾಗದೆ ಶಿವಭಕ್ತರ ಮನೆಯನ್ನು ಆಶ್ರಯಿಸಿದ

ಬ್ರಾಹ್ಮಣ ಮಿತ್ರರು ಪ್ರಸಾದದ ಮಹತ್ವವನ್ನು ಅರಿತು ಬಾಚಯ್ಯ ಶರಣರ ಪಾದಕ್ಕೆರಗಿ ಕ್ಷಮೆ ಯಾಚಿಸುತ್ತಾರೆ. ಬಾಚಯ್ಯ ಶರಣರು ಶಿವ ನಾಮವನ್ನು ಸ್ಮರಣ ಮಾಡಿದಾಗ ಬ್ರಾಹ್ಮಣರ ಮನೆಗಳು ಮತ್ತೆ ಮೊದಲಿನಂತೆ ಆಗುತ್ತವೆ.

ಇದೀಗ ಗ್ರಾಮದ ಜನರು ಬಾಚಯ್ಯನವರನ್ನು ಗಬ್ಬೂರಿನಲ್ಲಿಯೇ ಉಳಿಸಿಕೊಳ್ಳುತ್ತಾರೆ ಎಂಬ ಕತೆಯನ್ನು ಪಾಲಕುರ್ಕಿ ಸೋಮನಾಥರ ಬಸವ ಪುರಾಣದಲ್ಲಿ ನಾವು ಕೇಳಬಹುದು.

ಬಿಬ್ಬಿ ಬಾಚಯ್ಯನವರು ಗಬ್ಬೂರಿನ ಕಟ್ಟೆಯ ಮೇಲೆ ಕುಳಿತು ಜನರಿಗೆ ಶರಣತತ್ವ ಬೋಧಿಸುತ್ತಿದ್ದ ಸ್ಥಳವನ್ನು ಇಂದಿಗೂ ಗೊಬ್ಬೂರಿನಲ್ಲಿ ನಾವು ಕಾಣಬಹುದು. ಅದೇ ಈಗಿನ ಅರ್ಪಣ ಕಟ್ಟೆ. ಅದೇ ಸ್ಥಳದಲ್ಲೇ ಶರಣ ಬಿಬ್ಬಿ ಬಾಚಯ್ಯನವರು ಲಿಂಗೈಕ್ಯರಾಗಿದ್ದಾರೆಂಬ ಪ್ರತೀತಿ ಇದೆ,

ಇಂದಿಗೂ ಸುತ್ತಮುತ್ತಲಿನ ಜನರು ಆ ದಾರಿಯಲ್ಲಿ ಹಾದು ತಮ್ಮ ಕೆಲಸಕ್ಕೆ ಹೋಗುವಾಗ ಬಾಚಯ್ಯ ಶರಣರ ಅರ್ಪಣ ಕಟ್ಟೆಗೆ ನಮಸ್ಕರಿಸಿಯೇ ತೆರಳುತ್ತಾರೆ, ಸುತ್ತಲೂ ಹೊಲಗಳಿಗೆ ಹೋಗಲು ಜನ ತಮ್ಮ ಪಾದರಕ್ಷೆಗಳನ್ನು ದೂರದಲ್ಲೇ ಬಿಟ್ಟು ಹೋಗುತ್ತಾರೆ, ಇಂದಿಗೂ ಅವರ ತತ್ವಾದರ್ಶಗಳು ಅರ್ಥಗರ್ಭಿತ ಹಾಗೂ ಬೆಡಗಿನ ವಚನಗಳಾಗಿದ್ದು ಅವುಗಳನ್ನು ಅರ್ಥೈಸಿಕೊಂಡರೆ ಶರಣ ಬಿಬ್ಬಿ ಬಾಚಯ್ಯನವರ ಜೀವನಾದರ್ಶದ ಅರಿವಾಗುತ್ತದೆ, ಅವರ ವಚನಗಳು ಸದಾ ನಮ್ಮನ್ನು ಜಾಗೃತಗೊಳಿಸುತ್ತವೆ,

ಶರಣ ಸಾಹಿತ್ಯದ ತಂಪೆರೆದ ಮಹಾಪ್ರಸಾದಿ ಶರಣ ಬಿಬ್ಬಿ ಬಾಚಯ್ಯನವರ ಜಯಂತಿಯನ್ನು ಪ್ರತಿವರ್ಷ ಹೋಳಿ ಹುಣ್ಣಿಮೆ ದಿನದಂದು ಆಚರಿಸಲಾಗುತ್ತದೆ. ಅಂತೆಯೇ ನಾಳೆ ಹೋಳಿ ಹುಣ್ಣಿಮೆಯನ್ನು ಆಚರಿಸುತ್ತಿರುವ ಈ ಸಮಯದಲ್ಲಿ ಮಹಾಪ್ರಸಾದಿ ಬಿಬ್ಬಿ ಬಾಚಯ್ಯನವರಿಗೆ ಪದ ನಮನವನ್ನು ಸಲ್ಲಿಸುವ

---

# ರಂಗುರಂಗಿನ ಹೋಳಿಹಬ್ಬ



**ಕೆಟ್ಟಭಾವನೆಗಳ ದಹನವಾಗಲಿ**
**ಕಪ್ಪುಬಿಳುಪಿನ ಕನಸುಗಳೆಲ್ಲ**
**ಅಂದದ ಬಣ್ಣಗಳಿಂದ ತುಂಬಿದ ನನಸಾಗಲಿ ಬದುಕು**
**ಬಣ್ಣಗಳಂತೆ**
**ಸುಂದರವಾಗಿರಲಿ.**



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಫಾಲ್ಗುಣ ಮಾಸದ ಶುಕ್ಲಪಕ್ಷದ ಪೌರ್ಣಮಿಯಂದು ಹೋಳಿಹಬ್ಬ ಅಥವಾ ಕಾಮನಹಬ್ಬ ಆಚರಿಸುತ್ತೇವೆ. ಉತ್ತರಭಾರತದಲ್ಲಿಈ ಹಬ್ಬಕ್ಕೆ ಹೆಚ್ಚಿನ ಮಹತ್ವವಿದೆ.ಹೋಳಿ ಹಬ್ಬ ?ಮ ದೇಶವಲ್ಲದೇ ಜಗತ್ತಿನ ಇತರ ರಾಷ್ಟ್ರಗಳಲ್ಲಿ ಜನಪ್ರೀಯಗಳ್ಳುತ್ತಿದೆ.

ಪುರಾಣಗಳಲ್ಲಿ ಹೋಲಿ– ಪುರಾಣಗಳಲ್ಲಿ ಉಲ್ಲೇಖವಿರುವ ಕಾಮದಹನದಲ್ಲಿ ತಾರಕಾಸುರನೆಂಬ ರಾಕ್ಷಸ ರಾಜ ಬ್ರಹ್ಮನ ವರಬಲದ ಸೊಕ್ಕಿನಿಂದ ಲೋಕದಲ್ಲಿ ಮೆರೆಯತೊಡಗಿದಾಗ ಆತನ ಉಪಟಳ ತಾಳಲಾರದೇ ಅವನ ಸಂಹಾರಕ್ಕೆ ದೇವತೆಗಳು ಉಪಾಯ ಮಾಡುತ್ತಾರೆ. ಶಿವನಿಗೆ ಜನಿಸಿದ ಏಳುದಿನದ ಮಗುವಿನಿಂದ ಮಾತ್ರ ತನಗೆ ಸಾವು ಎಂಬ ವರಬಲವೇ ಅವನ ಅಹಂಕಾರಕ್ಕೆ ಕಾರಣವಾಗಿತ್ತು. ಆದರೆ ಆ ಸಮಯದಲ್ಲಿ ಶಿವನು ದಕ್ಷಯಜ್ಞ ದಾಕ್ಷಾಯಣಿಯನ್ನು ಕಳೆದುಕೊಂಡು ಭೋಗಸಮಾಧಿಯಲ್ಲಿದ್ದ ಕಾರಣ ಮತ್ತೊಂದೆಡೆ ಶಿವೆಯು ಶಿವನ ಸಲುವಾಗಿ ತಪಸ್ಸು ಮಾಡುತ್ತಿದ್ದ ಕಾರಣ ಅವರಿಬ್ಬರೂ ಒಂದುಗೂಡುವಂತಿರಲಿಲ್ಲ. ದೇವತೆಗಳು ಕಾಮನನ್ನು( ಮನ್ಮಥ) ಮೊರೆಹೊಕ್ಕರು.ತನ್ನ ನಿರ್ನಾಮದ ಅರಿವಿದ್ದೂ ಲೋಕಕಲ್ಯಾಣಕ್ಕಾಗಿ ಕಾಮನು ತನ್ನ ಹೂಬಾಣದಿಂದ ಶಿವನನ್ನು ಬಡಿದೆಬ್ಬಿಸಿ ತಪೋಭಂಗ ಮಾಡುತ್ತಾನೆ. ಶಿವನು ಕೆರಳಿ ಮೂರನೇಯ ಕಣ್ಣಿನ ಕೋಪಾಗ್ನಿಗೆ ಕಾಮ ದಹನವಾಗುತ್ತಾನೆ.ಕಾಮನ ಪತ್ನಿ ಶಿವನನ್ನು ನಾನಾ ವಿಧವಾಗಿ ಬೇಡಿದರೂ ಕಾಮನು ನಿನ್ನ ಪತಿ ಅನಂಗನಾಗಿರುತ್ತಾನೆ ಆದರೆ ತನ್ನ ಪತ್ನಿಗೆ ಮಾತ್ರ ಶರೀರಿಯಾಗಿ ಕಾಣುತ್ತಾನೆ ಎಂದು ಅಭಯನೀಡಿದನೆಂದು ಪುರಾಣ ಕಥೆ ಹೇಳುತ್ತದೆ.ಈ ಘಟನೆ ನಡೆದದ್ದು ಫಾಲ್ಗುಣಮಾಸ ಪೌರ್ಣಿಮೆಯಂದು. ಆದ್ದರಿಂದ ಆ ದಿನವನ್ನು ಕಾಮನಹುಣ್ಣಿಮೆಯಾಗಿ ಆಚರಿಸಲ್ಪಡುತ್ತದೆ.

ನಾರದ ಪುರಾಣದಲ್ಲಿ ಇನ್ನೊಂದು ಕಥೆ ಬರುತ್ತದೆ. ತಾನೇ ದೇವರು ಎಂದು ತಿಳಿದು ಶ್ರೀಹರಿಯನ್ನು ಜಗನ್ನಿಯಾಮಕನೆಂದು ಪರಿಭಾವಿಸುವ ತನ್ನದೇ ಕರಳಕುಡಿ ಪ್ರಲ್ಹಾದನನ್ನು ಕೊಲ್ಲಲು ಹಿರಣ್ಯಕಶಪು ನಾನಾವಿಧದ ಪ್ರಯತ್ನ ಮಾಡಿಯೂ ವಿಫಲನಾಗಿ ಕೊನೆಗೆ ತನ್ನ ತಂಗಿ ಹೋಲಿಕಾಳ ಮೊರೆ ಹೋಗುತ್ತಾನೆ. ಅಣ್ಣನ ಆಜ್ಞೆಯಂತೆ ಹೋಲಿಕಾ ಬಾಲ ಪ್ರಲ್ಹಾದನನ್ನು ಹೊತ್ತುಕೊಂಡು ಅಗ್ನಿಕುಂಡ ಪ್ರವೇಶಿಸುತ್ತಾಳೆ.ಆಗ ವಸ್ತ್ರಹಾರಿಹೋಗಿ ಹೋಲಿಕಾಳ ದಹನವಾಗುತ್ತದೆ.ಪ್ರಲ್ಹಾದ ಬದುಕುಳಿಯುತ್ತಾನೆ.

ಮೇಲಿನ ಎರಡೂ ಪುರಾಣಕಥೆಗಳ ಪ್ರಕಾರ ಕೆಟ್ಟದ್ದನ್ನು ಸುಡುವದು,ಕಾಮಕ್ರೋದಾಧಿ ಅರಿಷಡ್ವರ್ಗಗಳನ್ನು ಅಗ್ನಿಯಲ್ಲಿ ಸುಟ್ಟು ಸದಾಚಾರವನ್ನು ರೂಡಿಸಿಕೊಳ್ಳುವದು ಅಸುರೀ ಶಕ್ತಿಗಳ ನಿರ್ನಾಮದ ದ್ಯೋತಕವಾಗಿ ಹೋಳಿಉತ್ಸವ ಆಚರಿಸುವ ಪದ್ಧತಿ ಬಂದಿದೆ.ಕೆಡುಕಿಗೆ ಯಾವತ್ತೂ ಸೋಲೇ ಕಾದಿದೆ ಎಂಬ ಸಂದೇಶ ಸಾರುವ ಹೋಲಿಹಬ್ಬ ಅಥವಾ ಕಾಮನಹಬ್ಬ ಸದುದ್ದೇಶದಿಂದ ಆಚರಿಸಲ್ಪಡುತ್ತದೆ.

ಆಚರಣೆ– ದೆಹಲಿಯಲ್ಲಿ ಅಂದಿನ ದಿನ ಹತ್ತು ತಲೆಯ ರಾವಣನನ್ನು ಬಿದಿರಿನಿಂದ ಮಾಡಿ ಅದಕ್ಕೆ ಹಳೇ ಬಟ್ಟೆ ಧರಿಸಿಸಿ ಗಣ್ಯರನ್ನೆಲ್ಲ ಕರೆದು ಅವರ ಸಮ್ಮುಖದಲ್ಲಿ ರಾವಣನ ಸಂಹಾರ ಮಾಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಊರಿನಲ್ಲಿ ಸಿಗುವ ಬೇಡದ ವಸ್ತುಗಳನ್ನು ಗುಡ್ಡೆ ಮಾಡಿ ರಾತ್ರಿ ಒಬ್ಬ ಹುಡುಗನಿಗೆ ಶಿಖಂಡಿಯ ವೇಷ ಹಾಕಿ ಅವನಿಂದ ಐದುಮನೆಯ ಭಿಕ್ಷೆ ಬೇಡಿಸಿ ಅವನಿಂದ ಬೇಡದ ವಸ್ತುಗಳಿಗೆ ಬೆಂಕಿ ಇಡಿಸುತ್ತಾರೆ.

ಅಂದಿನ ದಿನ ವಿವಿಧ ಬಣ್ಣಗಳಿಂದ ರಂಗಿನಾಟದನಂತರ ಅಭ್ಯಂಜನ ಸ್ನಾನ ಮಾಡಿ ದೇವರನ್ನು ಪ್ರಾರ್ಥಿಸಿ ವಿಶೇಷ ಅಡುಗೆ ತಯಾರಿಸಿ ಊಟಮಾಡುವರು.ಬೇಳೆಹೋಳಿಗೆ ಅಂದಿನ ವಿಶೇಷ.ಈ ರೀತಿ ಕಾಮನ ಹಬ್ಬ ಸಂಭ್ರಮದಿಂದ ಆಚರಿಸುವರು.ಬಡವ ಬಲ್ಲಿದ ಜಾತಿ ಧರ್ಮದ ಎಲ್ಲೆಡೆಯನ್ನು ಮೀರಿ ಕೂಡಿ ಬಾಳಿದರೆ ಸ್ವರ್ಗಸುಖ ಎಂಬ ತಾತ್ವಿಕ ನಿಲುವನ್ನು ಅಕ್ಷರಶಃ ಆಚರಣೆಗೇ ತರುವದೆ ಈ ಹೋಲಿಹಬ್ಬ.


**ಬಣ್ಣದ ಓಕುಳಿ**
**ಕೆಂಪು ಪ್ರೀತಿಯನ್ನು ಹೆಚ್ಚಲಿ**
**ಹಸಿರು ಗುರಿಯನ್ನು ಸಾಧಿಸಲಿ**
**ನೀಲಿ ನಂಬಿಕೆಯನ್ನು ರಕ್ಷಿಸಲಿ**
**ಕಿತ್ತಳೆ ಆರೋಗ್ಯ ಕಾಪಾಡಲಿ**
**ಹಳದಿ ಹರುಷವನ್ನು ಪರಿಚಯಿಸಲಿ**

ಎಲ್ಲ ಬಣ್ಣಗಳ ಮಿಶ್ರಣ ಬಿಳಿ ಸದಾ ಶಾಂತಿಯೊಂದಿಗೆ ಹೋಲಿ ಹಬ್ಬ ಆಚರಿಸೋಣ.ಶುಭವಾಗಲಿ.



---

# ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಖಾಸಗಿತನ:
# ಮರೆತ ಮೌಲ್ಯ, ಅಗತ್ಯವಾದ ಆಯ್ಕೆ




ಈಗ 2 –3 ದಶಕಗಳ ಹಿಂದೆ ಬದುಕು ಎಂಬುದು ನಮ್ಮೊಳಗೆ ನಡೆಯುವ ಪ್ರಕ್ರಿಯೆಯಾಗಿತ್ತು. ಇಂದು ಅದು ಎಲ್ಲರ ಮೊಬೈಲ್ ಪರದೆಯ ಮೇಲೆ ನಡೆಯುವ ಪ್ರದರ್ಶನವಾಗಿದೆ. ತಂತ್ರಜ್ಞಾನ, ವಿಶೇಷವಾಗಿ ಸಾಮಾಜಿಕ ಜಾಲತಾಣಗಳು, ಬದುಕಿನ ಅನೇಕ ಆಯಾಮಗಳನ್ನು ಸುಲಭಗೊಳಿಸಿವೆ ಎಂಬುದು ಸತ್ಯ. ಆದರೆ ಅದೇ ಸಮಯದಲ್ಲಿ, ಅವು ವ್ಯಕ್ತಿಯ ಖಾಸಗಿತನವನ್ನು ನಿಧಾನವಾಗಿ ಕುಗ್ಗಿಸುತ್ತಿವೆ ಎಂಬ ವಾಸ್ತವವೂ ಅಷ್ಟೇ ಗಂಭೀರ. ನಾವು ಏನು ಮಾಡುತ್ತೇವೆ ಎಂಬುದಕ್ಕಿಂತ, ಅದನ್ನು ಹೇಗೆ ತೋರಿಸುತ್ತೇವೆ ಎಂಬುದೇ ಮುಖ್ಯವಾಗುತ್ತಿರುವ ಕಾಲದಲ್ಲಿ ಬದುಕುತ್ತಿದ್ದೇವೆ.

ಸಂತೋಷ, ದುಃಖ, ಸಾಧನೆ, ಸೋಲು, ಸಂಬಂಧ, ನಿರ್ಧಾರ?ಎಲ್ಲವೂ ಹಂಚಿಕೊಳ್ಳಬೇಕಾದ ವಿಷಯಗಳಾಗಿವೆ ಎಂಬ ಅಲಿಖಿತ ನಿಯಮವನ್ನು ಸಾಮಾಜಿಕ ಜಾಲತಾಣಗಳು ನಿರ್ಮಿಸಿವೆ. ಹಂಚಿಕೊಳ್ಳದಿದ್ದರೆ ಅನುಮಾನ, ಹೇಳದಿದ್ದರೆ ದೂರ, ತೋರಿಸದಿದ್ದರೆ ಅಸ್ತಿತ್ವವಿಲ್ಲ ಎಂಬ ಭಾವನೆ ವ್ಯಕ್ತಿಯನ್ನು ಆವರಿಸುತ್ತಿದೆ. ಈ ಸ್ಥಿತಿಯಲ್ಲಿ ಖಾಸಗಿತನ ಎನ್ನುವುದು ಹಳೆಯ ಕಾಲದ ಸಂಪ್ರದಾಯದಂತೆ ಕಾಣಬಹುದು. ಆದರೆ ವಾಸ್ತವದಲ್ಲಿ, ಖಾಸಗಿತನವೇ ಇಂದಿನ ಯುಗದಲ್ಲಿ ಅತ್ಯಂತ ಅಗತ್ಯವಾದ ಮಾನಸಿಕ ರಕ್ಷಣಾ ಕವಚವಾಗಿದೆ.

**ಎಲ್ಲರೂ ಸ್ನೇಹಿತರಲ್ಲ: ಸಾಮಾಜಿಕ ಸಂಪರ್ಕ ಮತ್ತು ನಿಜವಾದ ಸಂಬಂಧಗಳ ವ್ಯತ್ಯಾಸ**

ಸಾಮಾಜಿಕ ಜಾಲತಾಣಗಳಲ್ಲಿ ಸಾವಿರಾರು ಸಂಪರ್ಕಗಳು ಕ್ಷಣದಲ್ಲಿ ಸೃಷ್ಟಿಯಾಗುತ್ತವೆ. ಆದರೆ ಆ ಸಂಪರ್ಕಗಳೆಲ್ಲವೂ ಸಂಬಂಧಗಳಲ್ಲ. ಲೈಕ್, ಕಮೆಂಟ್, ಶೇರ್‌ಗಳು ಸ್ನೇಹದ ಭಾಷೆಯಾಗಿರುವಾಗ, ನಿಜವಾದ ಹಿತೈಷಿತನ ಅಸ್ಪಷ್ಟವಾಗುತ್ತದೆ. ಎಲ್ಲರೂ ನಮ್ಮ ಬದುಕಿನ ಪ್ರೇಕ್ಷಕರಾಗುತ್ತಾರೆ; ಆದರೆ ಎಲ್ಲರೂ ನಮ್ಮ ಒಳಿತನ್ನು ಬಯಸುವವರಾಗಿರಲಾರರು.

ಈ ಭ್ರಮೆಯೇ ಖಾಸಗಿತನಕ್ಕೆ ಮೊದಲ ಬಿರುಕು. ಎಲ್ಲರ ಮುಂದೆ ಎಲ್ಲವನ್ನೂ ತೆರೆದಿಡುವ ಮನೋಭಾವ ವ್ಯಕ್ತಿಯನ್ನು ಎಚ್ಚರಿಕೆಯಿಂದ ದೂರ ಮಾಡುತ್ತದೆ. ಸಂಬಂಧಗಳಿಗೆ ಗಡಿ ಬೇಕು ಎಂಬ ಅರಿವು ಇಲ್ಲದಾಗ, ಬದುಕು ಅತಿಯಾಗಿ ಬಹಿರಂಗವಾಗಿ, ಅತಿಯಾಗಿ ಅಸುರಕ್ಷಿತವಾಗುತ್ತದೆ.



**ಸಾಮಾಜಿಕ ಜಾಲತಾಣ ; ವಿವರಣೆ ನೀಡಬೇಕಾದ ಬದುಕು:** ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತಿಯ ಬದುಕು ಸಾರ್ವಜನಿಕ ಚರ್ಚೆಯ ವಿಷಯವಾಗುತ್ತದೆ. ಒಂದು ಪೋಸ್ಟ್ ಹಾಕಿದ ಕ್ಷಣದಿಂದಲೇ, ಅಭಿಪ್ರಾಯಗಳು, ತೀರ್ಪುಗಳು, ಹೋಲಿಕೆಗಳು ಆರಂಭವಾಗುತ್ತವೆ. ಇದರಿಂದ ವ್ಯಕ್ತಿ ತನ್ನದೇ ಆದ ಆಯ್ಕೆಗಳಿಗೂ ನಿರಂತರವಾಗಿ ಸಮರ್ಥನೆ ನೀಡಬೇಕಾದ ಸ್ಥಿತಿಗೆ ತಲುಪುತ್ತಾನೆ.

ಖಾಸಗಿತನ ಇಲ್ಲದ ಬದುಕು, ವಿವರಣೆ ನೀಡುವ ಬದುಕಾಗುತ್ತದೆ. ಯಾವ ನಿರ್ಧಾರವೂ ಸಂಪೂರ್ಣವಾಗಿ ವೈಯಕ್ತಿಕವಾಗಿರದೆ, ಸಮಾಜದ ಒಪ್ಪಿಗೆಗೆ ಒಳಪಟ್ಟಂತೆ ಕಾಣುತ್ತದೆ. ಆದರೆ ಬದುಕು ಎಂದರೆ ಪ್ರತಿಯೊಂದು ಹೆಜ್ಜೆಗೂ ಉತ್ತರ ಬರೆಯುವ ಪರೀಕ್ಷೆ ಅಲ್ಲ. ಕೆಲವು ವಿಷಯಗಳು ಒಳಗೇ ಉಳಿದಾಗ ಮಾತ್ರ, ಅವು ವ್ಯಕ್ತಿಯನ್ನು ಗಟ್ಟಿಗೊಳಿಸುತ್ತವೆ.

**ಲೈಕ್‌ಗಳ ಅರ್ಥ ಮತ್ತು ಸಂತೋಷದ ವ್ಯಾಖ್ಯಾನ:** ಸಾಮಾಜಿಕ ಜಾಲತಾಣಗಳೊಂದಿಗೆ ಸಂತೋಷದ ಅರ್ಥವೇ ಬದಲಾಗಿದೆ. ಒಳಗಿನ ತೃಪ್ತಿಯ ಬದಲು, ಹೊರಗಿನ ಪ್ರತಿಕ್ರಿಯೆಗಳು ನಮ್ಮ ಮನಸ್ಥಿತಿಯನ್ನು ನಿರ್ಧರಿಸುತ್ತಿವೆ. ಹೆಚ್ಚು ಲೈಕ್ ಬಂದರೆ ಸಂತೋಷ, ಕಡಿಮೆಯಾದರೆ ಅನುಮಾನ. ಈ ಅವಲಂಬನೆ ಮನಸ್ಸನ್ನು ನಿಧಾನವಾಗಿ ದುರ್ಬಲಗೊಳಿಸುತ್ತದೆ.

ಖಾಸಗಿತನ ಈ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಎಲ್ಲವನ್ನೂ ಹಂಚಿಕೊಳ್ಳಬೇಕಿಲ್ಲ ಎಂಬ ಅರಿವು ವ್ಯಕ್ತಿಯನ್ನು ಹೊರಗಿನ ಮಾನ್ಯತೆಯ ಬಂಧನದಿಂದ ಮುಕ್ತಗೊಳಿಸುತ್ತದೆ. ಮೌನದಲ್ಲಿ ಬೆಳೆದ ಸಂತೋಷ, ಪರದೆಯ ಮೇಲಿನ ಮೆಚ್ಚುಗೆಗಿಂತ ಗಟ್ಟಿಯಾಗಿರುತ್ತದೆ.

**ಮಾನಸಿಕ ಆರೋಗ್ಯ ಮತ್ತು ನಿರಂತರ ಹೋಲಿಕೆ:**

ಸಾಮಾಜಿಕ ಜಾಲತಾಣಗಳು ಹೋಲಿಕೆಯನ್ನು ಸಹಜಗೊಳಿಸಿವೆ. ಇತರರ ಆಯ್ದ ಕ್ಷಣಗಳನ್ನು, ಸಂಪೂರ್ಣ ಬದುಕಿನಂತೆ ನೋಡುವ ಮನೋಭಾವ ವ್ಯಕ್ತಿಯಲ್ಲಿ ಅಸಮಾಧಾನ, ಆತಂಕ, ಅಸ್ಥಿರತೆಯನ್ನು ಹುಟ್ಟಿಸುತ್ತದೆ. ಈ ಹೋಲಿಕೆ ಸಂಸ್ಕೃತಿಯೇ ಮಾನಸಿಕ ಆರೋಗ್ಯದ ಮೇಲೆ ದೊಡ್ಡ ಹೊಡೆತ.

ಖಾಸಗಿತನ ಈ ಹೋಲಿಕೆಗೆ ತಡೆಗೋಡೆಯಾಗುತ್ತದೆ. ಎಲ್ಲವೂ ಸಾರ್ವಜನಿಕವಾಗದಿದ್ದಾಗ, ಸ್ಪರ್ಧೆ ಕಡಿಮೆಯಾಗುತ್ತದೆ. ಸ್ಪರ್ಧೆ ಕಡಿಮೆಯಾದಾಗ, ಮನಸ್ಸು ತನ್ನದೇ ಆದ ಗತಿಯಲ್ಲೇ ಸಾಗಲು ಆರಂಭಿಸುತ್ತದೆ. ಇದು ಆತ್ಮಸ್ಥೈರ್ಯಕ್ಕೆ ಅತ್ಯಂತ ಅಗತ್ಯ.

**ಮಾಹಿತಿ, ತಂತ್ರಜ್ಞಾನ ಮತ್ತು ಭದ್ರತೆ:** ಇಂದಿನ ಯುಗದಲ್ಲಿ ಮಾಹಿತಿ ಎಂದರೆ ಶಕ್ತಿ. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಪ್ರತಿಯೊಂದು ವಿವರ ಡೇಟಾವಾಗಿ ಉಳಿಯುತ್ತದೆ. ಅದು ಕೇವಲ ನೆನಪುಗಳಲ್ಲ; ಅದು ಭದ್ರತೆಗೆ ಸಂಬಂಧಿಸಿದ ವಿಷಯ.

ಖಾಸಗಿತನ ಎಂದರೆ ತಂತ್ರಜ್ಞಾನವನ್ನು ತಿರಸ್ಕರಿಸುವುದಲ್ಲ. ಅದು ತಂತ್ರಜ್ಞಾನವನ್ನು ವಿವೇಕಪೂರ್ವಕವಾಗಿ ಬಳಸುವ ಮನಸ್ಥಿತಿ. ಎಲ್ಲವನ್ನೂ ತಕ್ಷಣವೇ ಹಂಚಿಕೊಳ್ಳಬೇಕೆಂಬ ತವಕವನ್ನು ನಿಯಂತ್ರಿಸುವುದು ವೈಯಕ್ತಿಕ ಜವಾಬ್ದಾರಿಯ ಭಾಗವಾಗಿದೆ.

**ಸಂಬಂಧಗಳ ಮೇಲ್ಮೈತನ ಮತ್ತು ಖಾಸಗಿತನದ ಅಗತ್ಯ:** ಸಾಮಾಜಿಕ ಜಾಲತಾಣಗಳಲ್ಲಿ ಸಂಬಂಧಗಳು ಬಹುಸಾರಿ ಪ್ರದರ್ಶನದ ಭಾಗವಾಗುತ್ತವೆ. ಸಂಬಂಧಗಳ ಆಳಕ್ಕಿಂತ, ಅವು ಹೇಗೆ ಕಾಣಿಸುತ್ತವೆ ಎಂಬುದಕ್ಕೆ ಹೆಚ್ಚಿನ ಮಹತ್ವ ಸಿಗುತ್ತದೆ. ಇದರಿಂದ ಸಂಬಂಧಗಳು ಶಬ್ದಮಯವಾಗುತ್ತವೆ; ಆದರೆ ಅರ್ಥದಲ್ಲಿ ಕುಗ್ಗುತ್ತವೆ.

ಖಾಸಗಿತನ ಸಂಬಂಧಗಳಿಗೆ ನಿಜತ್ವವನ್ನು ತರುತ್ತದೆ. ಎಲ್ಲವನ್ನೂ ಸಾರ್ವಜನಿಕವಾಗಿ ತೋರಿಸುವ ಅಗತ್ಯವಿಲ್ಲದಾಗ, ಸಂಬಂಧಗಳು ಮೌನದಲ್ಲಿ ಬೆಳೆದು, ಬಲವಾಗುತ್ತವೆ. ನಂಬಿಕೆ ಮತ್ತು ಗೌರವ ಅಲ್ಲಿ ಸಹಜವಾಗಿ ಬೆಳೆಯುತ್ತವೆ.

**ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ಗಡಿ**

ಸಾಮಾಜಿಕ ಜಾಲತಾಣಗಳ ನಿರಂತರ ಹಾಜರಾತಿ ವ್ಯಕ್ತಿಯ ಸ್ವಾತಂತ್ರ್ಯವನ್ನು ಕುಗ್ಗಿಸುತ್ತದೆ. ಏನು ಹಂಚಿಕೊಳ್ಳಬೇಕು, ಹೇಗೆ ತೋರಿಸಬೇಕು ಎಂಬ ಅಲಿಖಿತ ನಿಯಮಗಳು ವ್ಯಕ್ತಿಯ ನಡೆ?ನಿಲುವನ್ನು ನಿಯಂತ್ರಿಸುತ್ತವೆ. ಖಾಸಗಿತನ ಈ ನಿಯಂತ್ರಣದಿಂದ ಮುಕ್ತಿ ನೀಡುತ್ತದೆ. ಗಡಿ ಹಾಕಿಕೊಳ್ಳುವುದು ದೂರ ಹೋಗುವುದು ಅಲ್ಲ; ಅದು ಆತ್ಮರಕ್ಷಣೆಯ ಒಂದು ವಿಧಾನ. ಆ ಗಡಿಯೊಳಗೆ ವ್ಯಕ್ತಿಯ ಸ್ವಾಭಿಮಾನ ಸುರಕ್ಷಿತವಾಗಿರುತ್ತದೆ.

**ಶಬ್ದದ ಯುಗದಲ್ಲಿ ಕಳೆದುಹೋಗುತ್ತಿರುವ ಮೌನ:** ಸಾಮಾಜಿಕ ಜಾಲತಾಣಗಳಲ್ಲಿ ಮೌನಕ್ಕೆ ಜಾಗವಿಲ್ಲ. ಪ್ರತಿಕ್ರಿಯೆ ನೀಡಬೇಕು, ತೋರಿಸಬೇಕು, ಮಾತನಾಡಬೇಕು ಎಂಬ ಒತ್ತಡವೇ ಸಾಮಾನ್ಯವಾಗಿದೆ. ಆದರೆ ಮೌನವೇ ಅನೇಕ ಬಾರಿ ಆತ್ಮಪರಿಶೀಲನೆಯ ಮೂಲ. ಖಾಸಗಿತನ ಮೌನಕ್ಕೆ ಮರಳಿ ಸ್ಥಾನ ನೀಡುತ್ತದೆ. ಎಲ್ಲವನ್ನೂ ಹೇಳಬೇಕಿಲ್ಲ ಎಂಬ ಅರಿವು ವ್ಯಕ್ತಿಯನ್ನು ಒಳಗಿನಿಂದ ಗಟ್ಟಿಗೊಳಿಸುತ್ತದೆ. ಮೌನದಲ್ಲಿಯೇ ಬದುಕಿನ ಅರ್ಥ ಸ್ಪಷ್ಟವಾಗುತ್ತದೆ.

ಸಾಮಾಜಿಕ ಜಾಲತಾಣಗಳು ನಮ್ಮ ಬದುಕಿನ ಭಾಗವಾಗಿರುವುದು ತಪ್ಪಲ್ಲ. ಆದರೆ ಅವು ನಮ್ಮ ಬದುಕನ್ನು ನಿರ್ಧರಿಸಲು ಆರಂಭಿಸಿದಾಗ ಸಮಸ್ಯೆ ಹುಟ್ಟುತ್ತದೆ. ಖಾಸಗಿತನ ಕಳೆದುಕೊಂಡ ಬದುಕು ಶಬ್ದದಲ್ಲಿ ಮುಳುಗುತ್ತದೆ; ಆದರೆ ಶಾಂತಿಯಲ್ಲಿ ಕೊರತೆ ಅನುಭವಿಸುತ್ತದೆ.

ಎಲ್ಲವನ್ನೂ ಪೋಸ್ಟ್ ಮಾಡಬೇಕಿಲ್ಲ.ಎಲ್ಲವನ್ನೂ ತೋರಿಸಬೇಕಿಲ್ಲ. ಎಲ್ಲರ ಒಪ್ಪಿಗೆಯೇ ಸಂತೋಷದ ಮಾನದಂಡವಲ್ಲ.

ಡಿಜಿಟಲ್ ಗದ್ದಲದ ನಡುವೆ, ಖಾಸಗಿತನವೇ ನಿಜವಾದ ಐಶ್ವರ್ಯ.

ಅದನ್ನು ಉಳಿಸಿಕೊಂಡವನೇ ನಿಜವಾಗಿ ಶ್ರೀಮಂತ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,